ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 15 ಶನಿವಾರ 2025

45

ಸಂಪುಟ: 45 | ಸಂಚಿಕೆ: 298 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಡಿಕೆಶಿಗೆ ಸಿಎಂ ಬಣ ಸವಾಲು


● ಡಿಕೆಶಿ ಸಿಎಂ ಆದರೆ ನಾವು ಅವರ ಕೈಕೆಳಗೆ ಕೆಲಸ ಮಾಡಲು ತಯಾರಿಲ್ಲ ● ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಚಿವ ರಾಜಣ್ಣ ಸ್ಪಷ್ಟನೆ ● ಸಿದ್ದರಾಮಯ್ಯ ಪೂರ್ಣಾವಧಿಗೆ ಮುಖ್ಯಮಂತ್ರಿ ಆದರೆ ಅಭ್ಯಂತರವಿಲ್ಲ; ಅವರ ಬದಲಾವಣೆ ಅನಿವಾರ್ಯವಾದರೆ ನೀವೇ ರಾಜ್ಯ ರಾಜಕಾರಣಕ್ಕೆ ಬನ್ನಿ ● ಶಿವಕುಮಾರ್ ನಾಯಕತ್ವಕ್ಕೆ 40ರಿಂದ 60 ಶಾಸಕರ ವಿರೋಧವಿದೆ; ಅವರು ಪಕ್ಷ ತೊರೆಯಲೂಬಹುದು!

ಬೆಂಗಳೂರು, ಫೆ.14(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ರಾಜ್ಯದ ಅಧಿಕಾರ ಚುಕ್ಕಾಣಿ ನೀಡಿದರೆ, ತಾವು ಅವರ ಕೈಕೆಳಗೆ ಕೆಲಸ ಮಾಡುವುದಿಲ್ಲ, ಪಕ್ಷ ತೊರೆಯಬೇಕಾಗುತ್ತದೆ ಎಂದು ಸಹಕಾರಿ ಸಚಿವ ಕೆ.ಎನ್. ರಾಜಣ್ಣ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೇರವಾಗಿ ತಿಳಿಸಿದ್ದಾರೆ.

ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ರಾಜಣ್ಣ ಇಂದು ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಕರ್ನಾಟಕದ ರಾಜಕೀಯ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ತಮ್ಮ ಬಣದ ನಿಲುವೇನೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ನಮಗೆ ಪೂರ್ಣ ಮಾಹಿತಿ ಇಲ್ಲ. ಆದರೆ, ಉಪಮುಖ್ಯಮಂತ್ರಿ ಅವರು, ಮುಖ್ಯಮಂತ್ರಿಗಾದಿಗೇರಲು ವೇದಿಕೆ ಸೃಷ್ಟಿ ಮಾಡಿಕೊಂಡಂತಿದೆ.

ಸಿದ್ದರಾಮಯ್ಯ ಅವರು ಪೂರ್ಣಾವಧಿ ಮುಖ್ಯಮಂತ್ರಿ ಆಗಿರುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಒಂದು ವೇಳೆ ರಾಜಕೀಯ ಕಾರಣಗಳಿಗಾಗಿ ಬದಲಾವಣೆ ಮಾಡಿದರೆ, ಅಂತಹ ಸಂದರ್ಭದಲ್ಲಿ ನೀವೇ ರಾಜ್ಯ ರಾಜಕಾರಣಕ್ಕೆ ಬನ್ನಿ ಎಂದು ಖರ್ಗೆ ಅವರಿಗೆ ಆಹ್ವಾನ ನೀಡಿದ್ದಾರೆ.

ಮೂರು ಬಾರಿ ಅವಕಾಶ ತಪ್ಪಿದೆ: ರಾಜ್ಯ ಮತ್ತು ಪಕ್ಷಕ್ಕಾಗಿ ನೀವು ದುಡಿದಿದ್ದೀರಿ. ನಿಮಗೆ ಮೂರು ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ತಪ್ಪಿಹೋಗಿದೆ. ಇದೀಗ ಮತ್ತೆ ಅಂತಹ ಅವಕಾಶ ನಿಮ್ಮ ಕಾಲ ಬಳಿ ಬಂದಿದೆ. ನೀವು ಅದನ್ನು ದಿಕ್ಕರಿಸದೆ ರಾಜ್ಯ ರಾಜಕಾರಣಕ್ಕೆ ಬಂದರೆ, ಸಿದ್ದರಾಮಯ್ಯ ಅವರೂ ಒಪ್ಪಲು ಸಿದ್ಧರಿದ್ದಾರೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಎಐಸಿಸಿ ಆಸಕ್ತಿ ತೋರಿದಂತಿದೆ. ಒಂದು ವೇಳೆ ಅಂತಹ ಸನ್ನಿವೇಶ ಬಂದರೆ, ನಾವುಗಳು ಅವರ ಕೈಕೆಳಗೆ ಕೆಲಸ ಮಾಡುವುದಿಲ್ಲ.


ಮಲ್ಲಿಕಾರ್ಜುನ ಖರ್ಗೆ ಕೆ.ಎನ್.ರಾಜಣ್ಣ

ಪಕ್ಷ ತೊರೆಯಲೂಬಹುದು: ಶಿವಕುಮಾರ್ ನಾಯಕತ್ವ ವಿರೋಧಿಸಿ 40ರಿಂದ 60 ಶಾಸಕರು ಪಕ್ಷ ತೊರೆಯಲಿದ್ದಾರೆ ಎಂಬ ಮಾಹಿತಿಯನ್ನೂ ನೀಡಿದ್ದಾರೆ. ನನ್ನನ್ನೂ ಸೇರಿದಂತೆ, ನಿಮ್ಮ ಮತ್ತು ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ಮಾತ್ರ ಈ ಶಾಸಕರು ಮುಂದುವರೆಯುತ್ತಾರೆ. ಇಲ್ಲವಾದಲ್ಲಿ, ಅವರು ತಮ್ಮ ರಾಜಕೀಯ ಭವಿಷ್ಯ ನೋಡಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಶಾಸಕರ ಮನಃಸ್ಥಿತಿಯನ್ನು, ನಿಮ್ಮ ಮುಂದಿಟ್ಟಿದ್ದೇನೆ ಉಳಿದಿದ್ದು, ಪಕ್ಷದ ನಿರ್ಧಾರಕ್ಕೆ ಬಿಟ್ಟ ವಿಚಾರ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ರಾಜಣ್ಣ ದೆಹಲಿ ಪ್ರವಾಸ ಕೈಗೊಳ್ಳುವುದಕ್ಕೂ ಮುನ್ನ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ವರಿಷ್ಠರನ್ನು ಭೇಟಿ ಮಾಡಿ ಶಿವಕುಮಾರ್ ನಾಯಕತ್ವಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಕೆಪಿಸಿಸಿ ಅಧ್ಯಕ್ಷನಾಗಲು ನಾನು ಸಿದ್ಧ: ಖರ್ಗೆ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ಕೆಪಿಸಿಸಿ ಅಧ್ಯಕ್ಷನಾಗಲು ನಾನು ಸಿದ್ಧ, ಸದ್ಯಕ್ಕೆ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದಾರೆ. ಹೈಕಮಾಂಡ್ ಅವಕಾಶ ನೀಡಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಸಿದ್ಧ ಎಂದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಒತ್ತಾಯಿಸುತ್ತಿಲ್ಲ. ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ವೇಳೆ ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿಕೆ ನೀಡಿ, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಅಲಂಕರಿಸುತ್ತಾರೆ, ಶಿವಕುಮಾರ್ ಉಪಮುಖ್ಯಮಂತ್ರಿ ಆಗುತ್ತಾರೆ ಎಂದಿದ್ದರು. ಅಲ್ಲದೆ, ಲೋಕಸಭಾ ಚುನಾವಣೆವರೆಗೂ ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿಯೂ ಮುಂದುವರಿಯಲಿದ್ದಾರೆ ಎಂದಿದ್ದರು. ಚುನಾವಣೆ ನಂತರವೂ ಈವರೆಗೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಏಕೆ ಆಗಿಲ್ಲ ಎಂದು ಕೇಳುತ್ತಿದ್ದೇವೆ ಎಂದರು. ದಲಿತ ಮುಖ್ಯಮಂತ್ರಿ ಬೇಡಿಕೆ ಕುರಿತು ಪ್ರತಿಕ್ರಿಯಿಸಿ, ದಲಿತ ಮುಖ್ಯಮಂತ್ರಿ ಬೇಡುವುದರಲ್ಲಿ ತಪ್ಪೇನು. ಇತರೆ ಸಮುದಾಯ ಮತ್ತು ಅಲ್ಪಸಂಖ್ಯಾತರು ಬೇಡಿಕೆ ಇಡಬಹುದಾದರೂ ಹೈಕಮಾಂಡ್ ತೀರ್ಮಾನವೇ ಅಂತಿಮ, ಅದಕ್ಕೆ ಬದ್ಧರಾಗಿರುತ್ತೇವೆ. ನಮ್ಮ ಬೇಡಿಕೆಗಳನ್ನು ಹೈಕಮಾಂಡ್ ಮುಂದೆ ಇಡುತ್ತೇವೆ, ವಿರೋಧ ಪಕ್ಷಗಳ ಸಹಾಯ ತೆಗೆದುಕೊಳ್ಳುವುದಿಲ್ಲ ಎಂದರು. ಡಾ.ಪರಮೇಶ್ವರ್ ಮುಂದಿನ ವಾರ ದೆಹಲಿಗೆ ಭೇಟಿ ನೀಡುವ ಸಾಧ್ಯತೆ ಇದ್ದು, ಒಬ್ಬರ ನಂತರ ಒಬ್ಬರು ದೆಹಲಿಗೆ ಭೇಟಿ ನೀಡಿ ಹೈಕಮಾಂಡ್ ಮೇಲೆ ಒತ್ತಡ ಹೇರುವ ರಣತಂತ್ರ ರೂಪಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಫೆ.18ಕ್ಕೆ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್‌ಕುಮಾರ್ ನಿವೃತ್ತಿ


ರಾಜೀವ್ ಕುಮಾರ್

ನವದೆಹಲಿಫೆ.14– ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್‌ಕುಮಾರ್ ಅವರ ಅಧಿಕಾರ ಅವಧಿ ಇದೇ ಫೆ. 18ರಂದು ಕೊನೆಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಮುಖ್ಯ ಚುನಾವಣಾ ಆಯುಕ್ತರ ಹೆಸರನ್ನು ಅಂತಿಮಗೊಳಿಸಲು ಪ್ರಧಾನಿ ಮಟ್ಟದ ಉನ್ನತ ಮಟ್ಟದ ಆಯ್ಕೆ ಸಮಿತಿ ಸೋಮವಾರ ಸಭೆ ಸೇರುವ ಸಾಧ್ಯತೆಗಳಿವೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಬಿಜೆಪಿ ಅವಧಿಯಲ್ಲಿ ಸ್ಥಾಪಿಸಿದ್ದ ಮಂಡ್ಯ, ಚಾ.ನಗರ, ಕೊಡಗು, ಹಾಸನ ಸೇರಿ

9 ವಿಶ್ವವಿದ್ಯಾಲಯ ಬಂದ್ ಸಾಧ್ಯತೆ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯ ಉಪಸಮಿತಿ ತೀರ್ಮಾನ



ಬೆಂಗಳೂರು, ಫೆ.14– ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರಂಭಿಸಿದ್ದ 10 ಹೊಸ ವಿಶ್ವವಿದ್ಯಾಲಯಗಳ ಪೈಕಿ 9 ವಿವಿಗಳನ್ನು ಮುಚ್ಚುವ ಸಾಧ್ಯತೆ ಇದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯ ಉಪ ಸಮಿತಿ ಈ ತೀರ್ಮಾನಕ್ಕೆ ಬಂದಿದೆ. ವಿಶ್ವ ವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿಯ ಕುರಿತು ಪರಿಶೀಲನೆಗೆ ಸರ್ಕಾರ ಸಂಪುಟ ಉಪ ಸಮಿತಿ ರಚಿಸಿದೆ. ಬೀದರ್ ವಿಶ್ವವಿದ್ಯಾಲಯ ಹೊರತುಪಡಿಸಿ, ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ನೃಪತುಂಗ ವಿಶ್ವವಿದ್ಯಾಲಯ ಸೇರಿ ಎಲ್ಲಾ 9 ವಿವಿಗಳನ್ನು ಮುಚ್ಚಲು ತೀರ್ಮಾನಿಸಲಾಗಿದೆ.

ಬೀದರ್ ವಿಶ್ವವಿದ್ಯಾಲಯ 150 ಸಂಯೋಜಿತ ಕಾಲೇಜುಗಳನ್ನು ಹೊಂದಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಯಾವುದೇ ವಿಶ್ವವಿದ್ಯಾಲಯ ಸುಗಮವಾಗಿ ನಡೆಯಲು ಸಂಯೋಜಿತ ಕಾಲೇಜುಗಳ ಶುಲ್ಕ ಮುಖ್ಯ. ಆದ್ದರಿಂದ ಈ ವಿವಿಯನ್ನು ಉಳಿಸಿಕೊಳ್ಳಲು ನಿರ್ಧರಿಸಿದೆ.

ಬಹುತೇಕ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ವಾಹನ ಖರೀದಿಸಲು ಹಣಕಾಸಿನ ಕೊರತೆಯಿದೆ. ಹೊಸ ವಿವಿಗಳನ್ನು ನಡೆಸಲು ಸರ್ಕಾರ ದೊಡ್ಡ ಮೊತ್ತದ ಹಣ ನೀಡಬೇಕಿದೆ. ಹೊಸ ವಿವಿಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ 342 ಕೋಟಿ ಅಗತ್ಯವಿದೆ. ವಿಶ್ವವಿದ್ಯಾಲಯಗಳ ಸ್ಥಾಪನೆಗೆ 100 ರಿಂದ 200 ಎಕರೆ ಭೂಮಿ ಅಗತ್ಯವಿದೆ. ಬಹುತೇಕ ವಿವಿಗಳಿಗೆ ಅಷ್ಟು ಪ್ರಮಾಣದ ಜಮೀನು ಲಭ್ಯವಿಲ್ಲ.

342 ಕೋಟಿ ಮೊತ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ, ಮೂಲ ಸೌಕರ್ಯ, ಸಲಕರಣೆ, ವಾಹನ, ಪೀಠೋಪಕರಣ ಇತರೆ ವಸ್ತುಗಳ ಖರೀದಿಗೆ ಅಗತ್ಯವಿದೆ. ಹಾಸನ, ಚಾಮ ರಾಜನಗರ ಹಾವೇರಿ, ಕೊಡಗು, ಕೊಪ್ಪಳ, ಬಾಗಲ ಕೋಟೆ, ಮಹಾರಾಣಿ ಕ್ಲಸ್ಟರ್ ಮಂಡ್ಯ, ನೃಪತುಂಗ ಯೂನಿವರ್ಸಿಟಿಗೆ ಬೀಗ ಬೀಳುವ ಸಾಧ್ಯತೆ ಇದೆ.

ಇನ್ವೆಸ್ಟ್ ಕರ್ನಾಟಕ 2025 ರಾಜ್ಯಕ್ಕೆ ಬಂಪರ್: 10 ಲಕ್ಷ ಕೋಟಿ ಹೂಡಿಕೆ; ಆರು ಲಕ್ಷ ಉದ್ಯೋಗ ಸೃಷ್ಟಿ!


ಎಂ.ಬಿ.ಪಾಟೀಲ್

ಬೆಂಗಳೂರು, ಫೆ.14– ನಾಲ್ಕು ದಿನ ಗಳ ಕಾಲ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ಸದ್ಯಕ್ಕೆ ರಾಜ್ಯಕ್ಕೆ 10,27,378 ಕೋಟಿ ರೂ ಬಂಡವಾಳ ಹೂಡಿಕೆ ಮತ್ತು 6 ಲಕ್ಷ ಉದ್ಯೋಗ ಸೃಷ್ಟಿ ಖಾತ್ರಿಯಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ಶುಕ್ರವಾರ ಹೇಳಿದ್ದಾರೆ.

ಸಮಾವೇಶಕ್ಕೆ ತೆರೆ ಬಿದ್ದ ಬಳಿಕ ಅರಮನೆ ಆವರಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಂಬಿ ಪಾಟೀಲ್, ವಲಯವಾರು ಅಂಕಿ ಅಂಶಗಳ ಸಮೇತ ಮಾಹಿತಿ ನೀಡಿದರು. ಇನ್ನೂ ಕೆಲವು ಪ್ರತಿಷ್ಠಿತ ಕಂಪನಿಗಳು ಭಾರೀ ಹೂಡಿಕೆಗೆ ಆಸಕ್ತಿ ತೋರಿದ್ದು, ಒಡಂಬಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇವು ಅಖೈರಾದರೆ ಸಮಾವೇಶದ ಮೂಲಕ ಬರಲಿರುವ ಬಂಡವಾಳದ ಮೊತ್ತ ಇನ್ನೂ ಗಮನಾರ್ಹವಾಗಿ ಏರಲಿದೆ. ಈಗ ಖಾತ್ರಿಯಾಗಿರುವ ಹೂಡಿಕೆಯಲ್ಲಿ ಶೇಕಡ 75ರಷ್ಟು ಬೆಂಗಳೂರಿನ ಆಚೆ ಇರುವ ಪ್ರದೇಶಗಳಿಗೆ ಹೋಗಲಿದ್ದು, ಶೇಕಡ 45ರಷ್ಟು ಬಂಡವಾಳವು ■ 6ನೇ ಪುಟಕ್ಕೆ

ಉದಯಗಿರಿ ಗಲಾಟೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳೊಂದಿಗೆ ಸಭೆ

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದವರು; ಅದಕ್ಕೆ ಪ್ರಚೋದನೆ ನೀಡಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಿ



ಬೆಂಗಳೂರು, ಫೆ. 14– ಮೈಸೂರಿನ ಉದಯಗಿರಿಯಲ್ಲಿ ಕಳೆದ ಸೋಮವಾರ ನಡೆದಿದ್ದ ಗಲಾಟೆಗೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ತಮ್ಮ ಕಾವೇರಿ ನಿವಾಸದಲ್ಲಿ ಅಧಿಕಾರಿಗಳ ಸಭೆ ನಡೆಸಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಮೈಸೂರು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಂದ ಉದಯಗಿರಿ ಘಟನೆಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಪಡೆದ ಮುಖ್ಯಮಂತ್ರಿಗಳು, ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದವರು ಹಾಗೂ ಅದಕ್ಕೆ ಪ್ರಚೋದನೆ ನೀಡಿದ ಎಲ್ಲರನ್ನೂ ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ತಪ್ಪಿತಸ್ಥರು ಯಾರೇ ಆಗಿದ್ದರೂ ಮುಲಾಜಿಲ್ಲದೇ ಕಾನೂನು ಕ್ರಮ ಜರುಗಿಸಬೇಕು. ಕಾನೂನು ಕೈಗೆತ್ತಿಕೊಂಡ ಪ್ರತಿಯೊಬ್ಬರನ್ನು ಪತ್ತೆ ಹಚ್ಚಿ ಕ್ರಮ ವಹಿಸಬೇಕು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು. ಕಾನೂನು ವ್ಯವಸ್ಥೆಗೆ ಭಂಗ ತರುವ ಪ್ರಯತ್ನ ಮಾಡಿದ ಎಲ್ಲರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಬೇಕು ■ 6ನೇ ಪುಟಕ್ಕೆ



ಬೆಂಗಳೂರು ಅರಮನೆ ಭೂ ವಿವಾದ; ಮೈಸೂರು ರಾಜವಂಶಸ್ಥರಿಗೆ ಟಿಡಿಆರ್ ಕೊಡುವ ಸಂಬಂಧ

ಎರಡು ವಾರದಲ್ಲಿ ತೀರ್ಮಾನಿಸಿ

● ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸಲಹೆ ● ಆದೇಶ ಪಾಲನೆ ಮಾಡದೇ ಇದ್ದಲ್ಲಿ ಅಧಿಕಾರಿಗಳಿಗೆ ತೊಂದರೆ: ಪೀಠ ಅಭಿಮತ

ನವದೆಹಲಿ, ಫೆ. 14– ಬೆಂಗಳೂರು ಅರಮನೆ ವಿಚಾರದಲ್ಲಿ ರಾಜ ವಂಶಸ್ಥರಿಗೆ ಟಿಡಿಆರ್ ಕೊಡುವ ಬಗ್ಗೆ ಎರಡು ವಾರದಲ್ಲಿ ತೀರ್ಮಾನ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸಲಹೆ ನೀಡಿದ್ದು, ಸರ್ಕಾರ ತೀರ್ಮಾನ ಕೈಗೊಳ್ಳದಿದ್ದರೆ ಕೋರ್ಟ್ ತನ್ನ ಪ್ರಕ್ರಿಯೆಗಳನ್ನು ಮುಂದುವರೆಸಲಿದೆ ಎಂದು ಹೇಳಿದೆ.

ಅಭಿವೃದ್ಧಿ ಕಾರ್ಯಕ್ಕಾಗಿ ಬೆಂಗಳೂರು ಅರಮನೆ ಭೂಸ್ವಾಧೀನಕ್ಕೆ ಪರ್ಯಾಯವಾಗಿ ರಾಜವಂಶಸ್ಥರಿಗೆ 1396 ಕೋಟಿ ಟಿಡಿಆರ್ ನೀಡಬೇಕು ಎಂದು ಈ ಹಿಂದೆ ಸುಪ್ರೀಂಕೋರ್ಟ್ ಆದೇಶ ನೀಡಿತ್ತು ಆದರೆ, ಸರ್ಕಾರ ಯಾವುದೇ ನಿರ್ಧಾರಕ್ಕೆ ಬಾರದ ಹಿನ್ನೆಲೆಯಲ್ಲಿ ರಾಜವಂಶಸ್ಥರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿದ್ದರು. ■ 6ನೇ ಪುಟಕ್ಕೆ


ಬೆಂಗಳೂರು ಅರಮನೆ

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

● ಬುಲ್ಡೋಜರ್ ಬಳಸುವಂತಹ ಪರಿಸ್ಥಿತಿ ಇನ್ನು ಬಂದಿಲ್ಲ ● ಉದಯಗಿರಿ ಠಾಣೆಗೆ ಭೇಟಿ ನೀಡಿ ಪರಿಶೀಲಿಸಿದ ಗೃಹ ಸಚಿವ ಡಾ. ಪರಮೇಶ್ವರ್ ಪ್ರತಿಕ್ರಿಯೆ

ಮೈಸೂರು, ಫೆ. 14(ಆರ್‌ಕೆ)– ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿ ಪೊಲೀಸ್ ಅಧಿಕಾರಿಗಳ ಗಾಯಗೊಳಿಸಿ, ವಾಹನಗಳನ್ನು ಜಖಂಗೊಳಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಒಂದು ಸಮುದಾಯದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟರ್ ಹಾಕಲಾಗಿದೆ ಎಂಬ ಕಾರಣಕ್ಕೆ ಸಾವಿರಾರು ಮಂದಿ ಜಮಾಯಿಸಿ ಕಲ್ಲು ತೂರಿದ್ದ ಮೈಸೂರಿನ ಉದಯಗಿರಿ ಠಾಣೆಗೆ ಘಟನೆ ನಡೆದ 4 ದಿನಗಳ ಬಳಿಕ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿ ಘಟನೆ ಕುರಿತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದರು.

ಘಟನೆ ಬಗ್ಗೆ ಪ್ರಾಥಮಿಕ ಹಂತದ ಮಾಹಿತಿ ತಿಳಿದುಕೊಂಡಿದ್ದೇನೆ. ಈಗಾಗಲೇ ತನಿಖೆ ನಡೆಯುತ್ತಿರುವುದರಿಂದ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ಯಾರೂ ಸಹ ಇಂತಹ ಘಟನೆಗಳಲ್ಲಿ ರಾಜಕೀಯ ಮಾಡಬಾರದು. ಅಂತಹವರ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಸಮಯ, ಸಂದರ್ಭ ನೋಡಿಕೊಂಡು ಅವರಿಗೆ ಕಿವಿಮಾತು ಹೇಳುತ್ತೇನೆ ಎಂದರು. ಸಾರ್ವಜನಿಕರು ಇಂತಹ ವೇಳೆ ಶಾಂತಿಯಿಂದಿದ್ದು ಕಾನೂನು–ಸುವ್ಯವಸ್ಥೆ ಕಾಪಾಡಲು ಸಹಕಾರ ನೀಡಬೇಕು ಎಂದ ಗೃಹ ಸಚಿವರು, ಪೊಲೀಸ್ ಹಾಗೂ ವಾಹನಗಳ ಮೇಲೆ ಕಲ್ಲು ತೂರಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇನೆ ಎಂದರು.

ಸಿಸಿ ಕ್ಯಾಮರಾ, ವಿಡಿಯೋ ಕ್ಲಿಪ್ಪಿಂಗ್, ದೃಶ್ಯಾವಳಿ ಆಧರಿಸಿ ಪೊಲೀಸರು ಕ್ರಮಕ್ಕೆ ಮುಂದಾಗಿದ್ದಾರೆ. ಕಾನೂನನ್ನು ಕೈಗೆ ತೆಗೆದುಕೊಳ್ಳುವವರು ಎಷ್ಟೇ ಬಲಾಢ್ಯರಾಗಿದ್ದರೂ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತೇವೆ. ನಮಗೆ ಪಕ್ಷಕ್ಕಿಂತ ■ 6ನೇ ಪುಟಕ್ಕೆ


ಮೈಸೂರಿನ ಉದಯಗಿರಿ ಠಾಣೆಗೆ ಘಟನೆ ನಡೆದ 4 ದಿನಗಳ ಬಳಿಕ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಘಟನೆ ಕುರಿತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದ ಗೃಹ ಸಚಿವ ಡಾ.ಜಿ.ಪರಮೇಶ್ವರ್

ಅವಹೇಳನಕಾರಿ ಪೋಸ್ಟರ್ ಹಾಕಿದ ಆರೋಪಿಗೆ ಕೆಲವೇ ಗಂಟೆಗಳ ಪೊಲೀಸ್ ಕಸ್ಟಡಿ; ನಂತರ ಮತ್ತೆ ನ್ಯಾಯಾಂಗ ಬಂಧನಕ್ಕೆ

ಮೈಸೂರು, ಫೆ.14 (ಆರ್‌ಕೆ)–ದೆಹಲಿ ವಿಧಾನಸಭೆ ಚುನಾವಣೆ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟರ್ ಹಾಕಿ, ಉದಯಗಿರಿ ಪೊಲೀಸ್ ಠಾಣೆ ಬಳಿ ಗಲಾಟೆಗೆ ಕಾರಣನಾಗಿದ್ದ ಆರೋಪಿ ಸತೀಶ್ ಅಲಿಯಾಸ್ ಪಾಂಡುರಂಗ ಅವರನ್ನು ಒಂದು ದಿನದ ಮಟ್ಟಿಗೆ ನ್ಯಾಯಾಲಯ ಪೊಲೀಸ್ ವಶಕ್ಕೆ ಒಪ್ಪಿಸಿತ್ತು ಆದರೆ ಕೆಲವೇ ಗಂಟೆಗಳಲ್ಲಿ ಪೊಲೀಸರು ತಮ್ಮ ಪ್ರಕ್ರಿಯೆ ಮುಗಿಸಿ, ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿ, ಆರೋಪಿಯನ್ನು ಮತ್ತೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಕಾರಿ ಪೋಸ್ಟರ್ ಹಾಕಿದ ಸಂಬಂಧ ಕಳೆದ ಸೋಮವಾರ ಉದಯಗಿರಿ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸುವ ವೇಳೆ ರೊಚ್ಚಿಗೆದ್ದ ಒಂದು ಸಮುದಾಯದ ಸಾವಿರಾರು ಯುವಕರು ಉದಯಗಿರಿ ಠಾಣೆ ಬಳಿ ಜಮಾಯಿಸಿ, ಠಾಣೆ ಮೇಲೆ ಕಲ್ಲು ತೂರಿದ್ದರಿಂದ, ಪರಿಣಾಮ ಹಲವು ವಾಹನಗಳು ಜಖಂಗೊಂಡು, 7 ಮಂದಿ ಪೊಲೀಸರು ಗಾಯಗೊಂಡಿದ್ದರು. ಈ ವೇಳೆ ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಘು ■ 6ನೇ ಪುಟಕ್ಕೆ

ಇಂದು ಜಾಮೀನು ಅರ್ಜಿ ವಿಚಾರಣೆ

ಅನ್ನ ಹಾಕಿದ ಧಣಿಗೆ ದ್ರೋಹ ಬಗೆದರೆ...!?

ಸತೀಶ್ ಡ್ರೈ ಫ್ರೂಟ್ಸ್ ಪ್ಯಾಕಿಂಗ್ ಯೂನಿಟ್‌ನಲ್ಲಿ ಕೆಲಸ ಮಾಡುವವರಿಂದಲೇ ದುಷ್ಕೃತ್ಯ ಶಂಕೆ

ಮೈಸೂರು, ಫೆ. 14(ಆರ್‌ಕೆ)–ಅವಹೇಳನಕಾರಿ ಪೋಸ್ಟರ್ ಹಾಕಿದ ಪ್ರಕರಣವೀಗ ಹೊಸ ತಿರುವು ಪಡೆದುಕೊಳ್ಳುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಇಂತಹದ್ದೊಂದು ಪೋಸ್ಟರ್ ಹರಿಯಬಿಟ್ಟು ಉದಯಗಿರಿಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಲು, ಪ್ರಕರಣದ ಆರೋಪಿ ಎಂದು ಬಂಧಿತರಾಗಿರುವ ಸತೀಶ್ ಅಲಿಯಾಸ್ ಪಾಂಡುರಂಗ ಅವರ ಡ್ರೈ ಫ್ರೂಟ್ಸ್ ಪ್ಯಾಕಿಂಗ್ ಯೂನಿಟ್‌ನಲ್ಲಿ ಕೆಲಸ ಮಾಡುತ್ತಿರುವ ಕೆಲ ಸಿಬ್ಬಂದಿಗಳೇ ಕಾರಣ ಎಂಬ ಸ್ಫೋಟಕ ಮಾಹಿತಿ ಲಭ್ಯವಾಗಿದೆ. ಡ್ರೈ ಫ್ರೂಟ್ಸ್ ಸಗಟು ಮಾರಾಟಗಾರರಾದ ಸತೀಶ್ ಮೈಸೂರಿನ ಕಲ್ಯಾಣಗಿರಿಯಲ್ಲಿ ಪ್ಯಾಕಿಂಗ್ ಘಟಕ ನಡೆಸುತ್ತಿದ್ದು ಅಲ್ಲಿ 300ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಮಾಲೀಕರೊಂದಿಗೆ ಸಭ್ಯಸ್ಥರು ಎಂದು ಗುರುತಿಸಿಕೊಂಡ ಕೆಲವು ಸಿಬ್ಬಂದಿ ಸತೀಶ್ ಅವರ ಮೊಬೈಲ್‌ಗೆ ಎಲ್ಲಿಂದಲೋ ಪೋಸ್ಟರ್ ಕಳುಹಿಸಿ ಅದರ ಸ್ಕ್ರೀನ್‌ಶಾಟ್ ತೆಗೆದು ಫೇಸ್‌ಬುಕ್ ಅಕೌಂಟ್‌ಗೆ ಪೋಸ್ಟ್ ಹಾಕಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಪ್ಯಾಕಿಂಗ್ ಯೂನಿಟ್‌ನಲ್ಲಿ ಬ್ಯುಸಿನೆಸ್ ವಹಿವಾಟಿಗೆ ಸಂಬಂಧಿಸಿದಂತೆ ಮಾಲೀಕರ ಮೊಬೈಲ್ ಅನ್ನು ಕೆಲ ವಿಶ್ವಾಸಾರ್ಹ ಸಿಬ್ಬಂದಿ ಬಳಸುತ್ತಿದ್ದರು. ಕಳೆದ ಸೋಮವಾರ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಇಂದು ಕೇಂದ್ರ ಬಜೆಟ್ ಕುರಿತು ಬಿಜೆಪಿಯಿಂದ ಮೈಸೂರಲ್ಲಿ ಮುಕ್ತ ಸಂವಾದ

ಮೈಸೂರು, ಫೆ.14(ಜಿಎ)–ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಕೇಂದ್ರ ಬಜೆಟ್ ಸಾಧಕ ಬಾಧಕಗಳ ಕುರಿತು ಫೆ.15ರಂದು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿಯಿಂದ ಮುಕ್ತ ಸಂವಾದ ಆಯೋಜಿಸಲಾಗಿದೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ದಾಸಯ್ಯ ಈ ವಿಷಯ ತಿಳಿಸಿ, ಕೇಂದ್ರ ಬಜೆಟ್ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷವೂ ಬಜೆಟ್ ಬಗ್ಗೆ ಮಾತನಾಡಿರುವುದರಿಂದ ಬಜೆಟ್‌ನ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲು ಫೆ.15ರಂದು ಸಂಜೆ 4 ಗಂಟೆಗೆ ಗ್ರೀನ್ ಹೇರಿಟೇಜ್ ಹೋಟೆಲ್‌ನಲ್ಲಿ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಂವಾದದಲ್ಲಿ ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ ಬಜೆಟ್‌ನಲ್ಲಿರುವ ಅಂಶಗಳ ಬಗ್ಗೆ ವಿವರವಾಗಿ ಮಾತನಾಡಲಿದ್ದಾರೆ. ಚಾರ್ಟೆಡ್ ಅಕೌಂಟೆಂಟ್, ವಕೀಲರು ಹಾಗೂ ಇತರ ಸಂಪನ್ಮೂಲ ವ್ಯಕ್ತಿಗಳು ಉತ್ತರ ನೀಡಲಿದ್ದಾರೆ. ಸಾರ್ವಜನಿಕರು, ಹೋಟೆಲ್ ಮಾಲೀಕರು, ವಾಣಿಜ್ಯೋದ್ಯಮಿಗಳು ಸೇರಿದಂತೆ ಎಲ್ಲಾ ವಲಯದವರು ಈ ಸಂವಾದದಲ್ಲಿ ಭಾಗ ವಹಿಸಬೇಕು ಎಂದು ಮನವಿ ಮಾಡಿದರು.

ಸದರಿ ಬಜೆಟ್‌ನಲ್ಲಿ ವಿಕಸಿತ ಭಾರತ, ಶೂನ್ಯ ಬಡತನ ಪರಿಕಲ್ಪನೆ ಇಟ್ಟುಕೊಂಡು ಬಜೆಟ್ ಮಂಡಿಸಿದ್ದಾರೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಭಾರತ ಹೇಗೆ ಮುಂದುವರೆಯಬೇಕು. ಏನೇನು ಪರಿಕಲ್ಪನೆ ಬೇಕು. ಖಾಸಗಿ ಸಹಭಾಗಿತ್ವದಲ್ಲಿ ದೇಶದ ಅಭಿವೃದ್ಧಿ ಹೊಂದಬೇಕು ಎಂಬ ಅವಕಾಶ ಕಲ್ಪಿಸಲಾಗಿದೆ. ಅಂಗನವಾಡಿಯಲ್ಲಿ ಕೆಲಸ ಮಾಡುವವರಿಗೆ ಸಂಬಳ ಮಾತ್ರ ರಾಜ್ಯ ಸರ್ಕಾರ ಕೊಡುತ್ತಿದೆ. ಆದರೆ, ಅಂಗನವಾಡಿಗೆ ಆಹಾರ ಧಾನ್ಯಗಳನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. ರಾಜ್ಯ ಸರ್ಕಾರಕ್ಕೆ ಸಂಬಳ ಕೊಡೋಕು ದುಡ್ಡು ಇಲ್ಲ. ಕೇಂದ್ರ ಬಜೆಟ್‌ನಲ್ಲಿ ರೈತರಿಗೆ ಮೋಸ ಆಗಿದೆ ಅಂತ ಹೇಳಿ ಗೂಬೆ ಕೂರಿಸುತ್ತಿದ್ದಾರೆ. ವಿರೋಧ ಪಕ್ಷದವರು ರಾಜ್ಯಕ್ಕೆ ಅನುದಾನ ಕೊಟ್ಟೇ ಇಲ್ಲ ಎನ್ನುತ್ತಾರೆ. ಆದರೆ ಅನುದಾನಕ್ಕೆ ಸಂಬಂಧಿಸಿದ ದಾಖಲೆ ನೀಡಲು ರಾಜ್ಯ ಸರ್ಕಾರ ಸಿದ್ಧವಿಲ್ಲ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಹೆಳವರಹುಂಡಿ ಸಿದ್ದಪ್ಪ, ಶ್ರೀನಿವಾಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್, ಪಾಪಣ್ಣ, ಬಾಲಕೃಷ್ಣ, ಜಿಲ್ಲಾ ವಕ್ತಾರ ದಯಾನಂದ ಪಾಟೀಲ್, ಸಹ ವಕ್ತಾರ ಶ್ರೀನಿವಾಸ್ ರೆಡ್ಡಿ ಉಪಸ್ಥಿತರಿದ್ದರು.

ಕೆಂಗಲ್ ಹನುಮಂತಯ್ಯನವರ ಜಯಂತಿ ಆಚರಣೆ

ಮೈಸೂರು, ಫೆ. 14– ಕರ್ನಾಟಕ ಸೇನಾ ಪಡೆಯ ವತಿಯಿಂದ ಮೈಸೂರಿನ ಅಗ್ರಹಾರ ವೃತ್ತದಲ್ಲಿ ಸ್ವತಂತ್ರ ಭಾರತದ ಪ್ರಮುಖ ಮುತ್ಸದ್ದಿ, ಕರ್ನಾಟಕ ಏಕೀಕರಣದ ರೂವಾರಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ 117ನೇ ಜಯಂತಿ ಆಚರಿಸಲಾಯಿತು.



ಶಾಸಕ ಟಿ.ಎಸ್.ಶ್ರೀವತ್ಸ ಕೆಂಗಲ್ ಹನುಮಂತಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಕೆಂಗಲ್ ಹನುಮಂತಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಕೆಂಗಲ್ ಹನುಮಂತಯ್ಯನವರು ನಾಡು, ದೇಶ ಕಂಡ ಅಪರೂಪದ ರಾಜಕಾರಣಿ, ಮುತ್ಸದ್ದಿ. ಕರ್ನಾಟಕದ ಏಕೀಕರಣವು ಅವರ ಮಹಾನ್ ಸಾಧನೆ. ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅವರು ವಿಧಾನ ಸೌಧ ನಿರ್ಮಾಣ ಮಾಡಿ, ಅಲ್ಲಿ 'ಸರ್ಕಾರಿ ಕೆಲಸ ದೇವರ ಕೆಲಸ' ನಾಮಫಲಕ ಹಾಕಿದ್ದರು. ಕೇಂದ್ರ ರೈಲ್ವೆ ಮಂತ್ರಿಗಳಾಗಿಯೂ ಕರ್ನಾಟಕಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಹಾಗಾಗಿ, ಎಲ್ಲಾ ರಾಜಕಾರಣಿಗಳೂ, ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು. ಇಂತಹ ಮಹನೀಯರ ಜಯಂತಿ ಆಚರಣೆ ಶ್ಲಾಘನೀಯ ಎಂದರು.

ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ, ಆಗಿನ ಹಳೇ ಮೈಸೂರು ರಾಜ್ಯ ಒಕ್ಕಲಿಗರ ಪ್ರಾಬಲ್ಯ ಹೊಂದಿತ್ತು. ಏಕೀಕರಣ ಆದರೆ ಒಕ್ಕಲಿಗರ ಪ್ರಾಬಲ್ಯ ಹಾಗೂ ಮುಖ್ಯಮಂತ್ರಿ ಪದವಿ ಹೋಗುತ್ತದೆ ಎಂದು ಎಲ್ಲಾ ಮುಖಂಡರು ಹೇಳಿ, ಏಕೀಕರಣಕ್ಕೆ ವಿರೋಧ ಮಾಡಿದರೂ, ಅದಾವುದಕ್ಕೂ ಮಣಿಯದೆ ಅಖಂಡ ಕರ್ನಾಟಕ ಆಗಲೇ ಬೇಕು ಎಂದು ಪಟ್ಟು ಹಿಡಿದು ಬೆಂಬಲಿಸಿ ತಮ್ಮ ಮುಖ್ಯಮಂತ್ರಿ ಪದವಿಯನ್ನೇ ಕಳೆದುಕೊಂಡ ಮಹಾನ್ ನಾಯಕ. ವಿಶ್ವ ಪ್ರಸಿದ್ಧ ವಿಧಾನ ಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಹುಟ್ಟು ಹಬ್ಬವನ್ನು ಮುಂದಿನ ವರ್ಷದಿಂದ ಸರ್ಕಾರದ ವತಿಯಿಂದ ಆಚರಣೆ ಮಾಡಬೇಕೆಂದು ಒತ್ತಾಯಿಸಿದರು.

ಹಿರಿಯ ಸಂಸ್ಕೃತಿ ಪೋಷಕರಾದ ಡಾ.ರಘುರಾಂ ಕೆ ವಾಜಪೇಯಿ ಮಾತನಾಡಿ, ಕೆಂಗಲ್ ಹನುಮಂತಯ್ಯ ಅವರು ದೇಶ ಕಂಡ ಪ್ರಾಮಾಣಿಕ ರಾಜಕಾರಣಿ. ಭವ್ಯವಾದ ವಿಧಾನಸೌಧವನ್ನು ಕಟ್ಟುವಾಗ ಕಟ್ಟಡದ ಇಂಜಿನಿಯರ್ ಅನ್ನು ಕೆಂಗಲ್ ಹನುಮಂತಯ್ಯನವರು ಕರೆಸಿ, ಹಾಲಿನ ಅಭಿಷೇಕ ಮಾಡಿಸಿ, ಆ ಹಾಲಿನ ಮೇಲೆ ಕೈ ಇಡಿಸಿ ನಾನು ಈ ವಿಧಾನ ಸೌಧವನ್ನು ಕಟ್ಟುವಾಗ ಪ್ರಾಮಾಣಿಕವಾಗಿ ಕಟ್ಟುತ್ತೇನೆ ಒಂದು ಪೈಸೆ ಹಣವನ್ನು ಮುಟ್ಟುವುದಿಲ್ಲ ಎಂದು ಪ್ರಮಾಣ ಮಾಡಿಸಿ ವಿಧಾನ ಸೌಧ ಕಟ್ಟಿಸಿದ ಮಹಾಪುರುಷರು ಎಂದರು. ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಗೋವಿಂದೇಗೌಡ, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ್, ಶಿವಲಿಂಗಯ್ಯ, ನೇಹಾ, ವಿಜಯೇಂದ್ರ, ರಾಮಣ್ಣ, ಪ್ರಭಾಕರ, ಮೊಗಣ್ಣಾಚಾರ್, ಕುಮಾರ್‌ಗೌಡ, ಸುಬ್ಬೇಗೌಡ, ಮಹದೇವಸ್ವಾಮಿ, ದರ್ಶನ್ ಗೌಡ, ಪದ್ಮ, ಸಿಂದುವಳ್ಳಿ ಶಿವಕುಮಾರ್, ಅಕ್ಬರ್, ರಾಮಕೃಷ್ಣೇಗೌಡ, ಲಕ್ಷ್ಮೀಗೌಡ, ಹನುಮಂತಯ್ಯ, ಜ್ಯೋತಿ, ಬಸವರಾಜು, ಗಣೇಶ್ ಪ್ರಸಾದ್, ವಿಷ್ಣು ಮತ್ತಿತರರಿದ್ದರು.

ಇಂದಿನಿಂದ ಖೇಲೋ ಇಂಡಿಯಾ ವುಮನ್ಸ್ ಲೀಗ್ ವುಶು ಪಂದ್ಯಾವಳಿ

ಮೈಸೂರು, ಫೆ.14(ಜಿಎ)–ಹೊಸಪೇಟೆಯಲ್ಲಿ ಫೆ.15, 16ರಂದು ನಡೆಯಲ್ಲಿರುವ ಖೇಲೋ ಇಂಡಿಯಾ ವುಮನ್ಸ್ ಲೀಗ್ ವುಶು ಪಂದ್ಯಾವಳಿಯಲ್ಲಿ ಶ್ರೀ ಕನಕ ವಿದ್ಯಾ ಸಂಸ್ಥೆಯ 8 ವಿದ್ಯಾರ್ಥಿನಿಯರು ಪಾಲ್ಗೊಳ್ಳುತ್ತಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆ ನಿರ್ದೇಶಕ ಧರ್ಮ ಈ ವಿಷಯ ತಿಳಿಸಿ, ಶ್ರೀ ಕನಕ ವಿದ್ಯಾ ಸಂಸ್ಥೆಯೂ ವರುಣ ಹೋಬಳಿ ಬಡಗಲ ಹುಂಡಿ ಗ್ರಾಮದಲ್ಲಿದ್ದು, ನಮ್ಮ ಶಾಲೆಯಲ್ಲಿ ಶಿಕ್ಷಣದ ಜೊತೆಗೆ ಕ್ರೀಡೆಗೆ ಆದ್ಯತೆ ನೀಡಲಾಗಿದೆ. ಈಗಾಗಲೇ ವಿದ್ಯಾರ್ಥಿಗಳು ಅನೇಕ ಕ್ರೀಡಾ ಕೂಟದಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಿದ್ದಾರೆ ಎಂದರು. ಫೆ.15, 16ರಂದು ಹೊಸಪೇಟೆಯ ಪುನೀತ್ ರಾಜ್‌ಕುಮಾರ್ ಸ್ಟೇಡಿಯಂನಲ್ಲಿ ನಡೆಯಲಿರುವ ಖೇಲೋ ಇಂಡಿಯಾ ವುಮನ್ಸ್ ಲೀಗ್ ವುಶು ಪಂದ್ಯಾವಳಿಯಲ್ಲಿ 8 ವಿದ್ಯಾರ್ಥಿನಿಯರು ಪಾಲ್ಗೊಳ್ಳುತ್ತಿದ್ದಾರೆ. ಈ ಪಂದ್ಯಾವಳಿಯಲ್ಲಿ ವಿಜೇತರಾದಲ್ಲಿ ಮುಂದಿನ ಹಂತಗಳಲ್ಲಿ ಸ್ಪರ್ಧಿಸುವ ಅವಕಾಶವಿದೆ. ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗೆ ಬೇಕಿರುವ ಸೌಲಭ್ಯವನ್ನು ಸಂಸ್ಥೆ ವತಿಯಿಂದ ಒದಗಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯರಾದ ಪ್ರೇರಣಾ, ಉಷಾ ಹಾಗೂ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿರುವ ಮಕ್ಕಳು ಉಪಸ್ಥಿತರಿದ್ದರು.

ಕೆಂಗಲ್ ಹನುಮಂತಯ್ಯ ಜನ್ಮ ದಿನಾಚರಣೆ




ಭೂಮಿಗಿರಿ ಪ್ರಕಾಶನದ ವತಿಯಿಂದ ಕರ್ನಾಟಕದ ಏಕೀಕರಣದ ರೂವಾರಿ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯನವರ ಜನ್ಮದಿನಾಚರಣೆಯ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಎನ್.ಬೆಟ್ಟೇಗೌಡ, ನಾಗರಾಜ್ ಭೈರಿ, ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎನ್. ಚಂದ್ರಶೇಖರ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮಾಜಿ ನಗರಪಾಲಿಕೆ ಸದಸ್ಯ ನಜರ್‌ಬಾದ್ ರಾಜಣ್ಣ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎನ್.ಪ್ರಕಾಶ್, ಪದ್ಮಾ ಮತ್ತಿತರರು ಹಾಜರಿದ್ದರು.

ಶಿಕ್ಷಣ ಮೂಲಭೂತ ಹಕ್ಕು; ಎಲ್ಲರಿಗೂ ಲಭ್ಯವಾಗಲೇಬೇಕು

ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ

ಮೈಸೂರು, ಫೆ. 14– ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಮೂಹಿಕ ಅಕ್ಷರಾಭ್ಯಾಸವನ್ನು ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಗಿತ್ತು.

100ಕ್ಕೂ ಹೆಚ್ಚು ಮಕ್ಕಳು ಅಕ್ಷರಾಭ್ಯಾಸದಲ್ಲಿ ಪಾಲ್ಗೊಂಡಿದ್ದರು. ಪೋಷಕರು ಮಕ್ಕಳಿಗೆ ವಿದ್ಯಾರಂಭ ಮಾಡಿಸಿ ನಂಬಿಕೆಯನ್ನು ಪುನರ್ಜೀವನಗೊಳಿಸಿದರು. ಸರಸ್ವತಿ ಪೂಜೆ ಮಾಡಿ ಆನಂತರ ಹೆತ್ತವರು ಮಕ್ಕಳ ಕೈಹಿಡಿದು ಅಕ್ಕಿ ಕಾಳಿನಲ್ಲಿ ಓಂಕಾರ, ಗಣೇಶನಾಮ ಹಾಗೂ ತಮ್ಮ ಮಾತೃಭಾಷೆ ಅ ಆ ಇ ಬರೆಯುವ ಮೂಲಕ ಅರ್ಚಕರಾದ ನಾಗರಾಜ್ ಶಾಸ್ತ್ರಿ ಹಾಗೂ ರಾಘವೇಂದ್ರ ನೇತೃತ್ವದಲ್ಲಿ ಅಕ್ಷರಭ್ಯಾಸ ಮಾಡಿದರು. ಪುರಾಣ ನಂಬಿಕೆಯ ಪ್ರಕಾರ ಹೀಗೆ ಮಾಡುವುದರಿಂದ ಮಕ್ಕಳ ನಾಲಿಗೆಯ ಮೇಲೆ ಸರಸ್ವತಿ ದೇವಿ ನೆಲೆಸಿ ಅವರ ಶೈಕ್ಷಣಿಕ ಬದುಕು ಉತ್ತಮವಾಗಿರುತ್ತವೆ ಎಂಬ ನಂಬಿಕೆ.



ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸಾಮೂಹಿಕ ಅಕ್ಷರಾಭ್ಯಾಸಕ್ಕೆ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಶಾಸಕ ಟಿ.ಎಸ್. ಶ್ರೀವತ್ಸ, ಶಿಕ್ಷಣ ಎನ್ನುವುದು ಪ್ರತಿಯೊಂದು ಮಗುವಿಗೆ ಸಿಗಬೇಕಾದ ಮೂಲಭೂತ ಹಕ್ಕು, ಸಾಮೂಹಿಕ ವಿವಾಹವನ್ನು ಸರಳ ರೀತಿಯಲ್ಲಿ ಸರ್ಕಾರದ ವತಿಯಿಂದ ತಂದಿರುವ ಸಪ್ತಪದಿ ಯೋಜನೆಯಂತೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ವತಿಯಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲೂ ಹಮ್ಮಿಕೊಳ್ಳುವಂತೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪೋಷಕರ ಕರ್ತವ್ಯ. ಮಕ್ಕಳಿಗೆ ಶಿಕ್ಷಣದ ಜೊತೆಯಲ್ಲೇ ಕಲೆ, ಕ್ರೀಡೆ, ಸಾಂಸ್ಕೃತಿಕ ಸಂಗೀತ ಸೇರಿದಂತೆ ಯಾವ ಕ್ಷೇತ್ರದಲ್ಲಿ ಪ್ರತಿಭಾವಂತರು ಎಂದು ಅರಿತು ಪ್ರಥಮ ಹಂತದಲ್ಲೇ ಪೋಷಕರು ಮನೆಯಿಂದ ಪ್ರೋತ್ಸಾಹ ನೀಡಬೇಕು ಎಂದರು. ಪುರಾಣದಲ್ಲಿಯೂ ಪಾರ್ವತಿದೇವಿ ತನ್ನ ಮಗ ಗಣೇಶನಿಗೂ ಅಕ್ಷರಾಭ್ಯಾಸ ಮಾಡಿಸಿದ ಉಲ್ಲೇಖವಿದೆ. ಮಗು ಪೋಷಕರಿಂದ ಕಲಿತ ಮೊದಲ ಅಕ್ಷರದಲ್ಲಿರುವ ಆಸಕ್ತಿ, ಶ್ರಮಪಟ್ಟ ಕನಸನ್ನು ಕಂಡ ಪೋಷಕರು ಅದೇ ರೀತಿಯಲ್ಲೇ ಸನ್ಮಾರ್ಗದ ಕಡೆ ಮಗು ಬೆಳೆಯುವಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿದೆ ಎಂದರು.

ಹಿರಿಯ ಸಮಾಜ ಸೇವಕ ಕೆ.ರಘುರಾವ್ ವಾಜಪೇಯಿ, ಮಹರ್ಷಿ ಪಬ್ಲಿಕ್ ಶಾಲೆ ತೇಜಸ್ ಶಂಕರ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಎಸ್.ಎನ್. ರಾಜೇಶ್, ಋಷಿ, ಸವಿತಾ ಘಾಟ್ಕೆ, ಜಯಶ್ರೀ ಶಿವರಾಂ, ವಿದ್ಯಾ, ಪುಷ್ಪ, ರುಕ್ಮಿಣಿ, ಶಾಲೆಯ ಪ್ರಾಂಶುಪಾಲರಾದ ಗೋಪಾಲಸ್ವಾಮಿ, ಬಿ.ಎನ್.ಅನಿತಾ, ಪ್ರಿಯಾಂಕ, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಟಿವಿಎಸ್ ಕಾರ್ಖಾನೆ ವಿರುದ್ಧ ಪ್ರತಿಭಟನೆಗೆ ನಮ್ಮ ಬೆಂಬಲವಿಲ್ಲ

ಸಿಂಧುವಳ್ಳಿ ತಾಪಂ ಸದಸ್ಯರು, ಮಾಜಿ ಅಧ್ಯಕ್ಷ, ಉಪಾಧ್ಯಕ್ಷರ ಸ್ಪಷ್ಟನೆ

ಮೈಸೂರು, ಫೆ.14(ಜಿಎ)– ಸಿಂಧುವಳ್ಳಿ ಬಳಿಯ ಟಿವಿಎಸ್ ಕಾರ್ಖಾನೆ ವಿರುದ್ಧ ಫೆ.17 ರಂದು ಸಂಘಟನೆಯೊಂದು ಹಮ್ಮಿಕೊಂಡಿರುವ ಪ್ರತಿಭಟನೆಗೆ ತಮ್ಮ ಬೆಂಬಲವಿಲ್ಲ ಎಂದು ಸಿಂಧುವಳ್ಳಿ ಗ್ರಾಪಂನ ಕೆಲ ಸದಸ್ಯರು, ಮಾಜಿ ಅಧ್ಯಕ್ಷ, ಉಪಾಧ್ಯಕ್ಷರು ಸ್ಪಷ್ಟಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ರಂಗನಾಯಕ ಈ ವಿಷಯ ತಿಳಿಸಿ, ಕಾರ್ಖಾನೆ ಆರಂಭಕ್ಕೆ ಭೂಮಿ ನೀಡಿದ ಶೇ.95 ರಷ್ಟು ರೈತರ ಮಕ್ಕಳಿಗೆ ಟಿವಿಎಸ್ ಕಂಪನಿ ಕೆಲಸ ನೀಡಿದೆ. ಜೊತೆಗೆ ಈ ವ್ಯಾಪ್ತಿಯ ಸಾವಿರಾರು ಮಂದಿಗೆ ಅನುಕೂಲವಾಗುವ ರೀತಿಯಲ್ಲಿ ಅಭಿವೃದ್ಧಿ ಕೆಲಸ ಹಮ್ಮಿಕೊಂಡಿದೆ. ಶೇ.5 ರಷ್ಟು ರೈತರಿಗೆ ಮಾತ್ರ ಕೆಲಸ ನೀಡಿಕೆ ಬಾಕಿ ಇದೆ. ಅವರು ಸರಿಯಾದ ಕೌಟುಂಬಿಕ ದಾಖಲಾತಿ ಹೊಂದಿಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಈ ಸಮಸ್ಯೆಯನ್ನೂ ಕಂಪನಿ ಗ್ರಾಪಂ ಜೊತೆಗೆ ವ್ಯವಹರಿಸಿ ಬಗೆಹರಿಸುವ ಭರವಸೆ ನೀಡಿದೆ. ಆದರೆ ಸಂಘಟನೆಯೊಂದು ಎಲ್ಲ ಜನಪ್ರತಿನಿಧಿಗಳ ಸಹಕಾರದೊಂದಿಗೆ ಈ ಪ್ರತಿಭಟನೆ ನಡೆಯುತ್ತಿದೆ ಎಂದು ಹೇಳಿರುವುದು ಸರಿಯಲ್ಲ. ಈ ಪ್ರತಿಭಟನೆಗೆ ತಮ್ಮ ಬೆಂಬಲವಿಲ್ಲ ಎಂದರು.

ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಪ್ರತಿಭಟನೆ ಮಾಡುತ್ತೇವೆಂದು ತಿಳಿಸಿದ್ದಾರೆ. ಆದರೆ, ಶಾಸಕರಿಗೆ ಈ ಸಂಘಟನೆಯವರು ತಪ್ಪು ಮಾಹಿತಿ ನೀಡಿದ್ದಾರೆ ಎಂದು ಅನಿಸುತ್ತಿದೆ. ಸದ್ಯದಲ್ಲಿಯೇ ಜಿ.ಟಿ.ದೇವೇಗೌಡರನ್ನು ಭೇಟಿ ಮಾಡಿ ಟಿವಿಎಸ್ ಕಂಪನಿ ಕಾರ್ಯಗಳ ಬಗ್ಗೆ ತಿಳಿಸುತ್ತೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಇಂಟಕ್ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎನ್.ಪುಟ್ಟಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ, ಸದಸ್ಯರಾದ ಎಂ. ಮಹೇಶ್, ಬಿ.ಎಂ.ಮಹದೇವ, ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರು ನುಡಿ ಸಡಗರ

ಮೈಸೂರು, ಫೆ.14–ಚೇತನ ಫೌಂಡೇಷನ್ ಕರ್ನಾಟಕದ ಸಾರಥ್ಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಫೆ. 16 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4–30ರವರೆಗೆ ದಿನವಿಡೀ 'ಮೈಸೂರು ನುಡಿ ಸಡಗರ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸ್ಪದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ 'ಕುವೆಂಪು ನುಡಿಸಿರಿ ಪ್ರಶಸ್ತಿ' ಪ್ರದಾನ ಮಾಡುವರು. ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಜಿ.ಶಿವಣ್ಣ ಉಪಸ್ಥಿತರಿರುವರು.

ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ಡಾ.ಮೈಸೂರು ಉಮೇಶ್, 'ಮೈಸೂರಿನ ಶಿಕ್ಷಣ, ಸಾಹಿತ್ಯ, ಜನಪದ ಮತ್ತು ಸಂಸ್ಕೃತಿ' ವಿಷಯ ಕುರಿತು ಹಾಗೂ ಹಿರಿಯ ಸಾಹಿತಿ ಡಾ.ಅಮ್ಮಸಂದ್ರ ಸುರೇಶ್ 'ಮೈಸೂರಿನ ರಂಗಭೂಮಿ, ಸಂಗೀತ, ಸಂಘಟನೆ ಮತ್ತು ಚಳವಳಿಗಳು' ವಿಷಯ ಕುರಿತು ವಿಚಾರ ಮಂಡನೆ ಮಾಡುವರು.


ಬಳಿಕ ನಡೆಯಲಿರುವ ರಾಜ್ಯ ಮಟ್ಟದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಕವಿ ಪ್ರಕಾಶ್ ಜಿ.ಎಸ್. ಹಳ್ಳಿ ವಹಿಸಲಿದ್ದು, ಮಂಗಳೂರಿನ ಸಾಹಿತಿ ಕೊಳ್ಚಪ್ಪೆ ಗೋವಿಂದ ಭಟ್ ಆಶಯ ನುಡಿಗಳನ್ನಾಡುವರು. ಕವಿ ಸೆಲ್ವರತ್ನಂ ಎಸ್. ಕಂದಡ್ಕ ಚಾಲನೆ ನೀಡುವರು. ನಾಡಿನ ವಿವಿಧ ಜಿಲ್ಲೆಗಳ 22 ಮಂದಿ ಕವಿಗಳು ತಮ್ಮ ಸ್ವರಚಿತ ಕವನ ವಾಚನ ಮಾಡುವರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕುವೆಂಪು ನುಡಿಸಿರಿ ಪ್ರಶಸ್ತಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿ, ಡಾ. ವಿಷ್ಣುವರ್ಧನ್ ನೆನಪಿನ ಕನ್ನಡ ಮಾಣಿಕ್ಯ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕ ಮತ್ತು ಶಿಕ್ಷಕಿ ಪ್ರಶಸ್ತಿ ಹಾಗೂ ರಾಜ್ಯಮಟ್ಟದ ಅತ್ಯುತ್ತಮ ಶಾಲಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ ತಿಳಿಸಿದ್ದಾರೆ.

ಉಚಿತ ಸಮಗ್ರ ಆರೋಗ್ಯ ಶಿಬಿರ

ಮೈಸೂರು, ಫೆ. 14– ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ ಶನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಮೈಸೂರು, ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ, ಮೈಸೂರು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವೀರನಗರೆ, ಮೈಸೂರು, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಸಮುದಾಯ ವೈದ್ಯಶಾಸ್ತ್ರ ವಿಭಾಗ ಮೈಸೂರು, ಆರ್ಯ ಆಸ್ಪತ್ರೆ, ಡಾಕ್ಟರ್ ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ನಾಳೆ (ಫೆ. 15) ಬೆಳಗ್ಗೆ 9 ಗಂಟೆಗೆ ಬಂಬೂ ಬಜಾರ್ ಮೇದರ್ ಬ್ಲಾಕ್‌ನ ಸಮುದಾಯ ಭವನದಲ್ಲಿ ಉಚಿತ ಸಮಗ್ರ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಬಿ.ಪಿ, ಶುಗರ್, ಟಿ.ಬಿ, ಹೆಚ್.ಐ.ವಿ, ಹೆಪಟೈಟಿಸ್ ಬಿ ಮತ್ತು ಸಿ, ಚರ್ಮರೋಗ, ತಂಬಾಕು, ಮೂಳೆ, ಗರ್ಭಕೋಶ ತೊಂದರೆ, ಇ.ಎನ್.ಟಿ, ಪಿ.ಎಫ್.ಟಿ, ಹಲ್ಲಿನ ತೊಂದರೆ, ಕಣ್ಣಿನ ತಪಾಸಣೆ ಮಾಡಲಾಗುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.02.2025 ಶನಿವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಗ್ಯಾಸ್ಟ್ರೈಟಿಸ್ (ಆಮ್ಲಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸಿಬ್ಬಂದಿ ಅಭಿವೃದ್ಧಿ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕೊಯಮತ್ತೂರ್ ಭಾರತಿಯಾರ್ ಯೂನಿವರ್ಸಿಟಿ ಪ್ರಾಧ್ಯಾಪಕ ಡಾ. ಬಿ. ಪದ್ಮನಾಭನ್, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಗೌರವ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಪ್ರಭು ಡಾ. ಎನ್. ರಾಜೇಂದ್ರ ಪ್ರಸಾದ್, ಡಾ. ಶೋಭಾ, ಸ್ಥಳ: ಸೆಮಿನಾರ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಶ್ರೀ ಮಾಯಕಾರ ಚಾರಿಟಬಲ್ ಟ್ರಸ್ಟ್, ಶ್ರೀ ಮಾಯಕಾರ ಗುರುಕುಲ :** ಪಂಚಾಂಗ ಫಲಗಳು ಗ್ರಂಥ ಬಿಡುಗಡೆ ಹಾಗೂ ಪಿರಮಿಡ್ ವಾಸ್ತು ತರಗತಿ ಕಾರ್ಯಕ್ರಮ, ಉದ್ಘಾಟನೆ : ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಡಾ. ಪಿ. ಸತ್ಯನಾರಾಯಣ, ಗ್ರಂಥ ಬಿಡುಗಡೆ : ಪತ್ರಕರ್ತ ಸಿ.ಕೆ. ಮಹೇಂದ್ರ, ಅಧ್ಯಕ್ಷತೆ : ಶ್ರೀ ಮಾಯಕಾರ ಗುರುಕುಲ ಸಂಸ್ಥಾಪಕ ವಿದ್ವಾನ್ ಮೂಗೂರು ಮಧುದೀಕ್ಷಿತ್, ಉಪಸ್ಥಿತರು : ಜ್ಯೋತಿಷ್ಯ ಮಾರ್ಗಸೂಚಿ ಎಸ್. ಪ್ರಾಣೇಶ್, ಕರಾಮುವಿವಿ ಸಹಾಯಕ ಪ್ರಾಧ್ಯಾಪಕ ಡಾ. ಕೇಶವಸ್ವಾಮಿ, ಎಂ.ಎಸ್. ರಾಮನಾಥ ಗುಪ್ತ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸಂಶೋಧನಾ ವಿಧಾನಗಳು : ಉಪಕರಣಗಳು ಮತ್ತು ತಂತ್ರಗಳ ಬಳಕೆಯ ಪ್ರವೃತ್ತಿಗಳು ಕುರಿತು ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಅಧ್ಯಕ್ಷತೆ : ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಆರ್. ಮುರುಗೇಶಪ್ಪ, ಪ್ರಾಸ್ತಾವಿಕ ಭಾಷಣ : ಪ್ರೊ. ಬಿ. ಮಹದೇವಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ :** ಮೈಸೂರು ನಗರ ಮತ್ತು ತಾಲೂಕಿನಲ್ಲಿ ಚುನಾವಣೆ ನಡೆಯುವ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ. ಪ್ರಸಾದ್ ರೆಡ್ಡಿ, ಅಧ್ಯಕ್ಷತೆ : ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಒಕ್ಕೂಟದ ನಿರ್ದೇಶಕರಾದ ಡಾ. ಎಂ.ಬಿ. ಮಂಜೇಗೌಡ, ವೈ. ಭೈರಪ್ಪ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಉಪನಿಬಂಧ ಬೀರೇಂದ್ರ, ಸಹಾಯಕ ನಿಬಂಧಕ ಮನೋಜ್ ಕುಮಾರ್ ಎಸ್.ಹೆಚ್., ಸ್ಥಳ: ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** 38ನೇ ವರ್ಷದ ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ, ಬೆಳಗ್ಗೆ 10ಕ್ಕೆ ಪೂಜಾ ಕೈಂಕರ್ಯ ಪ್ರಾರಂಭ, ಶ್ರೀ ತ್ಯಾಗರಾಜರ ನಮನ (ಶ್ರೀ ತ್ಯಾಗರಾಜರ ಕ್ಷೇತ್ರ ಕೃತಿ ಗುಚ್ಛಗಳ ಪ್ರಸ್ತುತಿ), ಮಧ್ಯಾಹ್ನ 2 ರಿಂದ ಶ್ರೀ ತ್ಯಾಗರಾಜ ನಮನ, ಸಂಜೆ 4.30ಕ್ಕೆ ಶ್ರೀ ಪುರಂದರ ನಮನ (ಶ್ರೀ ಪುರಂದರ ದಾಸರ ರಚನೆಗಳ ಪ್ರಸ್ತುತಿ), ಸಂಜೆ 6ಕ್ಕೆ ಪುಸ್ತಕ ಅನಾವರಣ, ವಿದುಷಿ ಡಾ. ಆರ್.ಎನ್. ಶ್ರೀಲತಾ ಅವರಿಂದ ಪುಸ್ತಕ–ತ್ಯಾಗರಾಜರ ಗುಚ್ಛ ಕೃತಿಗಳು, ಲೇಖಕಿ–ವಿದುಷಿ ಡಾ. ಸುಕನ್ಯಾ ಪ್ರಭಾಕರ್, ರಾತ್ರಿ 8ಕ್ಕೆ ಮಹಾಮಂಗಳಾರತಿ,

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 5.50 'ನಖ ಶಿಖಾಂತ' ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ವ್ಯಾಖ್ಯಾನ–ಡಾ.ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 'ಮನೆ ಮನೆಯ ಹಣತೆ' ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳ ಸರಣಿ, ಪ್ರಾಯೋಜಕರು–ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ ಯಳಂದೂರು ತಾಲೂಕು ಯರಿಯೂರಿನ ಜನಪದ ಹಾಡುಗಾರ್ತಿ ಹಾಗೂ ಆಶುಕವಿ ಮಾಳಗರಸಮ್ಮ ಮತ್ತು ಸಂಗಡಿಗರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಎಸ್. ಗೋಪಾಲಕೃಷ್ಣನ್–ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ: ಡಾ.ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಹಾಡುವ ಪ್ರತಿಭೆ ಹರಿಣಿ ನಂದಕುಮಾರ್ ಪರಿಚಯ, ಪ್ರಸ್ತುತಿ:ಎಂ.ಎಸ್. ಭಾರತಿ, 4.00 ನಾಟಕ 'ಸ್ವಾಮಿ ನಿಷ್ಠೆ', ರಚನೆ–ಸಿ. ವಿ.ಶಿವಶಂಕರ್, ನಿರ್ದೇಶನ–ರಘುಪತಿ ಹೆಗ್ಡೆ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಸಾವಯವ ಕೃಷಿಯ ಪ್ರಾಮುಖ್ಯತೆ ಈ ಕುರಿತು ಮಂಡ್ಯ ತಾಲೂಕು ದುದ್ದ ಹೋಬಳಿ ಗಾಣದಾಳು ಗ್ರಾಮದ ಜಿ.ಬಿ. ಶಿವಪ್ರಸಾದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸರ್ವಶ್ರೇಷ್ಠ ಮಿಶ್ರ – ಗಾಯನ

ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಕಾಳಿದಾಸ ರಸ್ತೆ, ಒಂಟಿಕೊಪ್ಪಲ್.

■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 143ನೇ ಸಾಂಸ್ಕೃತಿಕ ಕಾರ್ಯಕ್ರಮ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಪಾವನಿ ಭಾರದ್ವಾಜ್ ಅವರಿಂದ ಹಾಡುಗಾರಿಕೆ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ಎಸ್. ಕುಮಾರಸ್ವಾಮಿ–ಮೃದಂಗ, ವಿದ್ವಾನ್ ಎಸ್. ರಮೇಶ್ –ಘಟಂ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಯನ ಕಲಾನಿಕೇತನ ಸಾಂಸ್ಕೃತಿಕ ಸಂಘ :** ಸಹಾಯಾರ್ಥ ರಸಮಂಜರಿ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಡಾ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಗಾಣಿಗ ಮಹಾಸಭಾ ಅಧ್ಯಕ್ಷ ಡಾ. ವಿಜಯಕುಮಾರ್, ಮುಖ್ಯ ಅತಿಥಿಗಳು : ಗಿರಿಧರ್, ಎಸ್. ಷಡಕ್ಷರಿ, ದಿನೇಶ್, ಮಂಜು ಸಿ. ಗೌಡ, ರೇವಣ್ಣನಾಯಕ್, ಮಡ್ಡೀಕೆರೆ ಗೋಪಾಲ್, ಸ್ಥಳ:ಪುರಭವನ, ಸಂಜೆ 6ಕ್ಕೆ.

■ **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರ ದಾಸರ ಆರಾಧನಾ ಮಹೋತ್ಸವ, ವಿದುಷಿ ಎಸ್.ಐಶ್ವರ್ಯ ಮತ್ತು ವಿದುಷಿ ಎಸ್.ಸೌಂದರ್ಯ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ:ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್.ಮೊಹಲ್ಲಾ, ಸಂಜೆ 6.15ಕ್ಕೆ

■ **ನಟನಾ ರಂಗಶಾಲೆ :** ಅಂತರಂಗ ಬೆಂಗಳೂರು ಅಭಿನಯಿಸುವ ಖ್ಯಾತ ಹನಿಗವನ ಕವಿ ಡುಂಡಿರಾಜ್ ಅವರ 'ಕಾಯುವ ಕಾಯಕ' ನಾಟಕ ಪ್ರದರ್ಶನ, ವಿನ್ಯಾಸ ಮತ್ತು ನಿರ್ದೇಶನ : ಅರ್ಚನಾ ಶ್ಯಾಮ್, ಸ್ಥಳ: ನಟನಾ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಕದಂಬ ರಂಗಹಬ್ಬ, ಉದ್ಘಾಟನೆ : ಚಲನಚಿತ್ರ ನಟ ಶಂಕರ್ ಅಶ್ವಥ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಉಪಸ್ಥಿತರು : ರಂಗ ಸಮಾಜ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕದಂಬ ರಂಗ ವೇದಿಕೆ ಅಧ್ಯಕ್ಷ ಡಾ. ರಾಜಶೇಖರ ಕದಂಬ, ರಾಜ್ಯ ಪ್ರಶಸ್ತಿ ಪುರಸ್ಕೃತರಾದ ವೈ.ಎಂ. ಪುಟ್ಟಣ್ಣಯ್ಯ ಮತ್ತು ತಂಡದವರಿಂದ ರಂಗಗೀತೆ ಕಾರ್ಯಕ್ರಮ, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ

ತಿ. ನರಸೀಪುರದಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಗ್ರಾಮ ವಿದ್ಯೋದಯ ಸಂಘ, ತಿ.ನರಸೀಪುರ:** ವಿಶ್ವಕಪ್ ಖೋ ಖೋ ಸಾಧಕರಾದ ಬಿ. ಚೈತ್ರಾ ಅವರಿಗೆ ಅಭಿನಂದನೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ನ್ಯಾಯಮೂರ್ತಿ ಅರಳಿ ನಾಗರಾಜು, ಉಪಸ್ಥಿತರು: ಕೆ.ಪಿ.ಮಹಾದೇವಸ್ವಾಮಿ, ಎಂ. ಚಂದ್ರಶೇಖರ್, ಸೋಮಶೇಖರಪ್ಪ ಕೆಬ್ಬೇಹುಂಡಿ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಸ್ಥಳ: ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಬೆಳಗ್ಗೆ 10.30ಕ್ಕೆ.

ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿ ಮೇಲೆ ಹಲ್ಲೆ

ಒಬ್ಬನಿಗೆ ಐದು, ಮೂವರಿಗೆ ಒಂದು ವರ್ಷ ಜೈಲು ಶಿಕ್ಷೆ

ಮೈಸೂರು, ಫೆ.14– ಜಮೀನಿಗೆ ಕರು ಬಿಟ್ಟಿದ್ದಾರೆ ಎಂಬ ಕ್ಷುಲ್ಲಕ ಕಾರಣಕ್ಕೆ ಅವಾಚ್ಯವಾಗಿ ನಿಂದಿಸಿ, ವ್ಯಕ್ತಿ ಮೇಲೆ ಹಲ್ಲೆ ನಡೆಸಿದ್ದವರಿಗೆ ಮೈಸೂರಿನ 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ನಂಜನಗೂಡು ತಾಲೂಕು, ಚಿನ್ನಂಬಳ್ಳಿ ಗ್ರಾಮದ ಆದರ್ಶ, ನಂಜುಂಡಸ್ವಾಮಿ, ನಂದೀಶ ಹಾಗೂ ನಾಗಮ್ಮ ಅವರಿಗೆ ಶಿಕ್ಷೆ ವಿಧಿಸಲಾಗಿದೆ. ಇವರು 2018ರ ಮಾ.30ರಂದು ತಮ್ಮ ಜಮೀನಿಗೆ ಕರು ಬಿಟ್ಟಿದ್ದಾರೆಂದು ಮಂಜು ಅಲಿಯಾಸ್ ರಘು ಮೇಲೆ ಹಲ್ಲೆ ನಡೆಸಿದ್ದರು.

ಕಟ್ಟಿ ಹಾಕಿದ್ದ ಕರು ಹಗ್ಗ ಕಿತ್ತುಕೊಂಡು ಪಕ್ಕದ ಜಮೀನಿಗೆ ಹೋಗಿತ್ತು. ಅದನ್ನು ಮಂಜು ಹಿಡಿದುಕೊಂಡು ಬರಲು ಹೋಗಿದ್ದಾಗ ಆದರ್ಶ್ ಕಪಾಲಕ್ಕೆ ಹೊಡೆದಿದ್ದ. ಬಳಿಕ ಆತನೊಂದಿಗೆ ನಂಜುಂಡಸ್ವಾಮಿ ಹಾಗೂ ನಂದೀಶ್ ಸೇರಿಕೊಂಡು ಮಚ್ಚು, ದೊಣ್ಣೆಗಳಿಂದ ಹಲ್ಲೆ ನಡೆಸಿದ್ದರು. ಈ ವೇಳೆ ನಾಗಮ್ಮ ಹಲ್ಲೆಗೆ ಕುಮ್ಮಕ್ಕು ನೀಡಿದ್ದರು ಎಂದು ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಅಂದಿನ ಸಬ್‌ಇನ್ಸ್‌ಪೆಕ್ಟರ್ ಅಮ್ಮಾಜಾನ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾ ಲಯದ ನ್ಯಾಯಾಧೀಶ ಮಲ್ಲನಗೌಡ ಅವರು ಸಾಕ್ಷ್ಯಾಧಾರ ಪರಿಶೀಲಿಸಿ, ಆರೋಪ ಸಾಭೀತಾದ ಹಿನ್ನೆಲೆಯಲ್ಲಿ 2ನೇ ಆರೋಪಿಗೆ 5 ವರ್ಷ, ಉಳಿದವರಿಗೆ ಒಂದು ವರ್ಷ ಜೈಲು ಶಿಕ್ಷೆ ಹಾಗೂ ಒಟ್ಟು 22,500 ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಎಸ್.ಟಿ. ಸುಧಾ ವಾದ ಮಂಡಿಸಿದ್ದರು.

ಗೌರವಾನ್ವಿತ ವಿಶೇಷ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮೈಸೂರು

ಆರ್.ಆರ್.ಟಿ.ನಂ: 483/2021

ಮೇಲ್ಮನವಿದಾರರು: ಶ್ರೀಮತಿ ಸಣ್ಣಮ್ಮ ಮತ್ತು ಇತರರು

ವಿರುದ್ಧ

ಎದುರುದಾರರು: ತಹಶೀಲ್ದಾರರು ಮೈಸೂರು ಮತ್ತು ಇತರರು.

ಪ್ರತಿವಾದಿ 11 ಮತ್ತು 17 ರಿಂದ 23:

11. ದೂಡ್ಡೆಗೌಡ ಬಿನ್ ಲೇಟ್ ಮುರಿಗೌಡ
17. ಕೆ.ವಿ.ನಾಗಪ್ಪ ಬಿನ್ ಲೇಟ್ ವೆಂಕಟರಾಮಣಯ್ಯ
18. ಕೆ.ಎ.ವೆಂಕಟಕೃಷ್ಣಯ್ಯ ಬಿನ್ ಲೇಟ್ ವೆಂಕಟ–ರಾಮಣಯ್ಯ
19. ಕೆ.ವಿ ವೆಂಕಟರಾಮಯ್ಯ ಬಿನ್ ಲೇಟ್ ವೆಂಕಟ–ರಾಮಣಯ್ಯ
20. ಕೆ.ವಿ ವೆಂಕಟಸುಬಯ್ಯ ಬಿನ್ ಲೇಟ್ ವೆಂಕಟ–ರಾಮಣಯ್ಯ
21. ಕೆ.ವಿ ವೆಂಕಟರಾಮಣಯ್ಯ ಬಿನ್ ಲೇಟ್ ವೆಂಕಟ–ರಾಮಣಯ್ಯ
22. ಕೆ.ವಿ ವೆಂಕಟದಾಸಪ್ಪ ಬಿನ್ ಲೇಟ್ ವಂಕಟ–ರಮಣಯ್ಯ
23. ಮುದಿಗೌಡ ಬಿನ್ ಕುಳ್ಳೆಗೌಡ

ಎಲ್ಲರವಾಸ : ಕರಕನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಮೈಸೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಮನವಿದಾರರು ಮೇಲ್ಕಂಡ ದಾವೆಯನ್ನು ಎದುರುದಾರರ ವಿರುದ್ಧ ಖಾತೆರದ್ದು ಕೋರಿ ಮೇಲ್ಕಂಡ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ, ದಾವೆಯು ದಿನಾಂಕ: 06.03.2025 ರಂದು ವಿಚಾರಣೆಗಾಗಿ ನಿಗದಿಯಾಗಿದ್ದು, ಸದರಿ ದಿನಾಂಕದಂದು ಮಧ್ಯಾಹ್ನ 03:00 ಗಂಟೆಗೆ ವಾಸಸ್ಥಳದ ವಿವರಗಳೊಡನೆ ಮೇಲೆ ನಮೂದು ಮಾಡಿರುವ ಪ್ರತಿವಾದಿ ಸಂಖ್ಯೆ: 7 ಮತ್ತು 17 ರಿಂದ 23 ಆದ ನೀವುಗಳು ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರತಿವಾದಿಗಳ ಗೈರುಹಾಜರಿಯಲ್ಲಿ ಏಕಪಕ್ಷೀಯ ಆದೇಶ ಹೊರಡಿಸಲಾಗುವುದು.

ದಿನಾಂಕ: 13.02.2025 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ವಾದಿ ಪರ ವಕೀಲರು
ರಘು.ಎ.ಎಸ್. ಬಿ.ಎ.ಎಲ್.ಎಲ್.ಬಿ
ನಂ: 2513, ಸಿಎಚ್ –34, 1ನೇ ಮಹಡಿ, ರೂಂ ನಂ.2
ನ್ಯೂ ಕಾಂತರಾಜ್ ಅರಸ್ ರಸ್ತೆ
ಕೆ.ಜಿ.ಕೊಪ್ಪಲು ಮೈಸೂರು–570009

ಸಹಿ/– ನ್ಯಾಯಾಲಯದ ಆದೇಶದ ಮೇರೆಗೆ.
ವಿಶೇಷ ಉಪವಿಭಾಗಧಿಕಾರಿಗಳ, ನ್ಯಾಯಾಲಯ,
ದಿನಾಂಕ: 13–02–2025. ಮೈಸೂರು



ಮಾನ್ಯ 3ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ಶ್ರೇಣಿ) ಮೈಸೂರು

ಅಸಲು ದಾವಾ ಸಂಖ್ಯೆ: 181 / 2019

ವಾದಿ: ಎಂ. ಆರ್. ನಾರಾಯಣಸ್ವಾಮಿ (ಮೌತಿ) ಅವರ ವಾರಸುದಾರರು ಮತ್ತು ಇತರರು

ವಿರುದ್ಧ

ಪ್ರತಿವಾದಿಗಳು : ಮಹದೇವಮ್ಮ ಮತ್ತು ಇತರರು.

6ನೇ ಪ್ರತಿವಾದಿ : ರಾಜಣ್ಣ ಎಸ್ ಬಿನ್ ಸೋಮಣ್ಣ ಆರ್. # 71, ಭೈರೇಶ್ವರ ನಗರ ಭೈರೇಶ್ವರ ದೇವಸ್ಥಾನದ ಹಿಂಭಾಗ ಮೈಸೂರು 570016

7ನೇ ಪ್ರತಿವಾದಿ : ಶಂಕರ್. ಎಸ್, ಪ್ರೊಪ್ರೇಟರ್ ಡಾಲರ್ಸ್ ಎಸ್ಟೇಟ್ ಪ್ರಾಪರ್ಟೀಸ್ ನಂ 411 ಬಿ ಬ್ಲಾಕ್, ಜೆ.ಪಿ.ನಗರ, ಮೈಸೂರು ಸಿಟಿ, ಮೈಸೂರು–570031

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ದಾವೆಯನ್ನು ವಾದಿಯೂ ಪ್ರತಿವಾದಿಗಳ ವಿರುದ್ಧ ಹೂಡಿದ್ದು. ಸದರಿ ದಾವೆಯಲ್ಲಿ ರಾಜಣ್ಣ.ಎಸ್ ಆದ ನೀವು 6ನೇ ಪ್ರತಿವಾದಿಯಾಗಿದ್ದು ಮತ್ತು ಶಂಕರ್.ಎಸ್ ಆದ ನೀವು 7ನೇ . ಪ್ರತಿವಾದಿಯಾಗಿದ್ದು, ನ್ಯಾಯಾಲಯದ ಆದೇಶ ದಂತೆ ಸದರಿ ದಾವೆಯೂ ದಿನಾಂಕ: 05/03/2025 ರಂದು ಬೆಳಗ್ಗೆ 11 ಗಂಟೆಗೆ ವಿಚಾರಣೆಗೆ ನಿಗದಿಯಾಗಿದ್ದು ಮೇಲೆ ಹೇಳದ ರಾಜಣ್ಣ.–ಎಸ್ ಮತ್ತು ಶಂಕರ್. ಎಸ್ ಆದ ನೀವಿಬ್ಬರು ಸದರಿ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸ ಬಹುದಾಗಿದೆ. ಒಂದು ವೇಳೆ ಸದರಿ ದಾವೆಗೆ ಸಂಬಂಧಿಸಿದಂತೆ ಸದರಿ ದಿನಾಂಕದಂದು ತಾವು ಗೈರು ಹಾಜರಾದಲ್ಲಿ ನ್ಯಾಯಾಲಯದಲ್ಲಿ ಸದರಿ ದಾವೆಯೂ ನಿಮ್ಮ ಗೈರು ಹಾಜರಿಯಲ್ಲಿ ಮುಂದುವರೆಯುತ್ತದೆ ಎಂದು ತಿಳಿಯುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
3ನೇ ಹಿರಿಯ ಸಿವಿಲ್, ನ್ಯಾಯಾಧೀಶರ
ನ್ಯಾಯಾಲಯ, ಮೈಸೂರು.

ಅರ್ಜಿದಾರರ ಪರ ವಕೀಲರು
ಎಂ.ಎಂ.ಉತ್ತಪ್ಪ(ಮನು) ಬಿ.ಎ., ಬಿ.ಎ.ಎಲ್ ಎಲ್.ಎಲ್.ಬಿ ವಕೀಲರು
ಕೆ.ಎ.ಆರ್.ನಂ. 42/1991, #864/ಸಿ. ಹೆಚ್ 26, ನಾರಾಯಣಶಾಸ್ತ್ರಿ, ಮೈಸೂರು
ದಿನಾಂಕ: 13–02–2025, ಸ್ಥಳ:– ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಕತ್ತೆ : ನನ್ನ ಯಜಮಾನ ನನಗೆ ಬಹಳ ಹೊಡಿತಾನೆ.
ನಾಯಿ : ಮತ್ತೆ ಅವನ ಮನೆ ಬಿಟ್ಟು ಓಡಿ ಹೋಗು.
ಕತ್ತೆ : ಆಗಲ್ಲಾ.
ನಾಯಿ : ಯಾಕೆ?
ಕತ್ತೆ : ಅವನ ಸುಂದರವಾದ ಮಗಳು ತರಲೆ ಮಾಡಿದಾಗ ಅವನು ಹೇಳುತ್ತಾನೆ. ನಿನ್ನ ಮದುವೆ ಆ ಕತ್ತೆ ಜೊತೆ ಮಾಡುತ್ತೇನೆ ನೋಡು. ಆ ಒಂದು ಆಸೆ ಮೇಲೆ ಅಲ್ಲಿದ್ದೀನಿ.

ಮೈಸೂರು ಮಿತ್ರ

ಶನಿವಾರ, 15 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೋಪ ಇದ್ದವನಿಗೆ ಬೇರೆ ಶತ್ರುವೇ ಬೇಡ. ಜ್ಞಾನವುಳ್ಳವನಿಗೆ ಬೇರೆ ಸಂಪತ್ತು ಬೇಡ. ಕರುಣೆ ಉಳ್ಳವನಿಗೆ ಮತ್ತಾವ ರಕ್ಷಣೆಯೂ ಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಪಿಗೆ ಹೋಗುವುದಕ್ಕಿಂತ, ಕೊಂಪೆಯಲ್ಲಿರುವುದೇ ಲೇಸು

ನಿಮ್ಮ ಪತ್ರಗಳು

ತ್ಯಾಜ್ಯ ಮತ್ತು ಮಹಾನಗರ ಪಾಲಿಕೆ

ಮಾನ್ಯರೆ,

ಕಳೆದ ಭಾನುವಾರ (9ನೇ ಫೆಬ್ರವರಿ) ಮೈಸೂರಿನ ಕಲಾಮಂದಿರದಲ್ಲಿ ಒಂದು 'ರಂಗ ಪ್ರವೇಶ' ಕಾರ್ಯಕ್ರಮ ನಡೆಯಿತು. ನಂತರ ಅತಿಥಿಗಳಿಗೆ ಊಟ ವಿತರಣೆ ನಡೆಯಿತು. ಇದರಿಂದ, ತ್ಯಾಜ್ಯ ವಸ್ತುಗಳು ಸಂಗ್ರಹವಾಗಿ ಮಾರನೆಯ ದಿನವಾದರೂ ಕಸಗಳನ್ನು ತೆಗೆಸದೆ ಅಹಿತಕರ ವಾತಾವರಣವು ನಿರ್ಮಾಣವಾಗಿತ್ತು. ಇದು ನಿಜಕ್ಕೂ ವಿಷಾದಕರ! ಇದೇ ಮಂಗಳವಾರದಂದು ಮೈಸೂರು ಮಿತ್ರದಲ್ಲಿ (ಪುಟ-4) ಈ ಕುರಿತು ವರದಿಯಾಗಿದೆ.

ಈ ರೀತಿಯ ವಿದ್ಯಮಾನಗಳಿಂದ ನಮ್ಮ ನಗರದ ಪಾಲಿಕೆಯು ಸಕ್ರಿಯ ಕ್ರಮಗಳನ್ನು ಮತ್ತು ಏರ್ಪಾಡುಗಳನ್ನು ಮಾಡಿಕೊಂಡು, ತನ್ನ ಪಾತ್ರವನ್ನು ಸಚೇತನಗೊಳಿಸಲು ಮುಂದಾಗಬೇಕು. ಹೇಗೂ ನಮ್ಮ ನಗರವು ದೇಶದ 'ಸ್ವಚ್ಛ ನಗರ' ಬಿರುದಿಗೆ ಪ್ರತಿ ಸಲವೂ ಯತ್ನಿಸುತ್ತಲೇ ಬಂದಿದೆ. ನಗರದಲ್ಲಿ ಎಲ್ಲೇ ಊಟ, ತಿನಿಸುಗಳ ವಿತರಣೆಯನ್ನು ಸಾರ್ವಜನಿಕವಾಗಿ ವ್ಯವಸ್ಥೆ ಮಾಡಿದರೂ, ಅದರ ಮಾಹಿತಿಯನ್ನು ಕಡ್ಡಾಯವಾಗಿ ಪಾಲಿಕೆಯ ಲಕ್ಷ್ಯಕ್ಕೆ ತರಬೇಕು ಎಂದು ನಿಯಮ ಮಾಡುವುದು. ಅಂತಹ ಕಾರ್ಯಕ್ರಮಕ್ಕೆ ಪೂರ್ವಭಾವಿ ಅನುಮತಿ ಪಡೆಯಬೇಕು. ನಡೆಯುವ ಸ್ಥಳ, ನಿರೀಕ್ಷಿತ ಅತಿಥಿಗಳ ಸಂಖ್ಯೆ ಮುಂತಾದ ಮಾಹಿತಿಗಳನ್ನು ಪಾಲಿಕೆಗೆ ತಿಳಿಸತಕ್ಕದ್ದು. ಪಾಲಿಕೆಯು ಕಾರ್ಯಕ್ರಮದ ಪ್ರಮಾಣ ನೋಡಿಕೊಂಡು, ತನ್ನ ಕಡೆಯಿಂದ ಸಾಕಷ್ಟು ಸಿಬ್ಬಂದಿ, ಅಗತ್ಯ ಪರಿಕರಗಳ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ಹೌದು, ಇದು ವೆಚ್ಚದ ಬಾಬತ್ತು! ಪಾಲಿಕೆಗೆ ಹಣದ ಅವಶ್ಯಕತೆ ಇರುತ್ತದೆ. ಪಾಲಿಕೆಯು ಅನುಮತಿ ಮಂಜೂರು ಮಾಡುವ ಸಮಯದಲ್ಲಿ ಇದಕ್ಕೆ ಇಂತಿಷ್ಟು ಅಂದಾಜು ಶುಲ್ಕ ಎಂದು ನಿಗದಿಪಡಿಸುವುದು. ಆಯೋಜಕರು ಅಷ್ಟು ಶುಲ್ಕವನ್ನು ಪಾಲಿಕೆಗೆ ಸಲ್ಲಿಸಿದ ನಂತರವೇ ಕಾರ್ಯಕ್ರಮವನ್ನು ನಡೆಸಲು ಪರವಾನಗಿ ನೀಡತಕ್ಕದ್ದು. ಕಾರ್ಯಕ್ರಮದ ತರುವಾಯ ತ್ಯಾಜ್ಯ ವಿಲೇವಾರಿ ಮತ್ತು ಶೌಚಾಲಯಗಳನ್ನು ಪಾಲಿಕೆಯು ವಹಿಸಿಕೊಂಡು, ಎಲ್ಲವನ್ನೂ ಕ್ಲೀನಾಗಿ ಸಂಪನ್ನಗೊಳಿಸುವಲ್ಲಿ ಪಾಲಿಕೆಯ ಪಾತ್ರವು ಎಷ್ಟು ಮಹತ್ವದ್ದು ಸಂಬಂಧಪಟ್ಟವರಿಗೆ ಮನವರಿಕೆ ಆದೀತು.

–ಡಿ.ವಿ.ಎಂ.ಪ್ರಕಾಶ್, ಗೋಕುಲ, ಮೈಸೂರು.

ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ ಸ್ವಾಗತಾರ್ಹ

ಮಾನ್ಯರೆ,

ಬಡವರು ಮತ್ತು ಮಧ್ಯಮ ವರ್ಗದ ಮೇಲಿನ ದೌರ್ಜನ್ಯ ತಪ್ಪಿಸುವ ಸಲುವಾಗಿ ಕರ್ನಾಟಕ ಸರಕಾರಕ್ಕೆ ಬಲಿಷ್ಟ ಕಾನೂನಾತ್ಮಕ ಅಸ್ತ್ರ ಸಿಕ್ಕಿದಂತಾಗಿದೆ. ರಾಜ್ಯ ಸರ್ಕಾರ ರೂಪಿಸಿದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿರುವುದು ಸ್ವಾಗತ. ಈ ಅಂಕಿತದಿಂದ ವಸೂಲಿ ನೆಪದಲ್ಲಿ ದೈಹಿಕ ಹಿಂಸೆ ಮಾಡುವುದು ಸುತ್ತಮುತ್ತಲಿನ ನಿವಾಸಿಗಳ ಎದುರು ಅವಮಾನ ಮಾಡುವುದು, ಮನೆಗಳ ಮೇಲೆ ಸಾಲದ ವಿವರವನ್ನು ಬರೆಯುವುದು ನಿಂತರೆ ಈ ಅಂಕಿತದಿಂದ ಸಾಲಗಾರರಿಗೆ ಕೊಂಚ ನೆಮ್ಮದಿ ಸಿಗಬಹುದು. ರಾಜ್ಯದಲ್ಲಿ ಕಳೆದ ಕೆಲವು ತಿಂಗಳಿಂದ ಹಲವಾರು ಜನರ ಆತ್ಮಹತ್ಯೆಗೆ ಕಾರಣವಾಗಿದ್ದ ಸಾಲ ವಸೂಲಾತಿ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಈ ಸುಗ್ರೀವಾಜ್ಞೆಗೆ ಷರತ್ತುಗಳೊಂದಿಗೆ ರಾಜ್ಯಪಾಲರು ಅಂಕಿತ ಹಾಕಿರುವುದು ಸಾಲ ವಸೂಲಿಗಾರರಿಗೆ ಈ ಅಂಕಿತ ಅಂಕುಶವಾಗಲಿದೀಯೆ ಎಂದು ಕಾದು ನೋಡಬೇಕಾಗಿದೆ

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ವಾಹನ ತೆಗೆಯುವಾಗ ಎಚ್ಚರ: ನಾಯಿಗಳು ಕಾರಿನಡಿ ಮಲಗಿರುತ್ತವೆ

ಮಾನ್ಯರೆ,



ಬೇಸಿಗೆ ಶುರುವಾಗಿ ತಾಪಮಾನ ವಿಪರೀತವಾಗಿರುವ ಹೊತ್ತಿನಲ್ಲಿ ಅದರಿಂದ ತಪ್ಪಿಸಿಕೊಳ್ಳಲು ಹಲವಾರು ಪ್ರಾಣಿಗಳು ಮರ-ಗಿಡಗಳ ನೆರಳಲ್ಲಿ ಆಶ್ರಯ ಪಡೆಯುತ್ತವೆ. ಅದರಲ್ಲೂ, ನಾಯಿ ಮತ್ತು ನಾಯಿ ಮರಿಗಳು ಮರ-ಗಿಡಗಳು ಮಾತ್ರವಲ್ಲದೆ, ನಿಂತಿರುವ ವಾಹನಗಳ ಕೆಳಗೆ ಮಲಗುತ್ತವೆ. ಹೀಗಾಗಿ ವಾಹನ ಚಾಲಕರು ವಾಹನಗಳನ್ನು ತೆಗೆಯುವ ಮುನ್ನ ಎಚ್ಚರವಹಿಸಬೇಕಾಗಿದೆ. ವಾಹನದ ಸುತ್ತಮುತ್ತ ಹಾಗೂ ಕೆಳಭಾಗದಲ್ಲಿ ಪ್ರಾಣಿಗಳು, ಪುಟ್ಟಮಕ್ಕಳು ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ವಾಹನಗಳನ್ನು ತೆಗೆಯಬೇಕೆಂದು ಈ ಮೂಲಕ ಮನವಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಯಾವ ಪುರುಷಾರ್ಥಕ್ಕೆ ಈ ಹೊಸ ಇಂದಿರಾ ಕ್ಯಾಂಟೀನ್




ಮಾನ್ಯರೆ,

ಮೈಸೂರು ತಾಲೂಕು ಹಿನಕಲ್ ಗ್ರಾಮ ಪಂಚಾಯಿತಿಯಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಇಂದಿರಾ ಕ್ಯಾಂಟೀನ್. ಈಗಾಗಲೇ ನೂರಾರು ಇಂದಿರಾ ಕ್ಯಾಂಟೀನ್‌ಗಳು ನಿಷ್ಕ್ರಿಯವಾಗಿವೆ. ಇದು ಯಾವ ಪುರುಷಾರ್ಥಕ್ಕೆ ಅರ್ಥವಾಗುತ್ತಿಲ್ಲ. ಜನರ ತೆರಿಗೆ ದುಡ್ಡು ಈ ರೀತಿ ಪೋಲಾಗುವುದು ಎಷ್ಟು ಸರಿ. ನೂರು ತಿಂಡಿ ಊಟ ಕೊಟ್ಟು, ಸಾವಿರ ಸಾವಿರ ತಿಂಡಿ ಊಟದ ದುಡ್ಡು ದೋಚುವ ಈ ಸ್ಕೀಮ್ ಯಾರಿಗೆ ಬೇಕಿತ್ತು? ಈ ಕಟ್ಟಡಕ್ಕೆ ಒಂದಕ್ಕೆ ಎರಡು ಖರ್ಚು ತೋರಿಸಿ ಹಣ ದೋಚುವುದು ಓಪನ್ ಸೀಕ್ರೆಟ್ ಅಲ್ಲವೇ? ಇದು ಕಂಟ್ರಾಕ್ಟರ್, ಇಂಜಿನಿಯರ್ ಮನೆ ಉದ್ಧಾರ ಮಾಡುವ ಯೋಜನೆ ಅಷ್ಟೇ.

– ವಿ.ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.

ಮನವೇ ಬದಲಾವಣೆಗೆ ನೀ ಮೊದಲಾಗು...





ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಸಹಾಯಕ ಪ್ರಾಧ್ಯಾಪಕ,
ಮೊ: 77958 62281

> ಸಾಮಾನ್ಯವಾಗಿ ಬದಲಾವಣೆ ಎಂದರೆ ನಮ್ಮನ್ನು ನಾವು ಪರಿವರ್ತಿಸಿಕೊಳ್ಳುವುದು, ಮಾರ್ಪಾಡು ಮಾಡಿಕೊಳ್ಳುವುದು ಎಂಬರ್ಥವಿದೆ. ಅಂತೆಯೇ ಬದಲಾಗುವುದೆಂದರೆ ಇರುವ ಸ್ಥಿತಿಯಿಂದ ಕದಲುವುದು ಎಂದರ್ಥ. ಅಂದರೆ ಇರುವ ಸ್ಥಿತಿಯಿಂದ ಉತ್ತಮತ್ವಕ್ಕೆ ಏರುವುದು ಇಲ್ಲವೆ ಇರುವುದಕ್ಕಿಂತಲೂ ಅಧೋಗತಿಗೆ ಜಾರುವುದು. ಮೊದಲ ಸ್ಥಿತಿ ಅನುಸರಣ ಯೋಗ್ಯವಾಗಿರುತ್ತದೆ, ಎರಡನೆಯ ಸ್ಥಿತಿ ಯೋಗ್ಯರನ್ನು ಅಯೋಗ್ಯರನ್ನಾಗಿ ಮಾಡುತ್ತದೆ.

ಬದುಕು ಎಂದಿಗೂ ನಿಂತ ನೀರಲ್ಲ ಅದು ಸದಾ ಕಾಲ ಹರಿಯುವ ತೊರೆ. ನಿಂತ ನೀರಾದ ಬದುಕು ಕೆರೆ ಎಂದು ಕರೆಸಿಕೊಳ್ಳುತ್ತದೆ. ಆದರೆ ಹರಿಯುತ್ತಾ ಸಾಗಿದಾಗ ತೊರೆ ಎಂದು ಕರೆಸಿಕೊಂಡು ಜೀವ ಚೈತನ್ಯದ ಚಿಲುಮೆಯನ್ನು ತನ್ನೊಳಗೆ ಗರ್ಭಿಕರಿಸಿಕೊಳ್ಳುತ್ತದೆ. 'ಅಟ್ಮೇಲೆ ಒಲೆ ಉರಿತು ಕೆಟ್ಮೇಲೆ ಬುದ್ಧಿ ಬಂತು', 'ಕಲ್ತಿದ್ ಬುಡೆ ಕಲ್ಕೇತಿ ಅಂದ್ರೆ ಊರ್‌ಬಿಟ್ರು ಬಿಡಲ್ಲ ಅಂದ್ಲಂತೆ', 'ಹುಟ್ಗುಣ ಸುಟ್ರು ಹೋಗಲ್ಲ'... ಎಂಬೆಲ್ಲ ಮಾತುಗಳು ಬದಲಾಗು, ಬದಲಾವಣೆಗೆ ನೀ ಮೊದಲಾಗು ಎಂದೇ ತಿಳಿಸುತ್ತಿವೆ. ಅನುಪಯುಕ್ತವೆನಿಸಿದ ಅಕಾರ್ಯಕ್ಕೆ ತಲೆ ಕೆಡಿಸಿಕೊಳ್ಳುವುದಕ್ಕಿಂತ ಅಗತ್ಯವಾದ ಕಾರ್ಯಕ್ಕೆ ತನ್ನ ಮನವನ್ನು ಒಗ್ಗಿಸಿಕೊಂಡರೆ ಅನರ್ಘ್ಯವಾದ ಕಾರ್ಯ ಸಾಧನೆಯನ್ನು ಮಾಡುವುದರಲ್ಲಿ ಅನುಮಾನವೇ ಇಲ್ಲ. ಲೇಸ ಮರೆತು ಕಷ್ಟಕ್ಕೆ ಕಡಿದಾಡುವವರೇ ಜಗದಲ್ಲಿ ತುಂಬಿರುವಾಗ ಬದಲಾಗುವ ಮನಸುಗಳು ಬದಲಾಗುವುದಾದರೂ ಎಲ್ಲಿ. ಬದಲಾವಣೆ ಜಗದ ನಿಯಮ. ಹೌದು ಸದಾ ಕಾಲ ಹರಿಯುವ ನದಿಯು ಬದಲಾಗುತ್ತದೆ. ಬದಲಾಗಬೇಕು ನಿಜ ಹಾಗೆಂದ ಮಾತ್ರಕ್ಕೆ ನಮ್ಮನ್ನು ನಾವು ಗುರುತಿಸಲಾರದಷ್ಟು, ಮೈ ಮರೆತು ಹೋಗುವಷ್ಟು ಬದಲಾಗಬಾರದು. ವ್ಯಕ್ತಿ ಬದಲಾವಣೆಗೆ ಸದಾ ಹಂಬಲಿಸುತ್ತಿರುತ್ತಾನೆ. ಅದಕ್ಕಾಗಿಯೇ ಹೊಸ ಹೊಸ ವಸ್ತುಗಳು ಉತ್ಪನ್ನವಾಗುತ್ತಿರುವುದು. ಅವುಗಳನ್ನು ಹೊಂದುವುದರಿಂದ ತಮ್ಮಲೇನೋ ವಿಭಿನ್ನತೆಗೆ ಮೇಲ್ಪಂಕ್ತಿಯಾಗುತ್ತದೆ ಎಂದು, ಇಲ್ಲವೇ ಒಣಪ್ರತಿಷ್ಠೆಗೆ ಕೊಂಬು ಮೂಡಿಸಲು ಸಹಕಾರಿಯಾಗುತ್ತದೆ ಎಂಬ ಮತಿಯಭ್ರಾಂತಿಗೆ ಇಂದಿನ ಜನಾಂಗ ಒಳಗಾಗಿದೆ. ಅದರ ಮುನ್ನೆಲೆಯಿಂದಲೇ ನವನಾಗರೀಕತೆಯ ಜೀವನ ಜೀವಂತಿಕೆ ಪಡೆದು ಉಸಿರಾಡುತ್ತಿದೆ.

ಸಾಮಾನ್ಯವಾಗಿ ಬದಲಾವಣೆ ಎಂದರೆ ನಮ್ಮನ್ನು ನಾವು ಪರಿವರ್ತಿಸಿಕೊಳ್ಳುವುದು, ಮಾರ್ಪಾಡು ಮಾಡಿಕೊಳ್ಳುವುದು ಎಂಬರ್ಥವಿದೆ. ಅಂತೆಯೇ ಬದಲಾಗುವುದೆಂದರೆ ಇರುವ ಸ್ಥಿತಿಯಿಂದ ಕದಲುವುದು ಎಂದರ್ಥ. ಅಂದರೆ ಇರುವ ಸ್ಥಿತಿಯಿಂದ ಉತ್ತಮತ್ವಕ್ಕೆ ಏರುವುದು ಇಲ್ಲವೆ ಇರುವುದಕ್ಕಿಂತಲೂ ಅಧೋಗತಿಗೆ ಜಾರುವುದು. ಮೊದಲ ಸ್ಥಿತಿ ಅನುಸರಣ ಯೋಗ್ಯವಾಗಿರುತ್ತದೆ, ಎರಡನೆಯ ಸ್ಥಿತಿ ಯೋಗ್ಯರನ್ನು ಅಯೋಗ್ಯರನ್ನಾಗಿ ಮಾಡುತ್ತದೆ. ಅದಕ್ಕಾಗಿಯೇ ಭಕ್ತಿಭಂಡಾರಿ ಬಸವಣ್ಣನವರು

ನೂರನೋದಿ, ನೂರ ಕೇಳಿದಡೇನು?
ಆಸೆ ಹರಿಯದು, ರೋಷ ಬಿಡದು.
ಮಜ್ಜನಕ್ಕೆರೆದು ಫಲವೇನು?
ಮಾತಿನಂತೆ ಮನವಿಲ್ಲದ
ಜಾತಿ ಡಂಬರ ನೋಡಿ ನಗುವ
ನಮ್ಮ ಕೂಡಲಸಂಗಮದೇವ.

ಆದರೆ, ಆಸೆಯನ್ನು ಬಿಡದೆ, ಕ್ರೋಧವನ್ನು ತ್ಯಜಿಸದೆ ಎಷ್ಟು ಓದಿದರೇನು, ಎಷ್ಟು ಕೇಳಿದರೇನು. ಅವರು ಮಡಿ ಸ್ನಾನ ಮಾಡಿದರೂ ಪವಿತ್ರವಾಗಲೂ ಸಾಧ್ಯವಿಲ್ಲ. ಮಾತಿನಲೊಂದು ಮನದಲ್ಲೊಂದು ಇರುವ ಜಾತಿ ಜಾತಿ ಎನ್ನುವವರ ನೋಡಿ ನಗುತ್ತಿದ್ದಾನೆ ನಮ್ಮ ಕೂಡಲಸಂಗಮದೇವಾ ಎಂಬ ಮಾತು ಅಕ್ಷರಶಃ ಸತ್ಯವಾದುವು. ಎಷ್ಟೆಲ್ಲಾ ಧರ್ಮಗ್ರಂಥಗಳನ್ನು, ವೇದ, ಉಪನಿಷತ್ತುಗಳು, ಆಗಮ-ಶಾಸ್ತ್ರಗಳು, ವ್ಯಕ್ತಿತ್ವ ವಿಕಸನದ ಹೊತ್ತಗೆಗಳನ್ನು, ವೈಚಾರಿಕ ಸಾಹಿತ್ಯವನ್ನು, ವಚನಗಳನ್ನು ಓದಿದರೂ, ಏನೆಲ್ಲಾ ಪುರಾಣ, ಪುಣ್ಯಕಥೆಗಳನ್ನು ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ಕೇಳಿದರೂ ವ್ಯಕ್ತಿಯು ಏಕೆ ಬದಲಾಗುವುದಿಲ್ಲ ಬದಲಿಗೆ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎನ್ನುವಂತೆ, ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳುವ ಭಾವ ದೂರವಾಗಿ ಬದಲಾವಣೆಗೆ ಮೈ ಒಡ್ಡಿಕೊಳ್ಳಬೇಕು.

ಎರಡು ಬೇರೆ ಬೇರೆ ಶ್ವೇತ ವರ್ಣದ ಬಟ್ಟೆಗಳಿದ್ದು ಒಂದು ಬಟ್ಟೆಗೆ ನೀಲಿ ಮತ್ತು ಮತ್ತೊಂದು ಬಟ್ಟೆಗೆ ಕಾವಿಯನ್ನು ಹಾಕಿ ಪರೀಕ್ಷಿಸಿದರೆ ನೀಲಿ ಬಣ್ಣ ತನ್ನ ಬಣ್ಣವನ್ನು ಕಳೆದುಕೊಳ್ಳುತ್ತದೆ. ಆದರೆ ಕಾವಿ ತನ್ನ ಬಣ್ಣವನ್ನು ಎಂದಿಗೂ ಬಿಡದೆ ಗಟ್ಟಿಯಾಗಿ ಹಿಡಿದಿಟ್ಟುಕೊಂಡಿರುತ್ತದೆ. ಅದೇ ರೀತಿ ನಾವು ನೀಲಿಗೆ ಅದ್ದಿರುವ ವಸ್ತ್ರಗಳಾಗದೆ ಕಾವಿ ಬಣ್ಣಕ್ಕೆ ಅದ್ದಿರುವ ವಸ್ತ್ರಗಳಾಗಬೇಕು. ಇದೇ ನಿಜವಾದ ಬದಲಾವಣೆ. ಅರಿವಿನಿಂದ ಗಳಿಸಿಕೊಂಡ ಆದರ್ಶಗಳನ್ನು ಗಾಳಿಗೆ ತೂರಿ ಬಿಡದೆ ಅವುಗಳನ್ನು ಅಂತರಂಗದಲ್ಲಿ ಹಿಡಿದಿಟ್ಟುಕೊಂಡು ಮುಂದೆ ಸಾಗಬೇಕು. ಅದು ಅಷ್ಟು ಸುಲಭದ ಮಾತಲ್ಲ. ವ್ಯಕ್ತಿಯ ಒಳ ಮನಸ್ಸು ಬದಲಾವಣೆಯನ್ನು ತಡೆಯುತ್ತಿರುತ್ತದೆ. ತನ್ನ ಬದಲಾವಣೆಗೆ ತಾನೇ ಮುಳ್ಳಾಗುತ್ತಿರುತ್ತದೆ. ಒಳಗಿನ ಆ ಮುಖವನ್ನು ಎದುರಿಸುವುದು ಸರಳ ಸುಲಭವಲ್ಲ ಆಗೆಂದರೆ ನೈಜತೆಗೆ ನಾವು ಮುಖಾಮುಖಿಯಾಗುವುದು ಎಂದರ್ಥ. ಹೊರ ಮುಖ ನಾವೇ ನಿರ್ಮಿಸಿಕೊಂಡ ಭ್ರಮಾಲೋಕವಾಗಿರುತ್ತದೆ. ಆ ಭ್ರಮಾಲೋಕದಲ್ಲಿ ನಾನೇ ಸರಿ ನನ್ನದೆ ಸತ್ಯ ಎಂಬ ಒಣ ಧೋರಣೆಗಳು ಮನವನ್ನು ಆಳುತ್ತಿರುತ್ತವೆ. ನಾವು ಸಮಸ್ಯೆಗಳನ್ನು, ತಪ್ಪುಗಳನ್ನು ಜಗದಲ್ಲಿ ಹುಡುಕುತ್ತಿರುತ್ತೇವೆ. ಆದರೆ ನಮ್ಮೊಳಗಿನ ಆ ತಪ್ಪುಗಳ ಬಗ್ಗೆ ಸ್ವಲ್ಪವೂ ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ನಾವು ಬದಲಾದರೆ ಸುತ್ತಣ ಜಗತ್ತು ಬದಲಾಗುತ್ತದೆ ಎಂಬ ಸಾಮಾನ್ಯ ವಿಚಾರವನ್ನು ತಿಳಿಯದ ಮಹಾಶಯರು ಇರುತ್ತಾರೆ. ಎಲ್ಲಿಯೋ ಓದಿದ್ದು, ಕೇಳಿದ್ದು ನಿರುಮ್ಮಳವಾಗಿ ಕೈಬೀಸಿ ಬಯಲ ಹೆಜ್ಜೆಯನ್ನು ಹಾಕಲು ವ್ಯವಸ್ಥೆ ಮಾಡಿದಾಗಲೂ ಆಕಾಶದಲ್ಲಿ ಹಾರಲು ಆಗದಷ್ಟು ರೆಕ್ಕೆಗಳು ಬಲುಭಾರವಾಗಿರುತ್ತವೆ.

ವ್ಯಕ್ತಿಯು ನಿತ್ಯ ಜೀವನದಲ್ಲಿ ಅರಿತೋ ಅರಿಯದೆಯೋ ನೂರಾರು ತಪ್ಪುಗಳನ್ನು ಮಾಡುತ್ತಿರುತ್ತಾನೆ. ಆದರೆ ಅದೇ ತಪ್ಪುಗಳನ್ನು ಪದೇಪದೆ ಮಾಡದೆ ಹೊಸ ತಪ್ಪುಗಳಿಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ತಪ್ಪು ಮಾಡುವುದು ಸಹಜ ತಿದ್ದಿ ನಡೆಯೋನು ಮನುಜ. ಅಂತೆಯೇ ನಾವು ಮಾಡಿದ ತಪ್ಪುಗಳಿಂದಲೂ ಕಲಿಯಬೇಕಾಗಿರುವುದು ಅಪಾರವಾಗಿರುತ್ತದೆ. ಅಂತಹ ತಪ್ಪುಗಳಿಂದ ನಮ್ಮ ನಡೆಯನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ತರಗತಿಯಲ್ಲಿ ಬೋಧಿಸುವಾಗ ಸಾಕಷ್ಟು ಅನುಭವದ ಮತ್ತು ಸ್ಫೂರ್ತಿದಾಯಕವಾದ ಕಥೆಗಳನ್ನು ಹೇಳುತ್ತಲೇ ಪಾಠವನ್ನು ಬೋಧಿಸುವುದು ನನ್ನ ಹವ್ಯಾಸವಾದರೂ ವಿದ್ಯಾರ್ಥಿ ಮಹಾಶಯರು ಅವುಗಳಿಗೆ ವಿಮುಖರಾಗಿಯೇ ವರ್ತಿಸುವುದನ್ನು ಕಂಡಾಗ ಮನಕೆ ದುಗುಡವಾಗುತ್ತದೆ. ಕಾಪಿ ಮಾಡುವುದು ನಮ್ಮ ಆಜನ್ಮ ಸಿದ್ಧಹಕ್ಕು ಎಂಬಂತೆ ತಮ್ಮ ಹಕ್ಕನ್ನು ಅದೆಗೋ ಕಣ್ಣಂಚಲ್ಲೇ ಚಲಾಯಿಸಿ ಬಿಟ್ಟಿರುತ್ತಾರೆ. ಈ ತಪ್ಪಿನ ಅರಿವಾಗುವುದಾದರೂ ಎಂದು ಕಾದು ನೋಡಬೇಕಿದೆ. ನಮ್ಮ ಬೋಧನೆ ಅವರ ಪಾಲಿಗದುವೆ ವೇದನೆ, ರೋಧನೆ ಎನಿಸುತ್ತದೋ ಏನೋ ಅರಿಯದು. ಕೋಣನ ಮುಂದೆ ಕಿಂದರಿ ಬಾರಿಸಿದಂತೆ ಮುಂದುವರೆದು ಕುರುಡನ ಮುಂದೆ ಎಷ್ಟೇ ಅದ್ಭುತ ನೃತ್ಯ ಮಾಡಿದರೇನು?, ಕಿವುಡನ ಎದುರು ಸುಶ್ರಾವ್ಯವಾಗಿ ಹಾಡಿದರೇನು? ಇಬ್ಬರೂ ಆ ಎರಡು ಅಮೋಘ ಪ್ರತಿಭೆಯನ್ನು ಆಸ್ವಾದಿಸಲಾರರು. ಆದ್ದರಿಂದ ಪ್ರತಿಯೋರ್ವರೂ ತಮ್ಮ ತಮ್ಮ ಮಿತಿಯನ್ನು ಅರಿತುಕೊಂಡು ನಡೆಯದಿದ್ದರೆ ನಮ್ಮ ವ್ಯಕ್ತಿತ್ವ ಅರಳುವುದಿಲ್ಲ.

ಹವ್ಯಾಸ ಬದಲಿಸು ಹಣೇ ಬರಹ ಬದಲಾದೀತು
ದೃಷ್ಟಿ ಬದಲಿಸು ದೃಶ್ಯ ಬದಲಾದೀತು.
ದೋಣಿ ಬದಲಿಸುವ ಅಗತ್ಯವಿಲ್ಲ
ದಿಕ್ಕು ಬದಲಾಯಿಸಿದರೆ ಸಾಕು
ಬದುಕಿನ ದಡವನ್ನು ಮುಟ್ಟಬಹುದು
ಹಾಗೆಯೇ ಸಾಧನೆಯ ಶಿಖರವನ್ನು ಏರಬಹುದು।.

ಈ ಅಮೃತವಾಣಿಗೆ ಇಂಬುಕೊಡುವಂತ ನೀತಿಕಥೆಯೊಂದು ಪ್ರಸ್ತುತ ಲೇಖನವನ್ನು ಗಟ್ಟಿಗೊಳಿಸುವುದರಲ್ಲಿ ಎರಡು ಮಾತಿಲ್ಲ.

ಒಂದು ವಠಾರ, ವಠಾರವೆಂದರೆ ಕೇಳಬೇಕೇ ಸಾಕಷ್ಟು ಸಂಸಾರಗಳು ವಾಸವಾಗಿರುತ್ತವೆ. ಅದರಲ್ಲಿ ಒಂದು ಮನೆಗೆ ನವದಂಪತಿಗಳು ಹೊಸದಾಗಿ ಬಾಡಿಗೆಗೆ ಬರುತ್ತಾರೆ. ಅಕ್ಕ-ಪಕ್ಕದವರಿಗೆ ಕುತೂಹಲ; ಅಲ್ಲಲ್ಲ ಕೆಟ್ಟ ಕುತೂಹಲ. ಯಾಕೆಂದರೆ ನಮ್ಮ ಜನರ ಸ್ವಭಾವವೇ ಅಷ್ಟು ಅನ್ನಿಸುತ್ತದೆ. ತನ್ನ ತಟ್ಟೆಯಲ್ಲಿ ಹೆಗಣ ಸತ್ತು ಬಿದ್ದಿದ್ದರೂ ಪಕ್ಕದವರ ತಟ್ಟೆಯಲ್ಲಿ ಸತ್ತ ನೊಣವ ತೋರಿಸಿ ತಾವೇನೋ ಮಹಾನ್ ಘನಕಾರ್ಯ ಮಾಡಿದೆವು ಎಂದು ಜಂಬದಿಂದ ಬೀಗುವವರಿಗೇನು ಕಮ್ಮಿ ಇಲ್ಲ. ಇಂತದ್ದೆ ಒಂದು ಮನಸ್ಥಿತಿಯ ಹೆಂಗಸು ಮನೆಯ ಎದುರಲ್ಲೇ ವಾಸಿಸುತ್ತಿರುತ್ತಾಳೆ. ಒಂದೆರಡು ದಿನಗಳು ಕಳೆಯಲು ನವದಂಪತಿಯ ಹೆಂಡತಿ ಬೆಳಗ್ಗೆ ಬಟ್ಟೆಗಳನ್ನು ಒಗೆದು ಒಣಗಿಸಲು ಹಾಕಿರುವುದನ್ನು ಎದುರು ಮನೆಯ ಹೆಂಗಸು ಕಿಟಕಿಯಿಂದಲೇ ನೋಡುತ್ತಾ ನೀಟಾಗಿ ಬಟ್ಟೆ ಒಗೆಯಲು ಈಕೆಗೆ ಗೊತ್ತಿಲ್ಲದಿರಬಹುದು. ಅಲ್ಲವಾದರೆ ಕೊಳೆಯು ಹೋಗುವಂತ ಸೋಪು ಅವಳಲ್ಲಿ ಇಲ್ಲದಿರಬಹುದು. ಇದು ಪ್ರತಿ ದಿನದ ಸುದ್ದಿಯಂತೆ ಎದುರು ಮನೆಯಾಕೆ ಬಟ್ಟೆಗಳನ್ನು ಒಗೆದು ಹಾಕುವಾಗಲೆಲ್ಲ ಕಿಟಕಿಯಿಂದ ನೋಡುತ್ತಲೇ ತನ್ನ ಪತಿಯೊಂದಿಗೆ ಕುಹಕವಾಡುತ್ತಾ ಇರಲು ಆತ ಮಾತ್ರ ಯಾವುದೇ ಪ್ರತಿಕ್ರಿಯೆ ನೀಡದೆ ಸುಮ್ಮನಿದ್ದು ಬಿಡುತ್ತಿದ್ದ. ಹೀಗೆ ಕಾಲ ಉರುಳಿತು. ಒಂದು ದಿನ ಬೆಳಗ್ಗೆ ಎದುರಿಗೆ ನೋಡಿದಾಗ ಒಣಗಿಸಲು ನೇತು ಹಾಕಿದ್ದ ಬಟ್ಟೆಗಳು ಶುಚಿಯಾಗಿರುವುದನ್ನು ಕಂಡು ಅತ್ಯಾಶ್ಚರ್ಯದಿಂದ ತನ್ನ ಪತಿಯೊಂದಿಗೆ 'ರೀ ನೋಡಿ ಆಕೆ ಇಂದು ಚೆನ್ನಾಗಿ ಬಟ್ಟೆ ಒಗೆಯುವುದನ್ನು ಯಾರಿಂದಲೋ ಕಲಿತ್ತಿದ್ದಾಳೆ ಎನ್ನಿಸುತಿದೆ. ನನಗಂತೂ ಆಕೆಯನ್ನು ನೆನೆಸಿಕೊಂಡರೆ ತಡೆಯಲಾರದ ನಗು ಬರುತ್ತಿದೆ' ಎಂದು ನಗುವಿನ ಕಟ್ಟೆ ಒಡೆಯುವಷ್ಟು ಗಹಗಹಿಸುತ್ತಿರಲು, ಪತಿ ಮಹಾಶಯ ಇಂದು ನೀನು ನಿದ್ದೆಯ ಮಂಪರಿನಿಂದ ಏಳುವುದಕ್ಕೆ ಮೊದಲೇ ನಾನು ಎದ್ದು ನಮ್ಮ ಮನೆಯ ಕಿಟಕಿ ಗಾಜುಗಳನ್ನು ಒಂದು ರವಷ್ಟು ಧೂಳಿಲ್ಲದಂತೆ ಶುಚಿಗೊಳಿಸಿದೆ ಎಂದು ಹೇಳಿದ. ಗಂಡನ ಮಾತಿಗೆ ದಂಗು ಬಡಿದ ಮೋರೆಯನ್ನು ಒರೆಸಿಕೊಳ್ಳುತ್ತಾ ತನ್ನ ತಪ್ಪಿಗಾಗಿ ತನ್ನನ್ನೇ ಹಳಿದುಕೊಳ್ಳುವಂತಾಯಿತು. ಆಕೆಗೆ ತನ್ನ ಮಾತೆ ಉಗುಳಿನಂತೆ ಮುಖಕ್ಕೆ ರಾಚುತ್ತಿತ್ತು. ಇಂತಹ ಎಷ್ಟೋ ಮಂದಿ ತನ್ನ ತಪ್ಪುಗಳನ್ನೇ ಮರೆ ಮಾಡಿ ಮತ್ತೊಬ್ಬರ ತಪ್ಪುಗಳನ್ನು ಕೆದಕುವ ಕೆಲಸದಲ್ಲಿ ನಿಸ್ಸೀಮರಾಗಿರುತ್ತಾರೆ. ಅಂಥವರು ತಮ್ಮ ಒಳಗಣ್ಣಿನ ಕಿಟಕಿಯ ಧೂಳನ್ನು ತೆಗೆಯದ ಹೊರತು ಸಮಾಜದಲ್ಲಿ ಇಲ್ಲದಿರುವ ಧೂಳು ಹೋಗುವುದಿಲ್ಲ. ಅದರೊಂದಿಗೆ ಸಮಾಜವನ್ನು ನೋಡುವ ಕಣ್ಣು ಕೂಡ ಬದಲಾಗಬೇಕು. ಹೇಗೆಂದರೆ ನಾವು ಮನೆಯಿಂದ ದೇವಾಲಯಕ್ಕೆ ಪೂಜೆಗೆಂದು ಬಾಳೇಹಣ್ಣು, ಕಾಯಿ, ಕರ್ಪೂರ, ಗಂಧದ ಕಡ್ಡಿ ಇತ್ಯಾದಿ ಇತ್ಯಾದಿ ತೆಗೆದು ಹೋಗುತ್ತಿರುತ್ತೇವೆ. ಮನೆಯಿಂದ ತೆಗೆದುಕೊಂಡು ಹೋಗುತ್ತಿರುವ ಹಣ್ಣು ಕೇವಲ ಹಣ್ಣು ಮಾತ್ರ, ಅದೇ ದೇವಾಲಯದ ಒಳಗೆ ಹೋಗಿ ಹೊರಗೆ ಬಂದಾಗ ಅದು ಪ್ರಸಾದವಾಯಿತು. ನಾವ್ಯಾರು ಹಣ್ಣು ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ, ಬದಲಿಗೆ ಪ್ರಸಾದ ಸ್ವೀಕರಿಸಿ ಎನ್ನುತ್ತೇವೆ. ಹಾಗಾದರೆ ಹಣ್ಣು ಬದಲಾಯಿತೇ ಇಲ್ಲ. ಹಣ್ಣನ್ನು ನೋಡುವ ನಮ್ಮ ಕಣ್ಣು, ಭಾವ ಬದಲಾಯಿತು. ಆದ್ದರಿಂದ ದೃಷ್ಟಿ ಬದಲಾದರೆ, ಸೃಷ್ಟಿ ಬದಲಾವಣೆ ಆಗಿಯೇ ಆಗುತ್ತದೆ. ಅದಕ್ಕಾಗಿ ಬದಲಾಗು ಮನವೇ ಬದಲಾವಣೆಗೆ ನೀ ಮೊದಲಾಗು ಏನಾದರೂ ಆಗು ಮೊದಲು ವಾಸ್ತವದ ಬದುಕಿಗೆ ಮುಖವಾಗು ಆದರೆ ಮುಖವಾಡವಲ್ಲ.

ಬದುಕುವುದಾದರೆ ಬೆಳಕಿನೊಂದಿಗೆ ಬದುಕೋಣ ಕತ್ತಲಿನ ಚಿಂತೆ ನಮಗೇಕೆ... ಬದುಕುವುದಾದರೆ ಜ್ಯೋತಿಯೊಂದಿಗೆ ಬದುಕೋಣ ಬೆಂಕಿಯ ಸಹವಾಸ ನಮಗೇಕೆ... ಬದುಕುವುದಾದರೆ ತಿಳಿನೀರಿನೊಂದಿಗೆ ಬದುಕೋಣ. ನಿಂತ ನೀರಿನ ವಾಸನೆ ನಮಗೇಕೆ... ಬದುಕುವುದಾದರೆ ಖುಷಿ-ಸಂತೋಷ-ನಗುವಿನ ಒಡವೆಯೊಂದಿಗೆ ಬದುಕೋಣ ಅಳುವಿನ ಲೋಕದಗೊಡವೆ ನಮಗೇಕೆ... ಬದುಕುವುದಾದರೆ ಆರೋಗ್ಯದಿಂದ ಬದುಕೋಣ ಹೊಟ್ಟೆಕಿಚ್ಚಿನ ಅನಾರೋಗ್ಯದ ಬಾಧೆ ನಮಗೇಕೆ... ಬದುಕುವುದಾದರೆ ಸಜ್ಜನರೊಂದಿಗೆ ಬದುಕೋಣ ಕೊಳಕು ಮನಸ್ಸಿ ಹಾವುಗಳೊಂದಿಗಿನ ಸರಸ ನಮಗೇಕೆ... ಬದುಕುವುದಾದರೆ ಇವತ್ತು ಬದುಕೋಣ ನೆನ್ನೆಗಳ ಚಿಂತೆ ನಾಳೆಗಳ ಭ್ರಮೆ ನಮಗೇಕೆ... ಬದುಕುವುದಾದರೆ ತಂಗಾಳಿಯೊಂದಿಗೆ ಬದುಕೋಣ ಬಿರುಗಾಳಿಯ ಬಿರುಸು ನಮಗೇಕೆ... ಮಗುವಿನಂತಹ ಮನಸಿರಲಿ, ಎದೆಯಲ್ಲಿ ನಿಷ್ಕಲ್ಮಶವಿರಲಿ ಹೃದಯದಲ್ಲಿ ಎಂದಳು ನನ್ನವ್ವ ಸಾಕವ್ವ! ಈ ಮಾತುಗಳನ್ನು ಮನದಲ್ಲಿ ಬಸಿದುಕೊಂಡು ಬದಲಾಗುವ ಸಮಾಜದೊಂದಿಗೆ ನಾವು ಕೂಡ ಅಪ್ಡೇಟ್ ಆಗಿ ಬದುಕಿದರೆ ಆಗ ಅದು ಬಲು ಸುಂದರ, ಹೃದಯವೇ ಬಾಳ ಮಂದಿರ.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗಾಂಧಿ ಶಿಲ್ಪ ಬಜಾರ್

ಕರಕುಶಲ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ-ಮಾರಾಟ ಆರಂಭ

ಮೈಸೂರು, ಫೆ.14(ಎಸ್‌ಪಿಎನ್)- ಇಂದಿ(ಶುಕ್ರವಾರ)ನಿಂದ ಫೆ.23ರವರೆಗೆ ನಡೆಯುವ ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟದ 'ಗಾಂಧಿ ಶಿಲ್ಪ ಬಜಾರ್' ಮತ್ತು 145ನೇ ಹಸ್ತಶಿಲ್ಪ ಪ್ರದರ್ಶನಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಚಾಲನೆ ನೀಡಿದರು.



ಬಗೆಬಗೆಯ ರುದ್ರಾಕ್ಷಿ, ಸ್ಫಟಿಕ ಮಾರಾಟ ಮಳಿಗೆಯನ್ನು ಶಾಸಕ ಟಿ.ಎಸ್.ಶ್ರೀವತ್ಸ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಜೆಎಸ್‌ಎಸ್ ಸಂಸ್ಥೆ ಆಡಳಿತಾಧಿಕಾರಿ ಎಸ್.ಪಿ.ಉದಯ್‌ಶಂಕರ್, ಬೆಂಗಳೂರು ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್. ರಾಜಪ್ಪ ಸೇರಿದಂತೆ ಇತರರು ಭೇಟಿ ನೀಡಿ, ವೀಕ್ಷಿಸಿದರು.

ಮೈಸೂರು ವರ್ತುಲ ರಸ್ತೆಯ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನವದೆಹಲಿ ಭಾರತ ಸರ್ಕಾರದ ಜವಳಿ ಮಂತ್ರಾಲಯದ ಅಭಿವೃದ್ಧಿ ಆಯುಕ್ತರು(ಕರಕುಶಲ), ಜೆಎಸ್‌ಎಸ್ ಮಹಾವಿದ್ಯಾಪೀಠ ಸಹಯೋಗದೊಂದಿಗೆ ಆಯೋಜಿಸಿರುವ 10 ದಿನಗಳ ಗಾಂಧಿ ಶಿಲ್ಪ ಬಜಾರ್‌ಗೆ ಚಾಲನೆ ನೀಡಿ ಮಾತನಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕೇಂದ್ರ ಜವಳಿ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯು ರಾಷ್ಟ್ರ ಮಟ್ಟದ ನೋಡಲ್ ಏಜೆನ್ಸಿಯಾಗಿ ದೇಶಿಯ ಕರಕುಶಲ ಕರ್ಮಿಗಳು, ಕೈಮಗ್ಗ ನೇಕಾರರಿಗೆ ಮಾರುಕಟ್ಟೆ ಒದಗಿಸುವ ಸದಾಶಯದೊಂದಿಗೆ ಇಂತಹ ಬೃಹತ್ ಮೇಳ ಆಯೋಜಿಸುತ್ತಿದೆ. ದೇಶಿಯ ಕಲೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಕರಕುಶಲ ಕಲೆಯ ಅಭಿವೃದ್ಧಿ, ವಿನ್ಯಾಸ ಹಾಗೂ ಕಲ್ಯಾಣಕ್ಕಾಗಿ ಜವಳಿ ಮಂತ್ರಾಲಯ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಸಹಯೋಗದೊಂದಿಗೆ ಈ ಮೇಳವನ್ನು ಆಯೋಜಿಸಿ ಕರಕುಶಲ ಕರ್ಮಿಗಳಿಗೆ, ಚಿತ್ರಕಲಾವಿದರು, ನೇಕಾರರಿಗೆ ಉತ್ತೇಜನ ನೀಡುತ್ತಿರುವುದು ಜೆಎಸ್‌ಎಸ್ ಮಹಾಪೀಠದ ಸಾಧನೆ ಅನನ್ಯ ಎಂದರು.

ಈ ಮೇಳದಲ್ಲಿ ಮರದ ಕೆತ್ತನೆ ಶಿಲ್ಪಗಳು, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಖಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಬಿದಿರು-ಬೆತ್ತದ ಕಲಾ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಡ್ರೈ ಫ್ಲವರ್ಸ್, ಕಲಾತ್ಮಕ ಕಲ್ಲಿನ ವಸ್ತುಗಳು, ಪಶ್ಚಿಮ ಬಂಗಾಳದ ವಿವಿಧ ಬಗೆಯ ಕಾಟನ್ ಸೀರೆಗಳು, ಪಂಜಾಬ್ ರಾಜ್ಯದ ಪುಲ್ಕಾರಿ ಬಟ್ಟೆಗಳು ಈ ಮೇಳದಲ್ಲಿ ಒಂದೇ ಸೂರಿನಡಿ ಖರೀದಿಗೆ ಲಭ್ಯವಿದ್ದು, ಗಾಂಧಿ ಶಿಲ್ಪ ಬಜಾರ್ ಮೇಳದಲ್ಲಿ ಭಾಗವಹಿಸುತ್ತಿರುವ ಎಲ್ಲ ಕುಶಲಕರ್ಮಿಗಳಿಗೆ ಉಚಿತ ಮಳಿಗೆ, ಪ್ರಯಾಣ ಭತ್ಯೆ, ದಿನಭತ್ಯೆಯನ್ನೂ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ನೀಡಲಿದೆ ಎಂದು ಕೇಂದ್ರ ಜವಳಿ ಮಂತ್ರಾಲಯದ ಕರಕುಶಲ ಸೇವಾಕೇಂದ್ರದ ಸಹಾಯಕ ನಿರ್ದೇಶಕ ಕೆ.ಎಸ್.ಸುನಿಲ್ ಕುಮಾರ್ ತಿಳಿಸಿದರು.

ಗಣ್ಯರ ಗಮನ ಸೆಳೆದ ರುದ್ರಾಕ್ಷಿ ಮಳಿಗೆ: ಗಾಂಧಿ ಶಿಲ್ಪ ಬಜಾರ್ ಮೇಳದಲ್ಲಿ ತಮಿಳುನಾಡು ರಾಜ್ಯದ ತಿರುಚಿ ಜಿಲ್ಲೆಯ ರುದ್ರಾಕ್ಷಿ ಮಾರಾಟಗಾರ ಪ್ರಕಾಶ್ ಎಂಬುವರು ಸ್ಥಾಪಿಸಿರುವ ಮಳಿಗೆಗೆ ಶಾಸಕ ಟಿ.ಎಸ್.ಶ್ರೀವತ್ಸ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸೇರಿದಂತೆ ಇತರೆ ಅಧಿಕಾರಿಗಳು ಭೇಟಿ ನೀಡಿ, ರುದ್ರಾಕ್ಷಿ ಸರ, ಹವಳ, ಬಗೆಬಗೆಯ ಸ್ಫಟಿಕ ಲಿಂಗಗಳು, ತುಳಸಿ ಮಾಲೆ, ಬಣ್ಣಬಣ್ಣದ ಸ್ಫಟಿಕ ಮಾಲೆಗಳಿರುವ ಮಳಿಗೆಗೆ ಗಮನ ಸೆಳೆಯಿತು. ಈ ಭೇಟಿ ವೇಳೆ ತುಳಸಿ ಮಾಲೆ, ಏಕಮುಖ ರುದ್ರಾಕ್ಷಿಯಿಂದ 21 ಮುಖದ ರುದ್ರಾಕ್ಷಿಗಳನ್ನು (ಕನಿಷ್ಟ ಬೆಳೆ 50 ರೂ.ನಿಂದ 21 ಸಾವಿರ ರೂ.ವರೆಗೆ) ವೀಕ್ಷಿಸಿದರು. ಅಲ್ಲದೆ, ನಾಗಲಿಂಗ ರುದ್ರಾಕ್ಷಿಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಜೆಎಸ್‌ಎಸ್ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಪಿ.ಉದಯ್‌ಶಂಕರ್, ಬೆಂಗಳೂರು ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್. ರಾಜಪ್ಪ, ಕೇಂದ್ರ ಜವಳಿ ಮಂತ್ರಾಲಯದ ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕ ಕೆ.ಎಸ್. ಸುನಿಲ್‌ಕುಮಾರ್, ಜೆಎಸ್‌ಎಸ್ ಅರ್ಬನ್ ಹಾತ್‌ನ ರಾಕೇಶ್ ರೈ, ಅಜಯ್‌ಶಾಸ್ತ್ರಿ ಇತರರಿದ್ದರು.

ಉಚಿತ ಪ್ರವೇಶ

ಈ ಪ್ರದರ್ಶನ ಹಾಗೂ ಮಾರಾಟ ಮೇಳವು ಶುಕ್ರವಾರದಿಂದ 23 ರವರೆಗೆ ಬೆಳಿಗ್ಗೆ ಗಂಟೆ 10.30ರಿಂದ ರಾತ್ರಿ 9.00ರವರೆಗೆ ತೆರೆಯಲಿದ್ದು, ಗ್ರಾಹಕರಿಗೆ ಉಚಿತ ಪ್ರವೇಶ ಇರಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ

ಶಾಸಕ ಸುರೇಶ್ ಮೇಲೆ ಕ್ರಮ ಜರುಗಿಸದಿದ್ದರೆ ಅರಣ್ಯ ಸಿಬ್ಬಂದಿ ಸಾಮೂಹಿಕ ರಜೆ



ಉಪವಿಭಾಗಾಧಿಕಾರಿ ಮಾರುತಿ ಅವರಿಗೆ ಮನವಿ ಸಲ್ಲಿಸಲಾಯಿತು.



ಸುರೇಶ್

ಹಾಸನ, ಫೆ.14– ಆನೆ ದಾಳಿಯಿಂದ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ ಶಾಸಕ ಹೆಚ್.ಕೆ.ಸುರೇಶ್ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿರುವ ಅರಣ್ಯ ಸಂರಕ್ಷಣಾಧಿಕಾರಿಗಳ ಸಂಘ ಕ್ರಮ ಜರುಗಿಸದಿದ್ದರೆ ಅರಣ್ಯ ಸಿಬ್ಬಂದಿ ಸೇರಿದಂತೆ ಎಲ್ಲರೂ ಸಾಮೂಹಿಕ ರಜೆ ಮೇಲೆ ತೆರಳಲಾಗುವುದು ಎಂದು ಉಪ ವಿಭಾಗಾಧಿಕಾರಿ ಮಾರುತಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಅರಣ್ಯ ಇಲಾಖೆ ಅಧಿಕಾರಿ ಕೃಷ್ಣ ಮಾತನಾಡಿ, ಬೇಲೂರು ವಲಯದಲ್ಲಿ ಆನೆ ದಾಳಿಯಿಂದ ಮೃತಪಟ್ಟ ಸಂದರ್ಭದಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಕೆ. ಸುರೇಶ್ ಅವರು ಇಲಾಖಾ ಅಧಿಕಾರಿಗಳೊಂದಿಗೆ ಅನುಚಿತವಾಗಿ ವರ್ತಿಸಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದರು. ಆಕಸ್ಮಿಕವಾಗಿ ಕಾಡಾನೆ ದಾಳಿಯಿಂದ ಬೆಳ್ಳಾವರ ಗ್ರಾಮದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆಯಿಂದ ಕಾಡಾನೆಗಳ ಕುರಿತು ಬೆಳ್ಳಾವರ ಗ್ರಾಮದಲ್ಲಿ ಪ್ರಚಾರಪಡಿಸಿ, ಮುಂಜಾಗ್ರತೆ ವಹಿಸುವಂತೆ ಗ್ರಾಮಸ್ಥರಿಗೆ ಸೂಕ್ತ ಎಚ್ಚರಿಕೆಯನ್ನು ಜಿಲ್ಲಾ ಆನೆ ಕಾರ್ಯಪಡೆ ವತಿಯಿಂದ ನೀಡಿ, ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದಾಗಿಯೂ ಆಕಸ್ಮಿಕವಾಗಿ ವಯೋವೃದ್ಧ ಮಹಿಳೆಯೊಬ್ಬರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದರಿಂದ ಸ್ಥಳಕ್ಕೆ ತ್ವರಿತವಾಗಿ ಹಾಸನ ಅರಣ್ಯ ವಿಭಾಗದ ಹಿರಿಯ ಅರಣ್ಯಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲಾ ಕ್ಷೇತ್ರ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಸರ್ಕಾರದ ಮಾರ್ಗಸೂಚಿಗಳನ್ವಯ ಕ್ರಮವನ್ನು ಕೈಗೊಳ್ಳುತ್ತಿರುವ ಸಂದರ್ಭದಲ್ಲಿ ಈ ಸ್ಥಳಕ್ಕೆ ಆಗಮಿಸಿದ್ದ ಬೇಲೂರು ವಿಧಾನಸಭಾ ಕ್ಷೇತ್ರ ಶಾಸಕ ಹೆಚ್.ಕೆ. ಸುರೇಶ್ ಹಿರಿಯ ಅಧಿಕಾರಿಗಳ ಮೇಲೆ ಮನಬಂದಂತೆ ವಾಗ್ದಾಳಿ ಮಾಡುತ್ತಾರೆ ಎಂದು ದೂರಿದರು.

ಶಾಸಕರ ಮೇಲೆ ಕ್ರಮ ಜರುಗಿಸದಿದ್ದರೆ ನೌಕರರು ಸಾಮೂಹಿಕ ರಜೆ ಮೇಲೆ ತೆರಳಲು ನಿರ್ಧರಿಸಿರುವುದಾಗಿ ಈ ಮೂಲಕ ತಮ್ಮ ಅವಗಾಹನೆಗೆ ತರಬಯಸುತ್ತೇವೆ. ಒಂದು ವೇಳೆ ಸಾಮೂಹಿಕವಾಗಿ ರಜೆಯ ಮೇಲೆ ತೆರಳಿದ ಸಂದರ್ಭದಲ್ಲಿ ಅರಣ್ಯ ಸಂಪತ್ತಿಗೆ ಹಾಗೂ ವನ್ಯಪ್ರಾಣಿಗಳಿಗೆ ಮತ್ತು ವನ್ಯಪ್ರಾಣಿಗಳಿಂದ ಸಾರ್ವಜನಿಕರಿಗೆ ಯಾವುದೇ ಹಾನಿ ಉಂಟಾದಲ್ಲಿ ಶಾಸಕರನ್ನೇ ಹೊಣೆಗಾರರನ್ನಾಗಿ ಮಾಡಬೇಕೆಂದು ಮನವಿ ಮಾಡಿದರು. ಇದೇ ವೇಳೆ ಅರಣ್ಯ ಅಧಿಕಾರಿಗಳ ಸಂಘದ ಯತೀಶ್, ದಿಲೀಪ್, ಚಂದ್ರೇಗೌಡ, ಮಧುಸೂದನ್, ಕಲಂದರ್, ಮೋಹನ್, ತೇಜಸ್ವಿನಿ ಸೇರಿದಂತೆ ಇತರರಿದ್ದರು.

ಎಸ್ಸಿ, ಎಸ್ಟಿ ಸರ್ಕಾರಿ ಪ್ರಾಥಮಿಕ–ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘಕ್ಕೆ ಚಾಲನೆ



ಎಸ್ಸಿ, ಎಸ್ಟಿ ಸರ್ಕಾರಿ ಪ್ರಾಥಮಿಕ–ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಶಾಖೆ ಕಚೇರಿಯನ್ನು ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಉದ್ಘಾಟಿಸಿದರು.

ಹಾಸನ, ಫೆ.14– ನಗರದ ರಂಗೋಲಿ ಹಳ್ಳದಲ್ಲಿರುವ ಎನ್.ಇ. ಬೇಸಿಕ್ ಶಾಲೆ ಆವರಣದಲ್ಲಿ ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಸರ್ಕಾರಿ ಪ್ರಾಥಮಿಕ–ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಶಾಖೆ ಕಚೇರಿಯನ್ನು, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಉದ್ಘಾಟಿಸಿದರು.

ಜಿಲ್ಲಾ ಎಸ್‌ಸಿ, ಎಸ್‌ಟಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜೇಂದ್ರ ದೊಡ್ಡಮಗ್ಗೆ ಮಾತನಾಡಿ, ಶಿಕ್ಷಕರ ಒಂದು ಕನಸ್ಸು ಇಂದು ನನಸಾಗಿದ್ದು, ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳನ್ನು ಕರೆತರುವ ಮೂಲಕ ಹೆಸರನ್ನು ಉಳಿಸಲಾಗುವುದು. ಸರ್ಕಾರಿ ಶಾಲೆ ಇಂದು ಉಳಿದಿದೆ ಎಂದರೇ ಮತ್ತು ಶಿಕ್ಷಣ ಇಲಾಖೆ ಉಳಿದಿದೆ ಎಂದರೆ ಅದು ನಮ್ಮ ಸಮುದಾಯದಿಂದ. ಎಸ್ಸಿ, ಎಸ್ಟಿ ಸಂಘವನ್ನು ಕಟ್ಟಿರುವುದು ಹಕ್ಕುಗಳನ್ನು ಪಡೆದುಕೊಳ್ಳುವುದ ಕೋಸ್ಕರ. ಇದು ಯಾವುದೇ ಶಿಕ್ಷಕ ಸಂಘದ ವಿರೋಧಿಯಾಗಿ ಕಟ್ಟಿರುವ ಸಂಘಟನೆ ಅಲ್ಲ ಎಂದು ಹೇಳಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಕೆ. ನಾಗೇಶ್ ಮಾತನಾಡಿದರು. ಇದೇ ವೇಳೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಲಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಖಜಾಂಚಿ ಶಿವ ರುದ್ರಯ್ಯ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಾಗೂರು ಕೃಷ್ಣೇಗೌಡ, ಡಿಡಿಪಿಐ ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ, ಹಾಸನ ಜಿಲ್ಲಾ ವಾಣಿಜ್ಯ ತೆರಿಗೆ ಅಧಿಕಾರಿಗಳಾದಂತ ಎಂ.ಬಿ. ಚೆನ್ನಕೇಶವ, ಶಿವರುದ್ರಪ್ಪ, ಧರ್ಮಪ್ಪ ನಾಯಕ್ ಸೋಮನಾಯಕ, ಲೋಕೇಶ್ ಕುಮಾರ್, ಖಜಾಂಚಿಗಳಾದಂತಹ ರಾಜು ಹಾಗೂ ಪದಾಧಿಕಾರಿಗಳು ಎಲ್ಲಾ ತಾಲೂಕಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ವಿಶೇಷವಾಗಿ ಆಲೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಮೃತೇಶ್ ಇತರರು ಭಾಗವಹಿಸಿದ್ದರು.

5ನೇ ದಿನದ ಗ್ರಾಮ ಆಡಳಿತಾಧಿಕಾರಿಗಳ ಮುಷ್ಕರಕ್ಕೆ ರೈತ ಸಂಘ, ಕರವೇ ಬೆಂಬಲ


ಹಾಸನ, ಫೆ.14– ರಾಜ್ಯ ಗ್ರಾಮ ಆಡಳಿತಾಧಿಕಾರಿಗಳು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದ ಎಂ.ಜಿ. ರಸ್ತೆ ಬಳಿ ಇರುವ ತಹಸೀಲ್ದಾರ್ ಕಚೇರಿ ಮುಂದೆ ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದು, 5ನೇ ದಿನದ ಮುಷ್ಕರಕ್ಕೆ ರೈತ ಸಂಘ, ಕರವೇ ವೇದಿಕೆ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಭಾಗವಹಿಸಿ ಸಾಥ್ ನೀಡಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಆಡಳಿತಾಧಿಕಾರಿಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ವಿಶ್ವನಾಥ್ ಮಾಧ್ಯಮದೊಂದಿಗೆ ಮಾತನಾಡಿ, ಕೆಲಸ ನಿರ್ವಹಿಸುವ ಕಚೇರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕೆಲ ತಿಂಗಳ ಹಿಂದೆ ಮುಷ್ಕರ ಹಮ್ಮಿಕೊಳ್ಳಲಾಗಿತ್ತು. ಇದುವರೆಗೂ ಸರ್ಕಾರ ನಮ್ಮ ಸಮಸ್ಯೆಗೆ ಸಮರ್ಪಕವಾಗಿ ಸ್ಪಂದಿಸದ ಕಾರಣ ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಗ್ರಾಮ ಲೆಕ್ಕಾಧಿಕಾರಿಗಳಿಗೆ ಸರ್ಕಾರ ಯಾವುದೇ ಮೂಲಸೌಕರ್ಯ ನೀಡದೆ ಹಲವಾರು ವರ್ಷದಿಂದ ಕೆಲಸ ಮಾಡಿಸಿಕೊಳ್ಳುತ್ತಿದೆ. ಕಚೇರಿ ಸೇರಿದಂತೆ ಕನಿಷ್ಠ ಕುರ್ಚಿ, ಅಗತ್ಯ ಸಲಕರಣೆಗಳನ್ನು ಸಹ ನೀಡುತ್ತಿಲ್ಲ. ಕಳೆದ 10 –15 ವರ್ಷಗಳಿಂದ ನಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಾರ್ಯ ಒತ್ತಡದಿಂದ ಹಲವು ಅಧಿಕಾರಿಗಳು ಸಾವನ್ನಪ್ಪಿದ್ದಾರೆ. ಕೆಲ ಅಧಿಕಾರಿಗಳು ಡೆತ್‌ನೋಟ್ ಬರೆದಿಟ್ಟು ಮೃತರಾದರೆ ಇನ್ನೂ ಕೆಲವರು ಹೃದಯಘಾತದಿಂದ ಸಾವಿಗೀಡಾಗಿದ್ದಾರೆ .ಶನಿವಾರ–ಭಾನುವಾರ ರಜೆ ಇದ್ದರೆ ಶುಕ್ರವಾರವೇ ರಜೆ ಪಡೆಯದೆ ಕೆಲಸ ಮಾಡುವಂತೆ ಆದೇಶ ಹೊರಡಿಸುತ್ತಾರೆ ಎಂದು ಆರೋಪಿಸಿದರು. ಧರಣಿಯಲ್ಲಿ ಮಂಜುನಾಥ್, ಮಣಿಕಂಠ, ಬಸವರಾಜ್, ಸುಹಾಸ್, ವಸಂತಕುಮಾರ್, ಕೃಷ್ಣಪ್ಪ, ಭರತೇಶ್, ಅರ್ಪಿತ, ಕಾವ್ಯ ಇತರರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯರ ಪತ್ನಿ ಪಾರ್ವತಿಯವರಿಂದ ಮತ್ತೊಂದು ಬೇನಾಮಿ ಆಸ್ತಿ ಗಳಿಕೆ

ಲೋಕಾಯುಕ್ತ ಎಸ್ಪಿ ಉದೇಶ್‌ಗೆ ದೂರು ಸಲ್ಲಿಸಿದ ಸ್ನೇಹಮಯಿ ಕೃಷ್ಣ

- ಸಿದ್ದರಾಮಯ್ಯ ಬೆನ್ನತ್ತಿರುವ ಸ್ನೇಹಮಯಿ
- ಬೇನಾಮಿಯಾಗಿ ಆಪ್ತನಿಗೆ ನಿವೇಶನ ಮಂಜೂರು
- 24 ಲಕ್ಷಕ್ಕೆ ಖರೀದಿಸಿದ ನಿವೇಶನ 1 ಕೋಟಿಗೆ ಮಾರಾಟ
- ಪಾರ್ವತಿ ಅವರ ಆದಾಯ ಮೂಲದ ಬಗ್ಗೆ ಪ್ರಶ್ನೆ



ಸ್ನೇಹಮಯಿ ಕೃಷ್ಣ

ಮೈಸೂರು, ಫೆ.14(ಬಿಎಲ್‌ಯು)– ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಪ್ರಭಾವ ಬೀರಿ, ಬೇನಾಮಿಯಾಗಿ ಆಪ್ತನ ಹೆಸರಿನಲ್ಲಿ ಮುಡಾದಿಂದ ನಿವೇಶನ ಮಂಜೂರಾತಿ ಮಾಡಿಸಿ ತರುವಾಯ ತಮ್ಮ ಪತ್ನಿ ಪಾರ್ವತಿಯವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಮತ್ತೊಂದು ಹೊಸ ಆರೋಪ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನತ್ತಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಿದ್ದರಾಮಯ್ಯ ಅವರು ಪತ್ನಿ ಪಾರ್ವತಿ ಹೆಸರಿನಲ್ಲಿ ಹಲವು ಆಸ್ತಿಗಳನ್ನು ಮಾಡಿದ್ದಾರೆ ಎಂದು ದಿನ ಬಿಟ್ಟು ದಿನ ದಾಖಲಾತಿ ಸಮೇತ ಒಂದೊಂದೇ ಆರೋಪ ಮಾಡುತ್ತಿದ್ದಾರೆ.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಆಗಮಿಸಿದ ಅವರು, ಸಿದ್ದರಾಮಯ್ಯ ಬೇನಾಮಿಯಾಗಿ ಮುಡಾದಿಂದ ನಿವೇಶನ ಮಂಜೂರಾತಿ ಮಾಡಿಸಿ, ನಂತರ ತಮ್ಮ ಪತ್ನಿ ಹೆಸರಲ್ಲಿ ಸಂಪಾದಿಸಿದ್ದಾರೆ ಎಂದು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ಲಿಖಿತ ದೂರು ಸಲ್ಲಿಸಿದರು. ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ತಮ್ಮ ಆಪ್ತರಾದ ಮಾಜಿ ಶಾಸಕ ದಿವಂಗತ ಎಂ.ಸತ್ಯನಾರಾಯಣ ಅವರಿಗೆ ಮೈಸೂರಿನ ದಟ್ಟಗಳ್ಳಿ 3ನೇ ಹಂತದ ನಿವೇಶನ ಸಂಖ್ಯೆ 5338 ಅನ್ನು ಮಂಜೂರು ಮಾಡಿಸಿದ್ದಾರೆ. ಮುಡಾ ನಿಯಮದ ಪ್ರಕಾರ ಹತ್ತು ವರ್ಷಗಳವರೆಗೆ ನಿವೇಶನ ಮಾರಾಟ ಮಾಡುವಂತಿಲ್ಲ. ಈ ಸಂಬಂಧ ಗುತ್ತಿಗೆ ಕರಾರು ಪತ್ರ ಕೂಡ ನೋಂದಣಿ ಮಾಡಲಾಗಿತ್ತು ಎಂದು ತಿಳಿಸಿದ್ದಾರೆ.

ಆದರೆ ಸತ್ಯ ನಾರಾಯಣ ಅವರು ಕರಾರು ನಿಯಮ ಉಲ್ಲಂಘನೆ ಮಾಡಿ ಐದು ವರ್ಷಗಳ ನಂತರ ಮಾರ್ಚ್ 2, 2002ರಲ್ಲಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರ ಹೆಸರಿಗೆ 24 ಲಕ್ಷ ರೂಪಾಯಿಗೆ ಈ ನಿವೇಶನ ಮಾರಾಟ ಮಾಡಿದ್ದಾರೆ. ಮುಡಾ ನಿವೇಶನವನ್ನು ಹತ್ತು ವರ್ಷದ ತನಕ ಮಾರಾಟ ಮಾಡಬಾರದೆಂಬ ನಿಯಮವನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದು, ದಟ್ಟಗಳ್ಳಿಯ ಆ ನಿವೇಶನವನ್ನು ಸತ್ಯನಾರಾಯಣ ಅವರು 5 ವರ್ಷ 5 ತಿಂಗಳಿಗೆ ಮಾರಾಟ ಮಾಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಹೇಳಿದರು. ಈ ನಿವೇಶನವನ್ನು ಉಳಿಸಿಕೊಳ್ಳದ ಪಾರ್ವತಿ ಅವರು ಜುಲೈ 6, 2014 ರಲ್ಲಿ ಸುಲೋಚನಾ ರಮೇಶ್ ಅವರಿಗೆ ಒಂದು ಕೋಟಿ ರೂಪಾಯಿಗೆ ಮಾರಾಟ ಮಾಡಿದ್ದಾರೆ. ಬೇನಾಮಿಯಾಗಿ ಮಂಜೂರು ಮಾಡಿಸಿದ್ದ ನಿವೇಶನವನ್ನು ಒಂದು ಕೋಟಿಗೆ ಮಾರಾಟ ಮಾಡಿಸಿ 76 ಲಕ್ಷ ರೂಪಾಯಿ ಲಾಭ ಮಾಡಿಕೊಂಡಿದ್ದಾರೆ ಎಂದು ಆಪಾದಿಸಿದ್ದಾರೆ. ಪಾರ್ವತಿ ಅವರು ಈ ನಿವೇಶನ ಖರೀದಿ ಮಾಡಿರುವ ವಿವರವನ್ನು ಚುನಾವಣಾ ಪ್ರಮಾಣ ಪತ್ರ, ಲೋಕಾಯುಕ್ತರಿಗೆ ಸಲ್ಲಿಸುವ ಪ್ರಮಾಣ ಪತ್ರ ಹಾಗೂ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವ ಲೆಕ್ಕಪತ್ರದಲ್ಲಿ ನೀಡಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕು ಎಂದು ಕೃಷ್ಣ ಲೋಕಾಯುಕ್ತರನ್ನು ಒತ್ತಾಯಿಸಿದ್ದಾರೆ.

ಇಷ್ಟೆಲ್ಲಾ ಆಸ್ತಿ ಖರೀದಿಗೆ ಪಾರ್ವತಿ ಅವರಿಗೆ ಹಣ ಎಲ್ಲಿಂದ ಬಂದಿದೆ ಎಂಬ ಬಗ್ಗೆಯೂ ತನಿಖೆಯಾಗಬೇಕು. ಈ ಮೂಲಕ ಸಿದ್ದರಾಮಯ್ಯ ಮತ್ತು ಪಾರ್ವತಿ ಅವರ ಬಳಿ ಇರುವ ಆಸ್ತಿ ಎಷ್ಟು ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಮುಡಾದಲ್ಲಿ ಅಕ್ರಮವಾಗಿ ನಿವೇಶನ ಮಂಜೂರಾತಿ ಆಗಿದ್ದು, ಇದರಿಂದ ಸರ್ಕಾರಕ್ಕೆ ಐದು ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು 14 ನಿವೇಶನ ಪಡೆದಿರುವುದು ಮಾತ್ರವಲ್ಲದೆ ಇದೂವರೆಗೆ ಮುಡಾದಲ್ಲಿ ನಡೆದಿರುವ ಎಲ್ಲಾ ಹಗರಣಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಮನೆ, ಸರ್ಕಾರಿ ಅತಿಥಿ ಗೃಹದಲ್ಲಿ ನಿವೇಶನ ಖರೀದಿ, ಮಾರಾಟ ವಹಿವಾಟು

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರು ನಿವೇಶನ ಮಾರಾಟ ಮತ್ತು ಖರೀದಿಗೆ ಇಲ್ಲಿ ತನಕ ಉಪ ನೋಂದಣಾಧಿಕಾರಿ ಕಚೇರಿಗೆ ಹೋಗದೆ ತಾವು ಇದ್ದ ಕಡೆಯೇ ನೋಂದಣಿ ಪ್ರಕ್ರಿಯೆ ಮುಗಿಸಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆಪಾದಿಸಿದರು. ದಟ್ಟಗಳ್ಳಿಯ ನಿವೇಶನ ಖರೀದಿ ನೋಂದಣಿಗೆ ಪಾರ್ವತಿಯವರು ಹಾಗೂ ಸತ್ಯ ನಾರಾಯಣ, ಉಪ ನೋಂದಣಾಧಿಕಾರಿ ಕಚೇರಿಗೆ ಹೋಗಿಲ್ಲ. ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ಕರೆಸಿಕೊಂಡು ನೋಂದಣಿ ಪ್ರಕ್ರಿಯೆ ಮುಗಿಸಿದ್ದಾರೆ. ಈ ಆಸ್ತಿ ಖರೀದಿಗೆ ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ಆರೋಪಿಸಿದರು.

ಇದಲ್ಲದೆ ಮುಡಾದಿಂದ ಹಲವು ನಿವೇಶನ ಖರೀದಿ ಹಾಗೂ ಮಾರಾಟಕ್ಕೆ ಕೂಡ ಪಾರ್ವತಿಯವರು, ಉಪ ನೋಂದಣಾಧಿಕಾರಿ ಕಚೇರಿಗೆ ಹೋಗಿಲ್ಲ ಎಂದು ಆಪಾದಿಸಿದ ಸ್ನೇಹಮಯಿ ಕೃಷ್ಣ, ಖಾಸಗಿ ವ್ಯವಹಾರಕ್ಕಾಗಿ ಸರ್ಕಾರಿ ಅತಿಥಿ ಗೃಹ ಬಳಸಿಕೊಂಡಿರುವುದು ಕಾನೂನು ಬಾಹಿರವಾಗಿದ್ದು, ಇದಕ್ಕೆ ಸಿದ್ದರಾಮಯ್ಯ ಅವರ ಪ್ರಭಾವ ಬಳಸಿಕೊಳ್ಳಲಾಗಿದೆ ಎಂದು ದೂರಿದರು.

ದಟ್ಟಗಳ್ಳಿಯ ನಿವೇಶನವನ್ನು ಸುಲೋಚನಾ ರಮೇಶ್ ಅವರಿಗೆ ಒಂದು ಕೋಟಿಗೆ ಮಾರಾಟ ಮಾಡುವ ವೇಳೆಯಲ್ಲಿ ಕೂಡ ಪಾರ್ವತಿ ಅವರು ಉಪ ನೋಂದಣಾಧಿಕಾರಿ ಕಚೇರಿಗೆ ಹೋಗಿಲ್ಲ. ಮೈಸೂರಿನ ತೊಣಚಿಕೊಪ್ಪಲ್ ಮನೆಗೆ ಉಪ ನೋಂದಣಾಧಿಕಾರಿಗಳನ್ನು ಕರೆಸಿಕೊಂಡು ಮಾರಾಟ ಪ್ರಕ್ರಿಯೆ ಮುಗಿಸಿದ್ದಾರೆ ಎಂದು ಹೇಳಿದರು. ಉಪ ನೋಂದಣಾಧಿಕಾರಿ ಕಚೇರಿಗೆ ಹೋಗದೆ ಮನೆಯಲ್ಲೇ ಖರೀದಿ ಮಾಡಲು ನಿಯಮವಿದೆ. ಆದರೆ ಇದಕ್ಕೆ ಪಾರ್ವತಿ ಅವರು ಅರ್ಹರೆ ಎಂಬ ಪ್ರಶ್ನೆ ಎದುರಾಗಿದೆ ಎಂದು ತಿಳಿಸಿದರು. ಅಂದು ಉಪ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಅವರ ಪ್ರಭಾವ ಬಳಸಿಕೊಂಡು ಪಾರ್ವತಿ ಅವರು ಕಾನೂನು ನಿಯಮ ಹಲವು ಉಲ್ಲಂಘನೆ ಮಾಡಿ ತಮಗಿಷ್ಟ ಬಂದಂತೆ ನಡೆದುಕೊಂಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಜಯಲಲಿತಾರ 11 ಸಾವಿರ ರೇಷ್ಮೆ ಸೀರೆ, 468 ವಜ್ರಾಭರಣ, 700 ಕೆಜಿ ಬೆಳ್ಳಿ ಕರ್ನಾಟಕದಿಂದ ತಮಿಳುನಾಡಿಗೆ ಹಸ್ತಾಂತರ





ಬೆಂಗಳೂರು, ಫೆ.14– ಸುಮಾರು 11,300 ರೇಷ್ಮೆ ಸೀರೆಗಳು, 250 ಶಾಲು, 12 ರೆಫ್ರಿಜರೇಟರ್, 10 ಟಿವಿ ಸೆಟ್, 8 ವಿಸಿಆರ್, 1 ವಿಡಿಯೋ ಕ್ಯಾಮರಾ, 4 ಸಿಡಿ ಪ್ಲೇಯರ್, 2 ಆಡಿಯೋ ಡೆಕ್, 24 ಟೂ–ಇನ್ ಒನ್ ಟೇಪ್ ರೆಕಾರ್ಡರ್ ಹಾಗೂ 1040 ವಿಡಿಯೋ ಕ್ಯಾಸೆಟ್, 3 ಐರನ್ ಲಾಕರ್ಸ್, 7040 ಗ್ರಾಂ ತೂಕದ 468 ಬಗೆಯ ಚಿನ್ನ, ವಜ್ರಖಚಿತ ಆಭರಣಗಳು, 700 ಕೆ.ಜಿ ತೂಕದ ಬೆಳ್ಳಿ ಆಭರಣಗಳು, 740 ದುಬಾರಿ ಚಪ್ಪಲಿಗಳು... ಇದಿಷ್ಟೂ ತಮಿಳುನಾಡಿನ ಮಾಜಿ ಸಿಎಂ ಜಯಲಲಿತಾರಿಗೆ ಸೇರಿದ ಚರಾಸ್ತಿ.


ವರ್ಷಗಳ ಹಿಂದೆ ಆದಾಯ ತೆರಿಗೆ ರೈಡ್ ವೇಳೆ ಜಪ್ತಿ ಮಾಡಿದ್ದವು. ನ್ಯಾಯಾಲಯದ ಆದೇಶಗಳ ಮೇರೆಗೆ ಇವುಗಳನ್ನು ಕರ್ನಾಟಕದಲ್ಲಿ ತಂದಿರಿಸಲಾಗಿತ್ತು. ಇತ್ತೀಚೆಗೆ ಹೈಕೋರ್ಟ್ ಆದೇಶದ ಮೇರೆಗೆ ಇವುಗಳನ್ನು ತಮಿಳುನಾಡು ಸರ್ಕಾರಕ್ಕೆ ಒಪ್ಪಿಸಲಾಗುತ್ತಿದೆ. ಆ ಪ್ರಕ್ರಿಯೆಗೆ ಫೆ.14ರಂದು ಚಾಲನೆ ನೀಡಲಾಗಿದೆ.

ಇದು 1997ರ ಕೇಸ್. ಆಗ ಜಯಲಲಿತಾ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದ ಐಟಿ ಅಧಿಕಾರಿಗಳು ಮೇಲೆ ತಿಳಿಸಲಾದ ಅಪಾರ ಪ್ರಮಾಣದ ವಸ್ತುಗಳನ್ನು ವಶಕ್ಕೆ ಪಡೆದಿದ್ದರು. ಆ ಕೇಸ್ ನ್ಯಾಯಾಲಯದ ಮೆಟ್ಟಿಲೇರಿತ್ತು. ಆನಂತರ ಆ ಕೇಸ್ ಕರ್ನಾಟಕಕ್ಕೆ ವರ್ಗಾವಣೆಯಾಗಿತ್ತು. 2014ರ ಸೆ.17ರಂದು ಅದರ ತೀರ್ಪು ಹೊರಬಿದ್ದಿತ್ತು. ಜಯಲಲಿತಾರಿಗೆ 4 ವರ್ಷಗಳ ಕಾಲ ಜೈಲು ಶಿಕ್ಷೆ ಹಾಗೂ 100 ಕೋಟಿ ರೂ. ದಂಡ ವಿಧಿಸಿತ್ತು.


ಆನಂತರ ಜಯಲಲಿತಾ ಅವರು ನಿಧನವಾದರು. ಅವರಿಗೆ ಸಂಬಂಧಿಸಿದ ಚರಾಸ್ತಿಗಳನ್ನು 2024ರ ಫೆ. 19ರಂದು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸುವಂತೆ ಹೈಕೋರ್ಟ್ ಆದೇಶಿಸಿತ್ತು. 2024ರ ಮಾರ್ಚ್ 6, 7ರಂದು ಅವುಗಳನ್ನು ಪಡೆಯಲು ತಮಿಳುನಾಡು ಸರ್ಕಾರವು ವಿಶೇಷ ಅಭಿಯೋಜಕರನ್ನು ನೇಮಿಸಬೇಕೆಂದು ನ್ಯಾಯಾಲಯ ಸೂಚಿಸಿತ್ತು. ಆದರೆ, ಜಯಲಲಿತಾ ಮಕ್ಕಳು ಎಂದು ಹೇಳಿಕೊಂಡಿರುವ ದೀಪಾ ಹಾಗೂ ದೀಪಕ್ ಎಂಬುವರು ವಿಶೇಷ ನ್ಯಾಯಾಲಯದ ಆದೇಶದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿ, ಜಯಲಲಿತಾರಿಗೆ ಸಂಬಂಧಿಸಿದ ಚಿನ್ನಾಭರಣಗಳನ್ನು ತಮಗೆ ಒಪ್ಪಿಸಬೇಕೆಂದು ಮನವಿ ಮಾಡಿದ್ದರು. ಆಸ್ತಿ ಹಸ್ತಾಂತರಕ್ಕೂ ಹಿಂದಿನ ದಿನ ಮಾ. 5ರಂದು ಹೈಕೋರ್ಟ್ ಏಕಸದಸ್ಯ ಪೀಠ, ಚರಾಸ್ತಿ ಹಸ್ತಾಂತರಕ್ಕೆ ತಡೆ ನೀಡಿತ್ತು. ಆದರೆ, ಆನಂತರದಲ್ಲಿ ದೀಪಾ ಹಾಗೂ ದೀಪಕ್ ಸಲ್ಲಿಸಿದ್ದ ಮೇಲ್ಮನವಿ ವಜಾಗೊಂಡ ಹಿನ್ನೆಲೆಯಲ್ಲಿ ಅವರನ್ನು ಆಸ್ತಿ ಹಸ್ತಾಂತರ ಪ್ರಕ್ರಿಯೆಗೆ ಈಗ ಚಾಲನೆ ನೀಡಲಾಗಿದೆ.

ನಾಳೆಯಿಂದ ಮೈಸೂರಲ್ಲಿ ರುಗ್ಮಿಣೀಶ ವಿಜಯ ಸಪ್ತಾಹ





ಬ್ರಹ್ಮಣ್ಯಾಚಾರ್ಯ



ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು

ಮೈಸೂರು, ಫೆ.14(ಜಿಎ)–ಮೈಸೂರಿನ ಹರಿದಾಸ ಸಂಗೀತೋತ್ಸವ ಸಮಿತಿ ವತಿಯಿಂದ ಫೆ. 16 ರಿಂದ 23 ರವರೆಗೆ ನಗರದ ಶಾರದ ವಿಲಾಸ ಶತಮಾನೋತ್ಸವ ಭವನದಲ್ಲಿ ರುಗ್ಮಿಣೀಶ ವಿಜಯ ಸಪ್ತಾಹ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸಂಸ್ಥಾಪಕ ರವಿಕುಮಾರ್ ಈ ವಿಷಯ ತಿಳಿಸಿ, ನಿತ್ಯ ಸಂಜೆ 5 ಗಂಟೆಯಿಂದ ರಾತ್ರಿ 8.30ರವರೆಗೆ ಈ ಕಾರ್ಯಕ್ರಮ ನಡೆಯಲಿದೆ. ಫೆ.16ರಂದು ವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು ಉದ್ಘಾಟಿಸುವರು, ಈ ವೇಳೆ ಯುವ ವಿದ್ವಾಂಸರಿಂದ ಯತಿವರೇಣ್ಯರ, ದಾಸವರೇಣ್ಯರ ಕೀರ್ತನೆಗಳ ವಿಶ್ಲೇಷಣೆ ನಡೆಯಲಿದೆ. ಫೆ. 17ರಂದು ವ್ಯಾಸರಾಜ ಮಠದ ದಿವಾನರಾದ ಬ್ರಹ್ಮಣ್ಯಾಚಾರ್ಯ ಅವರಿಂದ ಪ್ರವಚನವಿರಲಿದೆ. ಜೊತೆಗೆ ನಂತರದ ದಿನಗಳಲ್ಲಿಯೂ ಹರಿಭಜನೆ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಜಯಶ್ರೀ ಉಪಸ್ಥಿತರಿದ್ದರು.

14.65 ಕೋಟಿ ವೆಚ್ಚದಲ್ಲಿ ಮೈಸೂರು ಕಲಾಮಂದಿರ ಸಮಗ್ರ ನವೀಕರಣ

ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ



ಮೈಸೂರು, ಫೆ.14– ಮೈಸೂರಿನ ಸಾಂಸ್ಕೃತಿಕ ಹೆಗ್ಗುರುತಾದ ಕಲಾಮಂದಿರ ಸ್ಥಾಪನೆಯಾಗಿ 40 ವರ್ಷ ಕಳೆದಿವೆ. ಈವರೆಗೂ ಕಲಾಮಂದಿರದ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡದ ಹಿನ್ನೆಲೆಯಲ್ಲಿ ಕಲಾಮಂದಿರ ಶಿಥಿಲಾವಸ್ಥೆ ತಲುಪಿದೆ. ಹೀಗಾಗಿ ಕಲಾಮಂದಿರವನ್ನು ಸಮಗ್ರವಾಗಿ ನವೀಕರಿಸುವ ಉದ್ದೇಶದಿಂದ 14.65 ಕೋಟಿ ವೆಚ್ಚದ ಪ್ರಸ್ತಾವವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಬಾರಿಯ ಬಜೆಟ್‌ನಲ್ಲಿ ಘೋಷಣೆಯಾಗುವ ನಿರೀಕ್ಷೆ ಇದೆ.

ರಂಗಾಯಣ ಪಕ್ಕದಲ್ಲೇ ಕಲಾಮಂದಿರ ಇರುವುದರಿಂದ ಇಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಆದರೆ ಕಲಾಮಂದಿರ 40 ವರ್ಷದ ಹಳೆಯ ಕಟ್ಟಡ. ಬಿಸಿಲು, ಮಳೆಗೆ ಹಾನಿಯಾಗಿ ದುರಸ್ತಿಗೆ ಕಾಯುತ್ತಿದೆ. ಈ ಹಿನ್ನೆಲೆಯಲ್ಲಿ ಕಲಾಮಂದಿರವನ್ನು ಸಮಗ್ರವಾಗಿ ನವೀಕರಣ ಮಾಡಲೇಬೇಕಾದ ಅನಿವಾರ್ಯತೆ ಮನಗಂಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮವೊಂದಕ್ಕೆ ಬಂದಿದ್ದರು. ಈ ವೇಳೆ ಕಲಾಮಂದಿರವನ್ನು ಸಮಗ್ರವಾಗಿ ನವೀಕರಿಸಬೇಕಾದ ವಿಚಾರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಸ್ತಾಪಿಸಿದ್ದರು. ಅಲ್ಲದೇ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರೂ ಈ ಸಂಬಂಧ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿದ ಸಿಎಂ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಕಲಾಮಂದಿರದ ಪ್ರತಿಯೊಂದು ಭಾಗವನ್ನು ಪರಿಶೀಲಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಪ್ರಸ್ತಾವನೆ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಕಲಾಮಂದಿರದ ದುಸ್ಥಿತಿ ಬಗ್ಗೆ ಅನೇಕ ವರ್ಷಗಳಿಂದ ಕಲಾಸಕ್ತರು ದೂರುತ್ತಲೇ ಬಂದಿದ್ದರು. ಆದರೆ ಆಗಿಂದಾಗ್ಗೆ ಸಣ್ಣಪುಟ್ಟ ಕಾಮಗಾರಿಗಳನ್ನು ನಡೆಸಿ ತೇಪೆ ಹಾಕುವುದನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಕಾಮಗಾರಿ ಏನೂ ನಡೆದಿರಲಿಲ್ಲ. ಅದು ಮಾತ್ರವಲ್ಲದೆ ಕಲಾಮಂದಿರಕ್ಕೆ ಹೊಂದಿಕೊಂಡಂತೆಯೇ ಇರುವ ರಂಗಾಯಣದ ಗ್ಯಾಲರಿಗಳೂ ದುಸ್ಥಿತಿಗೆ ತಲುಪಿದ್ದು, ಅವುಗಳನ್ನೂ ನವೀಕರಿಸಬೇಕಾದ ಅಗತ್ಯತೆ ಇದೆ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಅತಿಥಿ ಗೃಹವು ಪಾಳು ಬಂಗಲೆಯಂತಾಗಿದ್ದು, ಅಲ್ಲಿ ಯಾರೂ ವಾಸಿಸಲು ಯೋಗ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಲಾಮಂದಿರದ ಕುರ್ಚಿಗಳ ಕತೆಯಂತೂ ಹೇಳುವುದೇ ಬೇಡ. ಇಂತಹ ಪರಿಸ್ಥಿತಿಯಲ್ಲಿರುವ ಕಲಾ ಮಂದಿರಕ್ಕೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಮುಖ್ಯಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಹಣಕಾಸು ಒದಗಿಸುವ ಸಾಧ್ಯತೆ ಇದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ಸೋಲಾರ್ ಘಟಕ ಸ್ಥಾಪನೆ: ಕಲಾಮಂದಿರಕ್ಕೆ ಪ್ರತಿ ತಿಂಗಳು ಸುಮಾರು 1.5 ಲಕ್ಷ ರೂ. ವಿದ್ಯುತ್ ಬಿಲ್ ಬರುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ 50 ಕಿಲೋ ವ್ಯಾಟ್‌ನ ಸೋಲಾರ್ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಕಲಾಮಂದಿರದಲ್ಲಿ ದೊಡ್ಡ ಚಾವಣಿಯಷ್ಟು ಜಾಗವಿದ್ದು, ಅಲ್ಲಿ ಸೋಲಾರ್ ಘಟಕ ಸ್ಥಾಪಿಸಬಹುದು. ಇದು ಸಾಧ್ಯವಾದರೆ ಶೇ.80ರಷ್ಟು ಬಿಲ್ ಹಣ ಉಳಿತಾಯವಾಗುತ್ತದೆ. ಹೆಚ್ಚುವರಿ ವ್ಯಾಟನ್ನು ಸೆಸ್ಕ್‌ಗೆ ನೀಡಬಹುದು. ಪೈಪ್‌ಲೈನ್ ದುರಸ್ತಿ, ಸಮರ್ಪಕ ವಿದ್ಯುತ್ ವ್ಯವಸ್ಥೆ, ಹವಾ ನಿಯಂತ್ರಣ ನವೀಕರಣ, ಹೈಟೆಕ್ ಶೌಚಗೃಹ ನಿರ್ಮಾಣ, ಕಲಾಮಂದಿರ ಬಾಲ್ಕನಿ ಕುರ್ಚಿಗಳ ಬದಲಾವಣೆ, ಧ್ವನಿ–ಬೆಳಕಿಗೆ ಮತ್ತಷ್ಟು ಆಧುನಿಕ ಸ್ಪರ್ಶ ಮುಂತಾದವು ನವೀಕೃತ ಕಾಮಗಾರಿಗಳಲ್ಲಿ ಪ್ರಸ್ತಾಪಿಸಲಾಗಿದೆ.

ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಅತಿಥಿಗೃಹ: 1985ರಲ್ಲಿ ಕಲಾಮಂದಿರದ ಸಮೀಪ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ 23 ಅತಿಥಿಗೃಹಗಳನ್ನು ನಿರ್ಮಾಣ ಮಾಡಲಾಗಿತ್ತು. 1989ರಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಒಡೆತನದಲ್ಲಿ ಇದ್ದ ಕಲಾಮಂದಿರ ಹಾಗೂ ಅತಿಥಿ ಗೃಹಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಲಾಗಿತ್ತು.

ಇದೀಗ ಶಿಥಿಲಾವಸ್ಥೆಯಲ್ಲಿರುವ ಅತಿಥಿಗೃಹಗಳು ನವೀಕರಣಕೊಂಡರೆ ದಸರಾ ಸೇರಿದಂತೆ ಇತರೆ ಸಂದರ್ಭಗಳಲ್ಲಿ ಅತಿಥಿ ಗಣ್ಯರನ್ನು ಹೋಟೆಲ್‌ನಲ್ಲಿ ಇರಿಸುವುದು ತಪ್ಪುತ್ತದೆ. ಇಲಾಖೆಗೆ ಆರ್ಥಿಕ ಹೊರೆಯೂ ತಗ್ಗಲಿದೆ. ಇದರೊಂದಿಗೆ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿ, ಶ್ರೀರಂಗ ವೇದಿಕೆ, ಲಂಕೇಶ್ ಗ್ಯಾಲರಿ ಹಾಲ್‌ಗಳ ನವೀಕರಣವನ್ನೂ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ.

"ಮೈಸೂರು ಕಲಾಮಂದಿರ 1985ರಲ್ಲಿ ನಿರ್ಮಾಣವಾಗಿದ್ದು, ಸಣ್ಣಪುಟ್ಟ ಕಾಮಗಾರಿಗಳನ್ನು ನಡೆಸಿದ್ದನ್ನು ಬಿಟ್ಟರೆ ಈವರೆಗೂ ಸಮಗ್ರವಾದ ನವೀಕರಣ ನಡೆದಿಲ್ಲ. ಕಲಾಮಂದಿರದ ಕಟ್ಟಡ ಸೋರುತ್ತಿದೆ. ಬಣ್ಣ ಮಾಸಿಹೋಗಿದೆ. ಸೆರಾಮಿಕ್ ನೆಲಹಾಸನ್ನು ಬದಲಿಸಬೇಕಾಗಿದೆ. ಬಾಲ್ಕನಿಯಲ್ಲಿರುವ 400 ಕುರ್ಚಿಗಳ ಪೈಕಿ 7–8 ಕುರ್ಚಿಗಳನ್ನು ಬಿಟ್ಟರೆ ಉಳಿದೆಲ್ಲವೂ ಬಳಕೆಗೆ ಬಾರದಂತಾಗಿವೆ. ಕೆಳಭಾಗದಲ್ಲಿಯೂ 60–70 ಕುರ್ಚಿಗಳನ್ನು ಬದಲಿಸಬೇಕಾದ ಅವಶ್ಯಕತೆ ಇದೆ. ಶೌಚಾಲಯಗಳನ್ನು ದುರಸ್ತಿ ಮಾಡಲೇಬೇಕಾಗಿದೆ. ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿ, ಶ್ರೀರಂಗ ವೇದಿಕೆ, ಲಂಕೇಶ್ ಗ್ಯಾಲರಿ ಸೇರಿದಂತೆ ರಂಗಾಯಣದಲ್ಲೂ ನವೀಕರಣ ಕೆಲಸ ಆಗಬೇಕಾಗಿದೆ. ಕಲಾಮಂದಿರದ ಗ್ಲಾಸ್‌ಗಳು ಒಡೆದು ಹೋಗಿವೆ. ಕನ್ನಡ ಸಾಹಿತ್ಯ ಸಮ್ಮೇಳನ ಅತಿಥಿ ಗೃಹದ 23 ಕೊಠಡಿಗಳು ನಮ್ಮ ಇಲಾಖೆಗೆ ಸೇರಿದ್ದು, ಅವು ವಾಸಿಸಲು ಯೋಗ್ಯವಲ್ಲದ ಸ್ಥಿತಿ ತಲುಪಿದೆ. ಹೀಗಾಗಿ ಕಲಾಮಂದಿರವನ್ನು ಒಂದೇ ಬಾರಿಗೆ ಸಮಗ್ರವಾಗಿ ನವೀಕರಣ ಮಾಡಬೇಕು ಎಂಬ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಮುತುವರ್ಜಿ ವಹಿಸಿ ಯಾವ ಯಾವ ಕಾಮಗಾರಿ ನಡೆಯಬೇಕಾಗಿದೆ ಎಂಬುದರ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ಕಲಾಮಂದಿರ, ರಂಗಾಯಣ, ಅತಿಥಿ ಗೃಹ ಸೇರಿದಂತೆ ಎಲ್ಲವನ್ನೂ ಸಮಗ್ರವಾಗಿ ನವೀಕರಣಗೊಳಿಸಬೇಕು. ಸೋಲಾರ್ ಘಟಕ ಸ್ಥಾಪಿಸುವ ಮೂಲಕ ವಿದ್ಯುತ್ ಬಿಲ್ ಉಳಿತಾಯ ಮಾಡಬೇಕು ಎಂಬ ನಿಟ್ಟಿನಲ್ಲಿ 14.65 ಕೋಟಿ ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಈ ಬಗ್ಗೆ ಗಮನ ಹರಿಸಿದ್ದಾರೆ. ಶಾಸಕ ಕೆ.ಹರೀಶ್‌ಗೌಡರು ಮುಖ್ಯಮಂತ್ರಿಗಳಲ್ಲಿ ವಿಶೇಷ ಮನವಿ ಮಾಡಿದ್ದಾರೆ. ಹೀಗಾಗಿ ಈ ಬಾರಿ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಕಲಾಮಂದಿರ ನವೀಕರಣಕ್ಕೆ ನಿಧಿ ಒದಗಿಸುತ್ತಾರೆ ಎಂಬ ವಿಶ್ವಾಸ ನಮಗಿದೆ.

–ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಳ್ಳು ಹಂದಿ ಬೇಟೆಯಾಡಿದ್ದ ಇಬ್ಬರ ಬಂಧನ



ಹಲಗೂರು, ಫೆ.14– ಕಾವೇರಿ ವನ್ಯ ಜೀವಿ ಧಾಮದ ಹಲಗೂರು ವನ್ಯಜೀವಿ ವಲಯದ ಧನಗೂರು ವ್ಯಾಪ್ತಿಯ ದಬ್ಬಹಳ್ಳಿ ಅರಣ್ಯ ಪ್ರದೇಶದ ಹತ್ತಿರ ಡಿ-ಲೈನ್ ಗಡಿಯಲ್ಲಿ ಮುಳ್ಳು ಹಂದಿ ಬೇಟೆಯಾಡಿ ಬೈಕ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದ ಇಬ್ಬರನ್ನು ಬಂಧಿಸಿದ್ದು, ಮತ್ತೊರ್ವ ಪರಾರಿಯಾಗಿದ್ದಾನೆ.

ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾಡಾನೆಗಳು ಗಡಿಯನ್ನು ದಾಟಿ ಕೃಷಿ ಜಮೀನುಗಳಿಗೆ ದಾಳಿ ಮಾಡುವುದನ್ನು ತಡೆಯಲು ಆನೆ ಕಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಶಿಂಷಾ ರಸ್ತೆ ಕಡೆಯಿಂದ ದಬ್ಬಹಳ್ಳಿ ಮಾರ್ಗವಾಗಿ ಬರುತ್ತಿದ್ದ ದ್ವಿಚಕ್ರ ವಾಹನವನ್ನು ಗಮನಿಸಿ, ಹಿಂಬಾಲಿಸಿದ್ದಾರೆ.

ಅರಣ್ಯ ಇಲಾಖೆಯವರು ಬೈಕ್‌ನ್ನು ಹಿಂಬಾಲಿಸುತ್ತಿದ್ದದ್ದನ್ನು ನೋಡಿ ಬೈಕ್‌ನಲ್ಲಿದ್ದ ಮೂವರು ಕೈನಲ್ಲಿ ಹಿಡಿದಿದ್ದ ಪ್ಲಾಸ್ಟಿಕ್ ಚೀಲವನ್ನು ಕೆಡವಿ ಪರಾರಿಯಾಗಲು ಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ ಚೀಲವನ್ನು ವಶಕ್ಕೆ ಪಡೆದು ಬೈಕ್‌ನ್ನು ಮತ್ತೆ ಹಿಂಬಾಲಿಸಿದಾಗ ಕತ್ತಲಲ್ಲಿ ಓರ್ವ ಪರಾರಿಯಾಗಿದ್ದು, ಮತ್ತಿಬ್ಬರು ಸೆರೆ ಸಿಕ್ಕಿದ್ದಾರೆ.

ಬಳಿಕ ಅವರನ್ನು ವಿಚಾರಣೆ ಮಾಡಿದಾಗ ಮುಳ್ಳು ಹಂದಿಯನ್ನು ಭೇಟೆಯಾಡಿ ಮಾರಾಟ ಮಾಡಲು ಕೊಂಡೊಯ್ಯುತ್ತಿರುವ ವಿಚಾರ ಬೆಳಕಿಗೆ ಬಂದಿದೆ. ತಕ್ಷಣ ಪೋಲೀಸರ ಮೃತ ಮುಳ್ಳು ಹಂದಿ, ಬೈಕ್ ಹಾಗೂ ಒಂದು ಮೊಬೈಲ್‌ನ್ನು ವಶಕ್ಕೆ ಪಡೆದಿದ್ದಾರೆ.

ಉಪ ವಲಯ ಅರಣ್ಯಾಧಿಕಾರಿ ಸಾಜು ಪ್ರಾನ್ಸಿಸ್, ನೋಹನ್ ಕುಮಾರ್, ಗಸ್ತು ಅರಣ್ಯಪಾಲಕರಾದ ಪುನೀತ್, ಮಲ್ಲಿಕಾರ್ಜುನ ಕುಂಬಾರ ಹಾಗೂ ಸಿಬ್ಬಂದಿಗಳಾದ ಪ್ರದೀಪ್, ಲೋಕೇಶ್ ಇವರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಕೆಆರ್‌ಎಸ್‌ನಿಂದ ಬೆಂಗಳೂರಿಗೆ ಶಾಶ್ವತ ಕುಡಿಯುವ ನೀರು

ಬೆಂಗಳೂರಿಗೆ 6ನೇ ಹಂತದ ಕುಡಿಯುವ ನೀರಿನ ಯೋಜನೆ ಮಾಡಲು ಸರ್ಕಾರ ಬದ್ಧ

- ಜೆಡಿಎಸ್ ವಿರೋಧದ ನಡುವೆಯೂ ಕೆಆರ್‌ಎಸ್‌ನಿಂದ ಹೆಚ್ಚುವರಿ ನೀರು ಬಳಕೆಗೆ ಸರ್ಕಾರದ ತೀರ್ಮಾನ
- ಮಂಡ್ಯ ವಿವಿಯನ್ನು ಮೈಸೂರು ವಿವಿ ಜೊತೆಗೆ ವಿಲೀನಕ್ಕೆ ಒತ್ತಾಯ ಹೆಚ್ಚುತ್ತಿದೆ: ಚಲುವರಾಯಸ್ವಾಮಿ

ಮಂಡ್ಯ, ಫೆ.14– 6ನೇ ಹಂತದ ಕುಡಿಯುವ ನೀರಿನ ಯೋಜನೆ ಹೆಸರಿನಲ್ಲಿ ಕೆಆರ್‌ಎಸ್ ಅಣೆಕಟ್ಟೆಯಿಂದ 500 ಎಂಎಲ್‌ಡಿ ಕುಡಿಯುವ ನೀರು ಶಾಶ್ವತವಾಗಿ ಬೆಂಗಳೂರಿಗೆ ಕೊಂಡೊಯ್ಯುವ ಬಗ್ಗೆ ಜೆಡಿಎಸ್ ವಿರೋಧ ವಿಚಾರ ಮಾಡುತ್ತಿದ್ದರು, ಬೆಂಗಳೂರಿಗೆ ಕುಡಿಯುವ ನೀರು ಕೊಡುವುದು ನಮ್ಮ ಕರ್ತವ್ಯವಾಗಿದ್ದು ಎಲ್ಲರೂ ನಮ್ಮವರೆ ಆಗಿದ್ದಾರೆ. ಬೆಂಗಳೂರು ವಿಖ್ಯಾತಿ ಪಡೆದಿದೆ. ಸಂಗ್ರಹವಾಗಿರುವ ನೀರನ್ನು ಕುಡಿಯುವ ನೀರಿನ ಯೋಜನೆ ಮಾಡಿದ್ದೇವೆ ಎನ್ನುವ ಮೂಲಕ ಆರನೇ ಹಂತದ ಕುಡಿಯುವ ನೀರು ಯೋಜನೆಯನ್ನು ಕೈಗೊಳ್ಳುವುದಾಗಿ ಪರೋಕ್ಷವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಒಪ್ಪಿಕೊಂಡಿದ್ದಾರೆ.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿಗೆ ಅಗತ್ಯ ನೀರನ್ನು ಕೊಡಲೇ ಬೇಕಾಗುತ್ತದೆ, ರೈತರಿಗೂ ತೊಂದರೆ ಆಗದ ರೀತಿ ಕೊಡುತ್ತೇವೆ. ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಅವರು ರಾಜಕಾರಣ ಬೆರಸಿದ್ದಾರೆ ನಾವು ರಾಜಕಾರಣ ಮಾಡಲ್ಲ. ನಾವು ರೈತರ ಬಗ್ಗೆ ರಾಜಕಾರಣ ಮಾಡುವುದಿಲ್ಲ ಎಂದರು.



ಸುದ್ದಿಗಾರರೊಂದಿಗೆ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡುತ್ತಿರುವುದು.

ಮಂಡ್ಯ ವಿವಿ ವಿಲೀನಕ್ಕೂ ಜನರ ಒತ್ತಾಯ ಇದೆ: ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಮಂಡ್ಯ ವಿವಿ ವಿಲೀನ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಮೈಸೂರು ವಿವಿಗೆ ಇತಿಹಾಸ, ಕ್ವಾಲಿಟಿ ಇದೆ. ಮೈಸೂರು ವಿವಿ ದೇಶಾದ್ಯಂತ ಒಳ್ಳೆಯ ಹೆಸರಿದೆ. ಯುನಿವರ್ಸಿಟಿ ಗಂಭೀರತೆ ಕಡಿಮೆಯಾಗಿದೆ ಅಂತ ಚರ್ಚೆಯಾಗಿದ್ದು, ಎರಡೂ ಸದನದಲ್ಲಿ ಚರ್ಚೆಯಾಗಿ ಮೈಸೂರು ವಿವಿಗೆ ಕೊಡಲು ಒತ್ತಾಯ ಇದೆ. ಹಾಗಾಗಿ ಈಗಾಗಲೇ ಈ ಬಗ್ಗೆ ವರದಿ ನೀಡಲು ಸರ್ಕಾರ ಸೂಚನೆ ನೀಡಿದೆ ಎಂದು ಹೇಳಿದರು.

ವರದಿ ಬಂದ ನಂತರ ವಿಲೀನದ ಬಗ್ಗೆ ತೀರ್ಮಾನವಾಗುತ್ತದೆ. ಮೈಸೂರು ವಿವಿಗೆ ವಿಲೀನ ಒಪ್ಪದಕ್ಕೆ ಬಹಳ ಜನರ ಅಭಿಪ್ರಾಯ ಇದೆ. ಹಣಕಾಸಿನ ಕೊರತೆ ಇದೆ, ಸಂಪೂರ್ಣವಾಗಿ ಮಂಡ್ಯ ವಿವಿ ಪರಿವರ್ತನೆ ಆಗಿಲ್ಲ. ಇಲ್ಲಿ ಹಲವಾರು ಸಮಸ್ಯೆಗಳು ಇವೆ. ಮೈಸೂರು ಯುನಿವರ್ಸಿಟಿ ಅಂದರೆ ಒಂದು ಎನರ್ಜಿ. ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿ ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಮಂಡ್ಯ ಕೃಷಿ ವಿವಿಗೆ ಹಲವು ಜಿಲ್ಲೆಯ ಕೃಷಿ ಕಾಲೇಜುಗಳ ವಿಲೀನ ವಿಚಾರದ ಬಗ್ಗೆ ಮಾತನಾಡಿ, ಹಾಸನ ಜಿಲ್ಲೆಯ ಕಾಲು ವಿಲೀನ ಮಾಡುವುದಕ್ಕೆ ರೇವಣ್ಣ ವಿರೋಧಿಸಿದ್ದಾರೆ. ಅವರವರ ಹಕ್ಕು, ರೇವಣ್ಣ ಅವರು ಮಾತನಾಡೋದು ಅವರ ಇಷ್ಟ ಸರ್ಕಾರ ನೋಡಿ ತೀರ್ಮಾನ ತೆಗೆದುಕೊಳ್ಳುತ್ತದೆ. ಕೃಷಿ ವಿವಿ ಹಾಸನಕ್ಕೆ ಬರಬೇಕಿತ್ತು ಎಂಬುದು ರೇವಣ್ಣ ಆಸೆ. ಮಂಡ್ಯಕ್ಕೆ ಬಂದಿದೆ. ಅದಕ್ಕೆ ಅವರು ಸಹಿಸುತ್ತಿಲ್ಲ. ಮಂಡ್ಯ ರಾಜಕೀಯವಾಗಿ ಉಪಯೋಗಿಸಿಕೊಳ್ಳಬಹುದು ಅಷ್ಟೆ ಮಂಡ್ಯಕ್ಕೆ ಬಜೆಟ್ ಬರಬೇಕಿತ್ತು. ಆದರೆ ಅವರು ಹಾಸನಕ್ಕೆ ಕೇಳಿದ್ದರು. ಎರಡು ಜಿಲ್ಲೆ ಬಿಟ್ಟು ಆ ಕಾಲೇಜು ರಾಯಚೂರಿಗೆ ಹೋಯಿತು. ರೇವಣ್ಣ ಮತ್ತವರ ಕುಟುಂಬಕ್ಕೆ ಮಂಡ್ಯದವರ ಮತ ಬೇಕು ಅಷ್ಟೇ ಮಂಡ್ಯಕ್ಕೆ ಏನು ಮಾಡಲು ಇಷ್ಟ ಇಲ್ಲ ಎಂದು ಕಿಡಿಕಾರಿದರು.

ಸಚಿವ ರಾಜಣ್ಣ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ವಿಚಾರದ ಬಗ್ಗೆ ಮಾತನಾಡಿ, ನಮ್ಮ ರಾಜ್ಯದ ನಾಯಕ ಖರ್ಗೆ ಅವರು ಅಧ್ಯಕ್ಷ ಆಗಿರೋದು ನಮ್ಮ ಸೌಭಾಗ್ಯ. ಯಾರು ಹೋದರು ಅವರನ್ನು ಭೇಟಿ ಮಾಡುತ್ತಾರೆ. ಬಹುಶಃ ಅವರ ಭೇಟಿ ಬಗ್ಗೆ ಗೊತ್ತಿಲ್ಲ. ಇದರ ಬಗ್ಗೆ ಖರ್ಗೆ ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. ಅದರ ಬಗ್ಗೆ ಚರ್ಚೆ ಸೂಕ್ತ ಅಲ್ಲ ಎಂದು ತಿಳಿಸಿದರು.

ಫೆ.17ರಿಂದ ನಾಗಮಂಗಲ ಸವದತ್ತಿ ಎಲ್ಲಮ್ಮ ದೇವಿ ಜಾತ್ರಾ ಮಹೋತ್ಸವ

ನಾಗಮಂಗಲ, ಫೆ14– ನಾಗಮಂಗಲ ಮತ್ತು ಸುತ್ತಮುತ್ತಲಿನ ಸಾವಿರಾರು ಭಕ್ತರ ಆರಾಧ್ಯ ದೇವಿ ಸವದತ್ತಿ ಎಲ್ಲಮ್ಮನವರ ಜಾತ್ರಾ ಮಹೋತ್ಸವವು ಫೆ.17 ಮತ್ತು 18 ರಂದು ವಿಜೃಂಭಣೆಯಿಂದ ನಡೆಯಲಿದೆ ಎಂದು ಪ್ರಧಾನ ಅರ್ಚಕ ಎನ್.ಬಿ.ನರಸಿಂಹ ತಿಳಿಸಿದರು. ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಫೆ.17ರಂದು ನಡೆಯಲಿದೆ.



ಅರ್ಚಕ ನರಸಿಂಹ ಮಾತನಾಡಿದರು.

ಬೆಳಗ್ಗೆ 11 ಗಂಟೆಗೆ ನಾಗಮಂಗಲ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಿಯ ಉತ್ಸವ ಮಧ್ಯಾಹ್ನ 3.30ಕ್ಕೆ ದೀಪ ಪ್ರಜ್ವಾಲನಾ, ಅನುಜ್ಞೆ ಗಂಗೆ ಪೂಜೆ, ಮಹಾ ಗಣಪತಿ ಹೋಮ, ನವಗ್ರಹ ಶಾಂತಿ ಹೋಮ, ಮೃತ್ಯುಂಜಯ ಹೋಮ ಹಾಗೂ ದುರ್ಗಿ ಹೋಮ, ಸಂಜೆ 6 ಗಂಟೆಗೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮತ್ತು ಜಮದಗ್ನಿ ಮತ್ತು ಸವದತ್ತಿ ಎಲ್ಲಮ್ಮನವರ ಕಲ್ಯಾಣೋತ್ಸವ ಕಾರ್ಯಕ್ರಮಗಳು ಜರುಗಲಿವೆ.

ಫೆ.18 ರಂದು ಬೆಳಗ್ಗೆ 9.30 ಗಂಟೆಗೆ ಟಿ.ಬಿ.ಸರ್ಕಲ್‌ನಲ್ಲಿರುವ ಗಣಪತಿ ದೇವಸ್ಥಾನದಿಂದ ಹೂ ಹೊಂಬಾಳೆ, ವೀರಗಾಸೆ ಕುಣಿತ ಮತ್ತು ತಮಟೆ ವಾದ್ಯದೊಂದಿಗೆ ಶ್ರೀ ಸವದತ್ತಿ ಎಲ್ಲಮ್ಮ, ಆಂಜನೇಯ ಸ್ವಾಮಿ, ಬಡಗುಡಮ್ಮ ದೇವರುಗಳ ಕಳಸ ಉತ್ಸವ, ಸವದತ್ತಿ ಎಲ್ಲಮ್ಮ ದೇವಿಯ ರಥೋತ್ಸವ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದ್ದು, ದೇವಿಯ ಸದ್ಭಕ್ತರು ಎಲ್ಲಾ ಕಾರ್ಯ ಕ್ರಮಗಳಲ್ಲಿ ಭಾಗವಹಿಸಿ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ದೇವಸ್ಥಾನದ ಅರ್ಚಕರು ಉಪಸ್ಥಿತರಿದ್ದರು.

ದಳವಾಯಿ ಕೋಡಿಹಳ್ಳಿ ಗ್ರಾಪಂಗೆ ಪಾರ್ವತಿ ಅಧ್ಯಕ್ಷೆ



ಅವಿರೋಧವಾಗಿ ಅಧ್ಯಕ್ಷೆಯಾಗಿ ಆಯ್ಕೆಯಾದ ಪಾರ್ವತಿ ಅವರನ್ನು ಸನ್ಮಾನಿಸಲಾಯಿತು.

ಹಲಗೂರು, ಫೆ14– ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶ್ರೀಮತಿ ಪಾರ್ವತಿ ಸಂಪತ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಗಳಾದ ಪಿಡಬ್ಲ್ಯೂಡಿ ಸಹಾಯಕ ಕಾರ್ಯಪಾಲಕ ಅಭಿಯಂತರ ಡಿ.ಹರೀಶ್ ಕುಮಾರ್ ಪಾರ್ವತಿ ಆರ್. ಸಂಪತ್ ಕುಮಾರ್ ಅವಿರೋಧವಾಗಿ ಆಯ್ಕೆಯನ್ನು ಘೋಷಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಪಾರ್ವತಿ. ಆರ್. ಸಂಪತ್ ಕುಮಾರ್ ಮಾತನಾಡಿ, ನಾನು ಅಧ್ಯಕ್ಷರಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲಾ ಗ್ರಾಪಂ ಸದಸ್ಯರಿಗೂ ಹಾಗೂ ದಳವಾಯಿಕೋಡಿಹಳ್ಳಿ ಗ್ರಾಮಸ್ಥರಿಗೆ ಧನ್ಯವಾದಗಳು, ಮುಂದಿನ ನನ್ನ ಅಧಿಕಾರವಧಿಯಲ್ಲಿ ದಳ ವಾಯಿಕೋಡಿಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳನ್ನು ಅಭಿವೃದ್ಧಿ ಪಡಿಸಲು ಶಾಸಕ ಪಿ.ಎಂ. ನೇರಂದ್ರ ಸ್ವಾಮಿಯವರ ಸಲಹೆ ಮತ್ತು ಸೂಚನೆ ಪಡೆದು ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಇದೇ ವೇಳೆ ಪಿಡಿಓ ವಿಜಯ ಕುಮಾರ್, ಉಪಾಧ್ಯಕ್ಷೆ ಎಸ್. ಮಾಲಾಶ್ರೀ, ಗ್ರಾಪಂ ಸದಸ್ಯರಾದ ನಾಗರಾಜು, ಶಿವರಾಜು, ರವಿ, ಆನಂದ್, ನಾಗರತ್ನ, ಲಕ್ಷ್ಮಿ, ಡಿ.ಕೆ. ಶೃತಿ, ಶಿವಣ್ಣ, ನಿಂಗಮ್ಮ, ಪ್ರಸಾದ್, ಮುಖಂಡರಾದ ರವೀಶ್, ಬಾ.ಗೋ. ಕುಮಾರ್, ಮಲ್ಲೇಶ್, ಬಸವರಾಜು ಇತರರಿದ್ದರು.

ಪ್ರತಿಭಟನೆಗೆ ಬೆಂಬಲ



ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ತಾಲೂಕು ಗ್ರಾಮ ಆಡಳಿತ ಅಧಿಕಾರಿಗಳು ಕೆ.ಆರ್.ಪೇಟೆ ಪಟ್ಟಣದ ತಾಲೂಕು ಕಚೇರಿಯ ಆವರಣದಲ್ಲಿ ನಡೆಸುತ್ತಿರುವ ಅನಿರ್ಧಿಷ್ಟಾವಧಿ ಮುಷ್ಕರವು ಐದನೇ ದಿನಕ್ಕೆ ಕಾಲಿಟ್ಟಿದ್ದು, ಪ್ರತಿಭಟನಾ ಸ್ಥಳಕ್ಕೆ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಮತ್ತು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಆರ್.ಆನಂದಕುಮಾರ್, ಕರವೇ ಜಿಲ್ಲಾಧ್ಯಕ್ಷ ಡಿ.ಎಸ್.ವೇಣು, ಟೆಂಪೋ ಶ್ರೀನಿವಾಸ್ ಭೇಟಿ ನೀಡಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ವೀರ ನಿಧನ



ಮಂಡ್ಯ, ಫೆ.14– ಪತ್ರಕರ್ತ ಹೆಚ್.ವಿ.ರವಿ ಅವರ ತಂದೆ ವೀರ (68) ಶುಕ್ರವಾರ ಬೆಳಗ್ಗೆ ಹೊನಗಳ್ಳಿಮಠದ ಸ್ವಗೃಹದಲ್ಲಿ ನಿಧನರಾದರು. ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆದು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಮೃತರು ಪತ್ನಿ ಗೋವಿಂದಮ್ಮ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಹೊನಗಳ್ಳಿ ಮಠದ ಗ್ರಾಮದ ರುದ್ರಭೂಮಿಯಲ್ಲಿ ನಾಳೆ (ಫೆ.15) ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಶ್ರೀರಂಗಪಟ್ಟಣ ಯುವ ಕಾಂಗ್ರೆಸ್‌ಗೆ ಪದಾಧಿಕಾರಿಗಳ ಆಯ್ಕೆ



ಸಂಜಯ್ ಹೆಚ್.ಕೆ



ರಜನಿಕಾಂತ್ ಬಿ.ಡಿ.

ಶ್ರೀರಂಗಪಟ್ಟಣ, ಫೆ.14– ಶ್ರೀರಂಗಪಟ್ಟಣ ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷರಾಗಿ ಎಚ್.ಕೆ. ಸಂಜಯ್ ಆಯ್ಕೆಯಾಗಿದ್ದಾರೆ. ಹೊಸಹುಂಡವಾಡಿ ಸಂಜಯ್ 25,489 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಪಕ್ಷದ ನಗರ ಘಟಕದ ಅಧ್ಯಕ್ಷರಾಗಿ ರಜನಿಕಾಂತ್ ಬಿ.ಡಿ ಮತ್ತು ಕಾಂಗ್ರೆಸ್ ಗ್ರಾಮಾಂತರ ಘಟಕದ ಅಧ್ಯಕ್ಷರಾಗಿ ಸೂನಗಹಳ್ಳಿ ಕಿಶೋರಕುಮಾರ್ ಎಸ್.ವಿ. ಆಯ್ಕೆಯಾಗಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ. ವಿಧಾನಸಭಾ ಕ್ಷೇತ್ರದಲ್ಲಿ ಸೆ.24ರಿಂದ ಅ.24 ವರೆಗೆ ಕಾಂಗ್ರೆಸ್ ಸದಸ್ಯತ್ವ ಅಭಿಯಾನ ನಡೆಸಿ ಜತೆಯಲ್ಲೇ ಪದಾಧಿಕಾರಿಗಳ ಆಯ್ಕೆಗೆ ಮತದಾನವನ್ನೂ ನಡೆಸಲಾಗಿತ್ತು.

ಒಂದನೇ ಪುಟದಿಂದ

ಕಾನೂನು ಕ್ರಮ ಕೈಗೊಳ್ಳಿ

ಎಂದು ಸೂಚನೆ ನೀಡಿದರಲ್ಲದೇ, ಯಾವುದೇ ಕಾರಣಕ್ಕೂ ಅಮಾಯಕರಿಗೆ ತೊಂದರೆ ಕೊಡಬಾರದು ಎಂದು ತಿಳಿಸಿದರು.

ಹಿನ್ನೆಲೆ: ದೆಹಲಿ ವಿಧಾನಸಭೆ ಚುನಾವಣೆ ಫಲಿತಾಂಶ ಸಂಬಂಧ ಕಲ್ಯಾಣಗಿರಿಯ ಸತೀಶ್ ಪಾಂಡುರಂಗ ಎಂಬಾತ ಕಳೆದ ಸೋಮವಾರ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದ. ಈ ಸಂಬಂಧ ಆತನನ್ನು ಬಂಧಿಸಿದ್ದ ಉದಯಗಿರಿ ಠಾಣೆ ಪೊಲೀಸರು ವಿಚಾರಣೆ ನಡೆಸುತ್ತಿದ್ದ ವೇಳೆ ಠಾಣೆ ಮುಂದೆ ಜಮಾಯಿಸಿದ್ದ ಒಂದು ಸಮುದಾಯದ ಸಾವಿರಾರು ಯುವಕರು ಅವಹೇಳನಕಾರಿ ಪೋಸ್ಟ್ ವಿರುದ್ಧ ಪ್ರತಿಭಟನೆ ನಡೆಸಿದ್ದಲ್ಲದೇ, ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದರು. ಈ ವೇಳೆ ಹಲವು ವಾಹನಗಳು ಜಖಂಗೊಂಡಿದ್ದು, 7 ಮಂದಿ ಪೊಲೀಸರು ಗಾಯಗೊಂಡಿದ್ದರು. ಗಸ್ತಿನಲ್ಲಿದ್ದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿಯವರ ಕಾರಿನ ಮೇಲೂ ಕಲ್ಲು ತೂರಾಟ ನಡೆದಿತ್ತು.

ಪರಿಸ್ಥಿತಿ ಕೈಮೀರುತ್ತಿರುವುದನ್ನು ಮನಗಂಡ ಪೊಲೀಸರು, ಲಾಠಿಚಾರ್ಜ್ ನಡೆಸಿ, ಅಶ್ರುವಾಯು ಪ್ರಯೋಗ ಮಾಡಿ ಗುಂಪನ್ನು ಚದುರಿಸಿದ್ದರು. ಇಡೀ ಉದಯಗಿರಿ ಪ್ರದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ವತಃ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಉದಯಗಿರಿ ಠಾಣೆಯಲ್ಲಿ ರಾತ್ರಿಯಿಡೀ ಠಿಕಾಣಿ ಹೂಡಿ ಕಾನೂನು–ಸುವ್ಯವಸ್ಥೆ ನಿರ್ವಹಣೆಗೆ ಮಾರ್ಗದರ್ಶನ ನೀಡಿದ್ದರು.

ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಉದಯಗಿರಿ ಠಾಣೆಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದರು. ಪೊಲೀಸ್ ಠಾಣೆ ಮೇಲೆ ದಾಳಿ ಸಂಬಂಧ ಈವರೆಗೆ 20 ಮಂದಿ ಯನ್ನು ಬಂಧಿಸಲಾಗಿದೆ. ಇಂದು ಮಧ್ಯಾಹ್ನ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳ ಸಭೆ ನಡೆಸಿದರೆ, ಇತ್ತ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಉದಯಗಿರಿ ಠಾಣೆಗೆ ಭೇಟಿ ನೀಡಿ ಹಿರಿಯ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದು ಸೂಕ್ತ ನಿರ್ದೇಶನಗಳನ್ನು ನೀಡಿದ್ದಾರೆ.

ನಿರ್ದಾಕ್ಷಿಣ್ಯ ಕ್ರಮ

ಸಮಾಜದಲ್ಲಿ ಶಾಂತಿ ಕಾಪಾಡುವುದು ಮುಖ್ಯ. ಕಾನೂನು ರಕ್ಷಣೆ ಪೊಲೀಸರ ಮೊದಲ ಆದ್ಯತೆ ಎಂದು ಡಾ. ಪರಮೇಶ್ವರ್ ತಿಳಿಸಿದರು. ಘಟನೆ ಬಳಿಕ ಕೆಲವರು ಮನಬಂದಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಂತಹ ಹೇಳಿಕೆಗಳಿಂದ ಪೊಲೀಸರನ್ನು ಕುಗ್ಗಿಸಲು ಸಾಧ್ಯವಿಲ್ಲ. ಅವರಿಗೆ ಅಂತಹ ಎಲ್ಲಾ ತರಬೇತಿಗಳನ್ನು ನೀಡಲಾಗಿರುತ್ತದೆ. ಅವರ ಆತ್ಮಸ್ಥೈರ್ಯ ಕುಗ್ಗಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದ ಅವರು, ಉತ್ತರ ಪ್ರದೇಶದಲ್ಲಿ ಬುಲ್ಡೋಜರ್ ತೆಗೆದುಕೊಂಡು ಹೋಗುವ ಕೆಲಸವಾಗುತ್ತದೆ. ಕರ್ನಾಟಕದಲ್ಲಿ ಸದ್ಯಕ್ಕೆ ಅಂತಹ ಪರಿಸ್ಥಿತಿ ಬಂದಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಉದಯಗಿರಿಗೆ ಮತ್ತೊಂದು ಪೊಲೀಸ್ ಠಾಣೆ ಬೇಕೆಂದು ಪೊಲೀಸ್ ಆಯುಕ್ತರು ಮನವಿ ಮಾಡಿಕೊಂಡಿದ್ದಾರೆ. ಆ ಕುರಿತು ನಾವು ಚರ್ಚೆ ಮಾಡುತ್ತೇವೆ. ಉದಯಗಿರಿ ಠಾಣೆ ಮೇಲೆ ಕಲ್ಲು ತೂರಿದ ಘಟನೆಯನ್ನು ಪೊಲೀಸರು ನಿಯಂತ್ರಿಸಿದ್ದಾರೆ. ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಬರುವಷ್ಟರಲ್ಲಿ ಇದು ನಡೆದುಹೋಗಿದೆ ಎಂದು ಗೃಹ ಸಚಿವರು ತಿಳಿಸಿದರು.

ಡಿಸಿಪಿಗಳಾದ ಎಂ.ಮುತ್ತುರಾಜು, ಎಸ್. ಜಾಹ್ನವಿ, ಎಸ್ಪಿ ಎನ್. ವಿಷ್ಣುವರ್ಧನ, ಎಸಿಪಿ ಶಾಂತಮಲ್ಲಪ್ಪ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಎರಡು ವಾರದಲ್ಲಿ ತೀರ್ಮಾನಿಸಿ

ಗುರುವಾರ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಅರವಿಂದ ಕುಮಾರ್ ಅವರಿದ್ದ ಪೀಠದ ಮುಂದೆ ವಿಚಾರಣೆ ನಡೆದ ವೇಳೆ ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು, ನಾವು (ಕರ್ನಾಟಕ ಸರ್ಕಾರ) ಅರಮನೆ ಮೈದಾನಕ್ಕೆ ಹೊಂದಿಕೊಂಡಂತೆ ರಸ್ತೆ ಅಗಲೀಕರಣ ಮಾಡುತ್ತಿಲ್ಲ. ಹೀಗಾಗಿ ಟಿಡಿಆರ್ ಕೊಡುವ ಪ್ರಶ್ನೆ ಉದ್ಭವಿಸದು. ಬೆಂಗಳೂರು ಅರಮನೆಗೆ ಸಂಬಂಧಿಸಿದಂತೆ 1996ರಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಹೈಕೋರ್ಟ್‌ನಲ್ಲಿ ತೀರ್ಪು ಬಂದಿದೆ. ಅದರ ಮೇಲ್ಮನವಿ ಅರ್ಜಿ 1997ರಿಂದ ಸುಪ್ರೀಂಕೋರ್ಟ್‌ನಲ್ಲಿದ್ದು, ಅದನ್ನು ತ್ವರಿತವಾಗಿ ಇತ್ಯರ್ಥಗೊಳಿಸಿದರೆ ಈ ಪ್ರಕರಣವೂ (ಟಿಡಿಆರ್ ಸಂಬಂಧ) ಇತ್ಯರ್ಥವಾಗಲಿದೆ ಎಂದು ಹೇಳಿದರು.

ಈ ವೇಳೆ ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಅವರು, ರಸ್ತೆ ಅಗಲೀಕರಣ ಮಾಡುವುದಾಗಿ ನೀವೇ (ಕರ್ನಾಟಕ ಸರ್ಕಾರ) ಹೇಳಿದ್ದೀರಿ. ಈಗ ಅದರಿಂದ ಹಿಂದೆ ಸರಿಯುತ್ತಿದ್ದೀರಿ. ಈ ಪ್ರಕರಣವನ್ನು ಇತ್ಯರ್ಥಗೊಳಿಸಿಕೊಳ್ಳದೆ 11 ವರ್ಷದಿಂದ ಎಳೆದಾಡುತ್ತಿದ್ದೀರಿ. ಬೆಂಗಳೂರು ಅರಮನೆಗೆ ಸಂಬಂಧಿಸಿದಂತೆ ಟಿಡಿಆರ್ ಕೊಡುವ ಬಗ್ಗೆ ಈಗಾಗಲೇ ಸುಪ್ರೀಂಕೋರ್ಟ್ ತೀರ್ಪು ಇದೆ. ಅದನ್ನು ಪಾಲನೆ ಮಾಡಬೇಕಾಗಿದೆ. ಇಲ್ಲದಿದ್ದರೆ ನಿಮ್ಮ ಅಧಿಕಾರಿಗಳಿಗೆ ತೊಂದರೆ ಆಗುತ್ತದೆ ಎಂದರಲ್ಲದೇ, 2 ವಾರದೊಳಗೆ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳುವಂತೆ ನಿಮ್ಮ ಕಕ್ಷಿದಾರರಿಗೆ (ಕರ್ನಾಟಕ ಸರ್ಕಾರ) ಸಲಹೆ ನೀಡಿ. ಒಂದು ವೇಳೆ ಸಮಸ್ಯೆ ಇತ್ಯರ್ಥವಾಗದಿದ್ದಲ್ಲಿ ಕೋರ್ಟ್ ಮುಂದಿನ ವಿಚಾರಣಾ ಪ್ರಕ್ರಿಯೆ ಆರಂಭಿಸಿ, ವಾದ–ಪ್ರತಿವಾದಗಳನ್ನು ಆಲಿಸಿ, ತೀರ್ಮಾನ ಕೈಗೊಳ್ಳುವುದಾಗಿ ವಿಚಾರಣೆಯನ್ನು ಫೆಬ್ರವರಿ 27ರಂದು ಮಧ್ಯಾಹ್ನ 2 ಗಂಟೆಗೆ ಮುಂದೂಡಿದೆ.

ಮತ್ತೆ ನ್ಯಾಯಾಂಗ ಬಂಧನಕ್ಕೆ

ಲಾಠಿಚಾರ್ಜ್ ನಡೆಸಿ, ಅಶ್ರುವಾಯು ಪ್ರಯೋಗ ಮಾಡಿದ್ದರು. ಪೊಲೀಸರ ವಿಚಾರಣೆ ಬಳಿಕ ಸತೀಶ್ ಅಲಿಯಾಸ್ ಪಾಂಡುರಂಗನನ್ನು ಮಂಗಳವಾರ ಮುಂಜಾನೆ ನ್ಯಾಯಾಧೀಶರ ಮುಂದೆ ನಿವಾಸದಲ್ಲಿ ಹಾಜರುಪಡಿಸಲಾಗಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ನಿನ್ನೆ (ಫೆ. 13) ಆರೋಪಿ ಪರ ವಕೀಲ ಅಮೆ ಭಾಸ್ಕರ್, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಸರ್ಕಾರಿ ವಕೀಲರು ಆಕ್ಷೇಪಣೆ ಸಲ್ಲಿಸಿದ್ದರಿಂದ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ (ಕಿರಿಯ ಶ್ರೇಣಿ) ನ್ಯಾಯಾಧೀಶೆ ಸರೋಜ ಅವರು ವಿಚಾರಣೆಯನ್ನು ಮುಂದೂಡಿದ್ದರು.

ವಕೀಲ ಅಮೆ. ಭಾಸ್ಕರ್ ಅವರು ಪಾಂಡುರಂಗನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ಮನವಿ ಮಾಡಿದಾಗ, ಸರ್ಕಾರಿ ವಕೀಲರು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ವಶಕ್ಕೆ ನೀಡುವಂತೆ ಮನವಿ ಮಾಡಿದ್ದರು. ಅದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ ಆರೋಪಿ ಪರ ವಕೀಲರು, ಈಗಾಗಲೇ ನ್ಯಾಯಾಂಗ ಬಂಧನದಲ್ಲಿರುವ ವ್ಯಕ್ತಿಯನ್ನು ಮತ್ತೆ ಪೊಲೀಸ್ ಕಸ್ಟಡಿಗೆ ಪಡೆಯುವ ಉದ್ದೇಶವಾದರೂ ಏನು ಎಂದು ಪ್ರಶ್ನಿಸಿದರು.

ಆರೋಪಿಯಿಂದ ಮೊಬೈಲ್ ವಶಪಡಿಸಿಕೊಂಡು ವಿಚಾರಣೆ ಮಾಡಬೇಕಾಗಿದೆ ಎಂಬ ಸರ್ಕಾರಿ ವಕೀಲರ ವಾದಕ್ಕೆ ಪ್ರತಿವಾದ ಮಂಡಿಸಿದ ಅಮೆ ಭಾಸ್ಕರ್, ಆರೋಪಿಯಿಂದ ಮೊಬೈಲ್ ಅನ್ನು ವಶಕ್ಕೆ ಪಡೆಯದೇ ಆತನೇ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟರ್ ಹಾಕಿದ್ದಾನೆಂದು ಹೇಗೆ ಬಂಧಿಸಲಾಯಿತು? ಎಂದು ಪ್ರಶ್ನಿಸಿದರಲ್ಲದೆ, ಇದು ಕಾನೂನುಬಾಹಿರ ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಇಂದು (ಫೆ.14) ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಆದೇಶಿಸಿ ವಿಚಾರಣೆಯನ್ನು ಮುಂದೂಡಿದ್ದರು. ಇಂದು ಸುರೇಶ್ ಪಾಂಡುರಂಗರನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಯನ್ನು ಒಂದು ದಿನದ ಮಟ್ಟಿಗೆ ಪೊಲೀಸರ ವಶಕ್ಕೆ ನೀಡಿ, ಶನಿವಾರ 3.30 ಗಂಟೆಗೆ ವಿಚಾರಣೆ ಮುಂದೂಡಿದರಾದರೂ ಪೊಲೀಸರು ಆರೋಪಿಯನ್ನು ತಮ್ಮ ವಶಕ್ಕೆ ಪಡೆದ ಕೆಲವೇ ಗಂಟೆಗಳಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಆತನನ್ನು ಮತ್ತೆ ನ್ಯಾಯಾಂಗ ಬಂಧನಕ್ಕೆ ಒಳಪಡಿಲಾಗಿದೆ. ಅರ್ಜಿ ವಿಚಾರಣೆ ನಡೆಯುತ್ತಿದ್ದಾಗ ಮೊಬೈಲ್‌ಗಳಲ್ಲಿ ವೀಡಿಯೋ ಮಾಡುತ್ತಿದ್ದ ಐವರಿಂದ ಮೊಬೈಲ್ ಕಿತ್ತುಕೊಂಡ ಪೊಲೀಸರು, ಕ್ಲಿಪ್ಪಿಂಗ್‌ಗಳನ್ನು ಡಿಲಿಟ್ ಮಾಡಿಸಿದರು.

ದುಷ್ಕೃತ್ಯ ಶಂಕೆ

ಸಿಬ್ಬಂದಿಗಳೇ ಪಾಂಡುರಂಗ ಅವರ ಮೊಬೈಲ್ ಫೋನ್‌ನಲ್ಲಿ ಫೇಸ್‌ಬುಕ್‌ಗೆ ಷೇರ್ ಮಾಡಿದ್ದಾರೆಂಬ ಶಂಕೆ ದಟ್ಟವಾಗಿ ಹರಡಿದೆ. ಘಟನೆ ತಾರಕಕ್ಕೋಗುತ್ತಿದ್ದಂತೆಯೇ ಪೊಲೀಸರು ಪಾಂಡುರಂಗ ಅವರ ಮೊಬೈಲ್‌ಗಳನ್ನು ವಶಪಡಿಸಿಕೊಂಡು ತನಿಖೆ ಕೈಗೊಂಡಿರುವುದರಿಂದ ಅದರಲ್ಲಿ ಡ್ರೈ ಫ್ರೂಟ್ಸ್ ಪ್ಯಾಕ್ ಮಾಡುತ್ತಿದ್ದ ಕೆಲವರು ಈ ಕೃತ್ಯ ಎಸಗಿದ್ದಾರೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆಯೇ ಸಂಶಯಗೊಂಡ ಸಿಸಿಬಿ ಪೊಲೀಸರು, ಅವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಕೆಲಸ ಕೊಟ್ಟ ಧಣಿಯ ಮೊಬೈಲ್‌ನಿಂದ ಅವಹೇಳನಕಾರಿ ಪೋಸ್ಟ್ ಅನ್ನು ಫೇಸ್‌ಬುಕ್ ಖಾತೆಗೆ ಕಳುಹಿಸುವ ಮೂಲಕ ಉದ್ದೇಶಪೂರ್ವಕವಾಗಿ ಈ ಕೃತ್ಯ ಎಸಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಕಲ್ಯಾಣಗಿರಿಯಲ್ಲಿರುವ ಸುರೇಶ ಪಾಂಡುರಂಗ ಅವರ ಡ್ರೈ ಫ್ರೂಟ್ಸ್ ಪ್ಯಾಕಿಂಗ್ ಯೂನಿಟ್, ಮನೆ ಹಾಗೂ ಅವರು ನಿರಂತರವಾಗಿ ಅಡ್ಡಾಡುತ್ತಿದ್ದ ಸ್ಥಳಗಳಲ್ಲಿ ಮಫ್ತಿ ಪೊಲೀಸರನ್ನು ನಿಯೋಜಿಸಲಾಗಿದೆ. ಯೂನಿಟ್‌ನಲ್ಲಿ ಕೆಲಸ ಮಾಡುತ್ತಿರುವ ಶಂಕಿತ ನೌಕರರನ್ನು ಠಾಣೆಗೆ ಕರೆತಂದು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಆರ್‌ಎಸ್‌ಎಸ್ ಕಾರ್ಯಕರ್ತರೆಂಬುದನ್ನು ಸಾಬೀತು ಮಾಡದಿದ್ದರೆ ರಾಜೀನಾಮೆ ನೀಡಲಿ

ಎಂ.ಲಕ್ಷ್ಮಣ್‌ಗೆ ಮಾಜಿ ಶಾಸಕ ಎಲ್.ನಾಗೇಂದ್ರ ಸವಾಲು

ಮೈಸೂರು:300 ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರು ಉದಯಗಿರಿ ಠಾಣೆಗೆ ಬಂದು ಕಲ್ಲು ತೂರಿದರೆಂಬುದನ್ನು ಸಾಬೀತು ಮಾಡದಿದ್ದರೆ ಕಾಂಗ್ರೆಸ್ ವಕ್ತಾರ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಎಂ. ಲಕ್ಷ್ಮಣ್‌ಗೆ ಬಿಜೆಪಿ ನಗರಾಧ್ಯಕ್ಷರೂ ಆಗಿರುವ ಮಾಜಿ ಶಾಸಕ ಎಲ್.ನಾಗೇಂದ್ರ ಸವಾಲು ಹಾಕಿದ್ದಾರೆ. ಉದಯಗಿರಿ ಠಾಣೆ ಬಳಿ ಜಮಾಯಿಸಿ ಬೇರೆಯವರ ವೇಷ ಧರಿಸಿ ಆರ್‌ಎಸ್‌ಎಸ್ ಕಾರ್ಯಕರ್ತರು ಕಲ್ಲು ತೂರಿ ಅಧಿಕಾರಿಗಳು, ಸಿಬ್ಬಂದಿಯ ಗಾಯಗೊಳಿಸಿ ಉದ್ವಿಗ್ನ ವಾತಾವರಣ ಉಂಟು ಮಾಡಿದ್ದರು ಎಂದು ಹೇಳಿಕೆ ನೀಡಿರುವ ಲಕ್ಷ್ಮಣ್, ಅದನ್ನು ಸಾಬೀತು ಮಾಡಲಿ. ಇಲ್ಲದಿದ್ದರೆ ವಕ್ತಾರ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆಗೆ ಹೋಗಲಿ ಎಂದು ಅವರು ಆಗ್ರಹಿಸಿದ್ದಾರೆ.

ಆರು ಲಕ್ಷ ಉದ್ಯೋಗ ಸೃಷ್ಟಿ!

ಉತ್ತರ ಕರ್ನಾಟಕದ ಪ್ರದೇಶಗಳಿಗೆ ಹರಿಯಲಿದೆ ಎಂದರು. ಸೃಷ್ಟಿಯಾಗಲಿರುವ 6 ಲಕ್ಷ ಉದ್ಯೋಗಗಳು ತಯಾರಿಕೆ ಮತ್ತು ಇಂಧನ ಉತ್ಪಾದನೆ ಕ್ಷೇತ್ರಕ್ಕೆ ಸೇರಿವೆ. ಹೂಡಿಕೆಗಳಲ್ಲಿ ಜಿಂದಾಲ್ ಸಮೂಹವು ಇಂಧನ, ಸಿಮೆಂಟ್, ಉಕ್ಕು ಮತ್ತು ಪೂರಕ ಉದ್ಯಮಗಳಲ್ಲಿ 1.2 ಲಕ್ಷ ಕೋಟಿ ರೂ. ಹೂಡುತ್ತಿದೆ. ಬಲ್ದೋಟಾ ಸಮೂಹವು ಕೊಪ್ಪಳದಲ್ಲಿ 54 ಸಾವಿರ ಕೋಟಿ ರೂ. ಹೂಡಿಕೆ ಯೊಂದಿಗೆ ಕೊಪ್ಪಳದಲ್ಲಿ ಉಕ್ಕು ತಯಾರಿಕಾ ಘಟಕವನ್ನು ಸ್ಥಾಪಿಸುತ್ತಿದೆ. ಲ್ಯಾಮ್ ರೀಸರ್ಚ್ ಕಂಪನಿಯು ತಯಾರಿಕೆ ಮತ್ತು ಸಂಶೋಧನೆಗೆ 10 ಸಾವಿರ ಕೋಟಿ ರೂ.ಗಳಷ್ಟು ಬೃಹತ್ ಬಂಡವಾಳ ತೊಡಗಿಸುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಇನ್ನುಳಿದಂತೆ ಸ್ನೀಡರ್ ಎಲೆಕ್ಟ್ರಿಕ್ ಸಂಸ್ಥೆಯು ವಿದ್ಯುತ್ ಸಾಧನಗಳ ತಯಾರಿಕೆ ಮತ್ತು ಸಂಶೋಧನೆಗೆ 2,247 ಕೋಟಿ ರೂ., ವೋಲ್ವೊ ಕಂಪನಿಯು ವಿದ್ಯುಚ್ಚಾಲಿತ ಬಸ್, ಟ್ರಕ್ ತಯಾರಿಕೆಗೆ 1,400 ಕೋಟಿ ರೂ., ಹೋಂಡಾ ಕಂಪನಿಯು ಇ.ವಿ. ವಾಹನಗಳ ತಯಾರಿಕೆಗೆ 600 ಕೋಟಿ ರೂ., ಮತ್ತು ಸ್ಯಾಫ್ರಾನ್ ಕಂಪನಿಯು ಏವಿಯಾನಿಕ್ಸ್ ಉತ್ಪಾದನೆಗೆ 225 ಕೋಟಿ ರೂ. ಹೂಡುತ್ತಿವೆ. 2025–30ರವರೆಗಿನ ನೂತನ ಕೈಗಾರಿಕಾ ನೀತಿಯಡಿ ಒಟ್ಟಾರೆಯಾಗಿ 20 ಲಕ್ಷ ಉದ್ಯೋಗ ಸೃಷ್ಟಿಯ ಗುರಿ ಹೊಂದಲಾಗಿದೆ ಎಂದರು. ಹೊಸ ನೀತಿಯಡಿಯಲ್ಲಿ ತುಮಕೂರು ಮತ್ತು ವಿಜಯಪುರದಲ್ಲಿ ಕೈಗಾರಿಕಾ ಪಾರ್ಕ್, ಹುಬ್ಬಳ್ಳಿಯಲ್ಲಿ ಸ್ಟಾರ್ಟಪ್ ಪಾರ್ಕ್, ಉಳಿದ ಭಾಗಗಳಲ್ಲಿ ಡೀಪ್–ಟೆಕ್ ಪಾರ್ಕ್ ಮತ್ತು ಸ್ವಿಫ್ಟ್ ಸಿಟಿ ಮುಂತಾದವು ಅಸ್ತಿತ್ವಕ್ಕೆ ಬರಲಿವೆ. ಡೀಪ್ ಟೆಕ್ ಮತ್ತು ಸ್ವಿಫ್ಟ್ ಸಿಟಿ ಯೋಜನೆಗಳು ತಲಾ 1 ಲಕ್ಷ ಕೋಟಿ ರೂ. ಹೂಡಿಕೆ ಸೆಳೆಯುವ ಮತ್ತು ತಲಾ 1 ಲಕ್ಷ ಉದ್ಯೋಗ ಸೃಷ್ಟಿಸುವಂತಹ ಶಕ್ತಿ ಹೊಂದಿವೆ. ಕ್ವಿನ್ ಸಿಟಿ ಅಭಿವೃದ್ಧಿಗೆ ಸಂಬಂಧಿಸಿದಂತೆ 10 ವಿ.ವಿ.ಗಳೊಂದಿಗೆ ಒಡಂಬಡಿಕೆಗೆ ಅಂಕಿತ ಹಾಕಲಾಗಿದೆ ಎಂದು ಪಾಟೀಲ ನುಡಿದರು.

ಬಿಯಾಂಡ್ ಬೆಂಗಳೂರು ಉಪಕ್ರಮಕ್ಕೆ ಉತ್ತೇಜನ: ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, 1.10 ಲಕ್ಷ ನೋಂದಾಯಿತ ವಾಹನಗಳಿದ್ದು, ಇದು ನಗರದ ಜನಜೀವನದ ಮೇಲೆ ವಿಪರೀತ ಒತ್ತಡ ಸೃಷ್ಟಿಸಿದೆ. ಆದ್ದರಿಂದ ಕೈಗಾರಿಕೆಗಳು ಬೆಂಗಳೂರಿನಿಂದ ಹೊರಗಿರುವ ಪ್ರದೇಶಗಳಿಗೆ ಹೋಗುವುದನ್ನು ಉತ್ತೇಜಿಸಲಾಗುತ್ತಿದೆ. ಇದಕ್ಕಾಗಿ ವಿಶೇಷ ಪ್ರೋತ್ಸಾಹವನ್ನೇ ನೀಡಲಾಗುತ್ತಿದೆ. ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೂ ಹೊಸ ನೀತಿ ತರಲಾಗಿದೆ. ವಿಶೇಷವಾಗಿ ರಾಜ್ಯದ 300 ಕಿ.ಮೀ. ಉದ್ದದ ಕರಾವಳಿ ತೀರದಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ಗಮನ ಹರಿಸಲಿದ್ದೇವೆ. ಜತೆಗೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನೆರವಿಗೆ ಪೋರ್ಟಲ್ ಆರಂಭಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದ್ದಾರೆ. ರಾಜ್ಯದಲ್ಲಿ ಭೂಮಿಯ ಬೆಲೆ ಜಾಸ್ತಿ ಇದೆ. ಹೀಗಾಗಿ ಉದ್ಯಮಿಗಳಿಗೆ ನೆರವು ನೀಡುವ ಬೇರೆಬೇರೆ ಕ್ರಮಗಳತ್ತ ಚಿಂತಿಸಲಾಗುತ್ತಿದೆ. ನಾವು ಹೂಡಿಕೆಯಲ್ಲಿ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುತ್ತಿದ್ದೇವೆಯೇ ವಿನಾ ನೆರೆಹೊರೆಯ ರಾಜ್ಯಗಳ ಜತೆಯಲ್ಲ. ಭೂಮಿಯ ಬೆಲೆ ಹೆಚ್ಚಾಗಲು ಇದೂ ಒಂದು ಕಾರಣವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

10 ಒಪ್ಪಂದಕ್ಕೆ ಸಹಿ: ಮಹತ್ವಾಕಾಂಕ್ಷೆಯ ಕ್ವಿನ್ ಸಿಟಿ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಒಟ್ಟು 10 ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಇದರಲ್ಲಿ ಅಮೆರಿಕಾದ ನ್ಯೂಯಾರ್ಕ್‌ನ ಸೇಂಟ್ ಜಾನ್ಸ್ ಯೂನಿವರ್ಸಿಟಿ ಹಾಗೂ ಯೂನಿವರ್ಸಿಟಿ ಆಫ್ ಲಿವರ್‌ಪೂಲ್ ಜತೆಗೂ ಒಪ್ಪಂದಕ್ಕೆ ಸಹಿ ಮಾಡಲಾಗಿದೆ ಎಂದು ಅವರು ವಿವರಿಸಿದರು.

ವಿಜಯಪುರ ಜಿಲ್ಲೆಗೆ 42 ಸಾವಿರ ಕೋಟಿ: ವಿಜಯಪುರ ಜಿಲ್ಲೆಯಲ್ಲಿ 42 ಸಾವಿರ ಕೋಟಿ ಹೂಡಿಕೆಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಇನ್ನೂ ಕೆಲವು ಒಪ್ಪಂದ ಆಗುವುದರಲ್ಲಿ ಇದ್ದು, ಉತ್ತರ ಕರ್ನಾಟಕಕ್ಕೆ ಒಳ್ಳೆಯ ಅವಕಾಶಗಳು ಮುಂದಿನ ದಿನಗಳಲ್ಲಿ ಸಿಗಲಿವೆ ಎಂದು ಸಚಿವರು ಹೇಳಿದರು.

ಕರ್ನಾಟಕದಲ್ಲಿ ಹೂಡಿಕೆ ಮಾಡುವ ಉದ್ಯಮಿಗಳು ಬರಿಗೈಲಿ ಹೋಗಲ್ಲ...




ಬೆಂಗಳೂರು, ಫೆ.14(ಕೆಎಂಶಿ)– ಕರ್ನಾಟಕದ ಮೇಲೆ ವಿಶ್ವಾಸವಿಟ್ಟು ಉದ್ಯಮ ಸ್ಥಾಪಿಸುವ ಹೂಡಿಕೆದಾರರು ಬರಿಗೈಯಲ್ಲಿ ಹೋಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

ಹೂಡಿಕೆದಾರರು ಕರ್ನಾಟಕದಲ್ಲಿ ಸೋಲುವ ಭಯವಿಲ್ಲ, ರಾಜ್ಯದ ಮೇಲೆ ವಿಶ್ವಾಸವಿಡಬಹುದು. ಭಾರತವನ್ನು ಇಡೀ ಜಗತ್ತು ಬೆಂಗಳೂರು ಹಾಗೂ ಕರ್ನಾಟಕದ ಮೂಲಕ ನೋಡುತ್ತಿದೆ.

ಕರ್ನಾಟಕ ಹಾಗೂ ದೇಶದ ಭವಿಷ್ಯಕ್ಕಾಗಿ ಬಂಡವಾಳ ಹೂಡಿಕೆ ಮಾಡಬೇಕು. ಬಂಡವಾಳ ಹೂಡಿಕೆ ಉದ್ಯೋಗ ಸೃಷ್ಟಿಗೆ ಮಾತ್ರವಲ್ಲ ಪ್ರಗತಿ ಸಾಧಿಸುವ ಗುರಿ ಹೊಂದಿದೆ. ಸಮಾವೇಶದ ಮೂಲಕ 10 ಲಕ್ಷ ಕೋಟಿ ರೂ. ಹೂಡಿಕೆ ಗುರಿ ಹೊಂದಿದ್ದು, ನೂತನ ಕೈಗಾರಿಕಾ ನೀತಿ ಬೆಂಗಳೂರು ಅಲ್ಲದೆ, ರಾಜ್ಯದ ಇತರ ಪ್ರದೇಶಗಳಲ್ಲಿ ಬಂಡವಾಳ ಹೂಡಿಕೆದಾರರಿಗೂ ಹೆಚ್ಚಿನ ಪ್ರೋತ್ಸಾಹ ನೀಡಲಿದೆ.

ಎಂಎಸ್‌ಎಂಇಗಳು ರಾಜ್ಯದ ಏರೋಸ್ಪೇಸ್ ಕ್ಷೇತ್ರದ ದೊಡ್ಡ ಶಕ್ತಿಯಾಗಿವೆ, ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಗೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ತಯಾರಾದ ರಾಕೆಟ್‌ಗಳೇ ಸಾಕ್ಷಿಯಾಗಿವೆ. ಕರ್ನಾಟಕದ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ ದೇಶದ ಇತರ ನಗರಗಳ ಜೊತೆ ಸ್ಪರ್ಧೆಗಾಗಿ ಅಲ್ಲ, ಬದಲಿಗೆ ಇದು ಜಾಗತಿಕ ಮಟ್ಟದ ಸ್ಪರ್ಧೆಯಾಗಿದೆ ಎಂದರು.

ಡಾ.ಜಿ.ಪರಮೇಶ್ವರ್‌ಗೆ ಆತ್ಮೀಯ ಸ್ವಾಗತ



ಮೈಸೂರಿಗೆ ಶುಕ್ರವಾರ ಭೇಟಿ ನೀಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಆತ್ಮೀಯವಾಗಿ ಸ್ವಾಗತಿಸಿದರು. ಈ ವೇಳೆ ಕೆಪಿಸಿಸಿ ಸಂಯೋಜಕ ಬಂಡಿಪಾಳ್ಯ ವಿಜಯ್ ಕುಮಾರ್, ಐಎನ್‌ಡಬ್ಲ್ಯೂಸಿ ರಾಜ್ಯ ಅಧ್ಯಕ್ಷ ಚಿಕ್ಕನಹಳ್ಳಿ ಸಂತೋಷ್, ಇಲವಾಲ ಅಂಬೇಡ್ಕರ್ ಸಂಘದ ಅಧ್ಯಕ್ಷ ಚೆಲುವರಾಜ್, ನಾಗನಹಳ್ಳಿ ಬೆಟ್ಟಪ್ಪ, ಹೊಸಕೋಟೆ ಮುಗಣ್ಣ, ಯಡಹಳ್ಳಿ ಕುಮಾರ್, ಉಂಡುವಾಡಿ ಶಿವಕುಮಾರ್, ಮುಖಂಡರಾದ ಪದ್ಮನಾಭ (ಗುಂಡಣ್ಣ) ಇನ್ನಿತರರಿದ್ದರು.

ಮೈಸೂರು ಮಿತ್ರ

ನಜರ್‌ಬಾದ್‌ನಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ



ಮೈಸೂರು, ಫೆ.14– ಮೈಸೂರಿನ ವಾರ್ಡ್ ನಂಬರ್ 52ರ ನಜರ್‌ಬಾದ್‌ನ ಸಂದಿಕೇರಿ ಭಾಗದಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ಮಾಡುವ ಮೂಲಕ ಸ್ಥಳೀಯ ನಿವಾಸಿಗಳ ಸಮಸ್ಯೆಗಳನ್ನು ಆಲಿಸಿದರು.

ಈ ಭಾಗದಲ್ಲಿ ಸುಮಾರು 30–40 ವರ್ಷಗಳ ಹಿಂದೆ ಮಾಡಿದ ಯುಜಿಡಿ ಲೈನ್ ಇರುವುದರಿಂದ ತುಂಬಾ ಸಮಸ್ಯೆಯಾಗಿದೆ. ಆದ್ದರಿಂದ ಹೊಸದಾಗಿ ಯುಜಿಡಿ ಲೈನ್ ಮಾಡಿಸಿಕೊಡುವಂತೆ ಸ್ಥಳೀಯರು ಮನವಿ ಮಾಡಿದರು ಹಾಗೂ ನಜರ್‌ಬಾದ್‌ನ ಮುಖ್ಯ ರಸ್ತೆಯ ಎಡ ಭಾಗಕ್ಕೆ ಬರುವ ಬಾಕ್ಸ್ ಡ್ರೈನ್ ತುಂಬಿರುವುದರಿಂದ ತುಂಬಾ ಸಮಸ್ಯೆ ಆಗುತ್ತಿದೆ ಎಂದು ಮುಖ್ಯ ರಸ್ತೆಯ ವರ್ತಕರು ದೂರು ನೀಡಿದ ಕಾರಣ ನಗರ ಪಾಲಿಕೆ ಆಯುಕ್ತರಿಗೆ ಕರೆ ಮಾಡಿ ಸಮಸ್ಯೆ ಬಗ್ಗೆ ಗಮನ ಹರಿಸಲು ಶಾಸಕರು ಸೂಚಿಸಿದರು. ಅಲ್ಲದೇ ವಲಯ ಕಛೇರಿ ಆಯುಕ್ತರಾದ ಮಂಜುನಾಥ್ ರೆಡ್ಡಿ ಅವರಿಗೆ ತಕ್ಷಣವೇ ಅಂದಾಜು ಪಟ್ಟಿ ತಯಾರಿಸಿ, ಆಯುಕ್ತರಿಗೆ ಸಲ್ಲಿಸಲು ಆದೇಶಿಸಿದರು.

ಕಿರಿದಾದ ನಜರ್‌ಬಾದ ಮುಖ್ಯ ರಸ್ತೆಯಲ್ಲಿ ಎರಡೂ ಕಡೆಯಲ್ಲೂ ದ್ವಿಚಕ್ರ ಹಾಗೂ ಕಾರುಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ಹಾಗೂ ಸ್ಥಳೀಯರಿಗೂ ಬಹಳ ತೊಂದರೆಯಾಗುತ್ತಿದೆ ಎಂಬ ಬಗ್ಗೆ ಸ್ಥಳೀಯರು ದೂರು ನೀಡಿದ್ದರಿಂದ ವಾರದಲ್ಲಿ ಮೂರು ದಿನ ಒಂದು ಬದಿಯಲ್ಲಿ ಮತ್ತೆ ನಾಲ್ಕು ದಿನ ಮತ್ತೊಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ ಸಂಚಾರಿ ಡಿಸಿಪಿ ಅವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ವಾರ್ಡಿನ ಅಧ್ಯಕ್ಷ ಹೊಯ್ಸಳ, ಹಿಂದುಳಿದ ವರ್ಗಗಳ ಅಧ್ಯಕ್ಷ ಹರೀಶ್, ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಬಿಜೆಪಿ ಮುಖಂಡರಾದ ಪ್ರಸನ್ನ, ನವೀನ್, ಪ್ರಭಾಕರ್ ಶಿಂಧೆ, ಸುಂದರ್ ಮೂರ್ತಿ, ಶೇಖರ್, ಕೃಷ್ಣ, ಹರ್ಷ, ನಂದಾ ಸಿಂಗ್, ವಿಜಯಲಕ್ಷ್ಮಿ, ಚಾಂದಿನಿ ಮುಂತಾದವರಿದ್ದರು.

ಪದೇ ಪದೆ ಬಸ್‌ಗಳ ಅಪಘಾತ; ಸಾರ್ವಜನಿಕರಲ್ಲಿ ತೀವ್ರ ಆತಂಕ

ಮೈಸೂರು, ಫೆ.14(ಎಸ್‌ಬಿಡಿ)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಬಸ್ ಪ್ರಯಾಣ ಸುರಕ್ಷಿತ ಎನ್ನುವುದು ಸಾರ್ವಜನಿಕರ ನಂಬಿಕೆ. ಆದರೆ ಇತ್ತೀಚೆಗೆ ಸಾರಿಗೆ ಸಂಸ್ಥೆ ಬಸ್‌ಗಳ ಸರಣಿ ಅಪಘಾತ ಆತಂಕ ಮೂಡಿಸಿದೆ. ಅಲ್ಲದೆ ಇದಕ್ಕೆ ಕಾರಣ ಏನು ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆದಿದೆ.

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕು ಕುಂದನಹಳ್ಳಿ ಬಳಿ ಗುರುವಾರ ಸಾರಿಗೆ ಬಸ್, ಮರಕ್ಕೆ ರಭಸವಾಗಿ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿಗಳೂ ಸೇರಿದಂತೆ 35ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಕೆಲವರಿಗೆ ಮೂಳೆ ಮುರಿತದಂತಹ ಗಂಭೀರ ಗಾಯಗಳಾಗಿವೆ. ಬಸ್ ಮುಂಭಾಗ ನಜ್ಜುಗುಜ್ಜಾಗಿರುವುದನ್ನು ನೋಡಿದರೆ ಅದು ಎಂತಹ ಭಯಾನಕ ಅಪಘಾತ ಎನ್ನುವುದು ಅರಿವಾಗುತ್ತದೆ. ಕೆಲ ದಿನಗಳ ಹಿಂದೆ ಯಾದಗಿರಿ ಜಿಲ್ಲೆ, ಸುರಪುರ ತಾಲೂಕು ತಿಂಥಣಿ ಬಳಿ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಪುಟ್ಟ ಮಕ್ಕಳು ಹಾಗೂ ಪೋಷಕರು ಸಾವನ್ನಪ್ಪಿದರು. ತುಮಕೂರು ಜಿಲ್ಲೆ, ತಿಪಟೂರು ತಾಲೂಕು, ನೊಣವಿನಕೆರೆ ಬಳಿಯೂ ಬಸ್ ಡಿಕ್ಕಿ ಹೊಡೆದು ಸವಾರರಿಬ್ಬರು ಸ್ಥಳದಲ್ಲೇ ಮೃತಪಟ್ಟರು.

ಕಳೆದ ಜನವರಿಯಲ್ಲಿ ಮಂಡ್ಯದ ಮದ್ದೂರು ತಾಲೂಕು ರುದ್ರಾಕ್ಷಿಪುರದ ಬಸ್ ಉರುಳಿ ಬಿದ್ದು, 33ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದರು. ಹೊನ್ನಾವರದ ರಾಷ್ಟ್ರೀಯ ಹೆದ್ದಾರಿಯಲಿ ಬಸ್ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿ, ಮೂವರು ಸವಾರರು ಸಾವನ್ನಪ್ಪಿದರು.



ಹೀಗೆ ಒಂದೂವರೆ ತಿಂಗಳಿಂದ ಹಲವು ಸಾರಿಗೆ ಬಸ್ ಅಪಘಾತಗಳು ಸಂಭವಿಸಿವೆ.

ಜೂನ್‌ನಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ತೆರಳುತ್ತಿದ್ದ ಬಸ್ ಸ್ಟೇರಿಂಗ್ ತುಂಡಾಗಿ ರಾಗಿಮುದ್ದನಹಳ್ಳಿ ಟೋಲ್ ಬಳಿ ಸರ್ವೀಸ್ ರಸ್ತೆಗೆ ನುಗ್ಗಿ, ಹಳ್ಳಕ್ಕೆ ಬಿದ್ದಿತ್ತು. ಆಗ 7 ಮಂದಿ ಸಣ್ಣ–ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾದರು. ಮೇ ತಿಂಗಳಲ್ಲಿ ಬೆಂಗಳೂರು–ಸೋಮವಾರಪೇಟೆ ಮಾರ್ಗದ ಬಸ್ ನೆಲಮಂಗಲದ ಅಡಕಮಾರನಹಳ್ಳಿ ಬಳಿ ಅಪಘಾತಕ್ಕೀಡಾಗಿತ್ತು. ರಾಷ್ಟ್ರೀಯ ಹೆದ್ದಾರಿ ಮೇಲ್ಸೇತುವೆ ಮೇಲೆ ಚಾಲಕನ ನಿಯಂತ್ರಣ ತಪ್ಪಿ, ನಾಲ್ಕು ಅಡಿ ರಸ್ತೆ ವಿಭಜಕ ಹತ್ತಿ ನಿಂತಿತ್ತು. ಘಟನೆಯಲ್ಲಿ ಚಾಲಕ, ನಿರ್ವಾಹಕ ಸೇರಿ ಆರು ಮಂದಿ ಗಾಯಗೊಂಡಿದ್ದರು. ಇಂತಹ ಹಲವು ಅಪಘಾತಗಳಲ್ಲಿ ಸಾವು–ನೋವು ಸಂಭವಿಸಿವೆ.

ಅಪಘಾತಕ್ಕೆ ಕಾರಣವೇನು?: ಬಹುತೇಕ ಪ್ರಕರಣಗಳಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ಅಪಘಾತ ಸಂಭವಿಸಿದ್ದಾಗಿ ಹೇಳಲಾಗುತ್ತದೆ. ಸಾರಿಗೆ ಸಂಸ್ಥೆ ಅಧಿಕಾರಿಗಳು ಆಂತರಿಕವಾಗಿ ವಿಚಾರಣೆಯಲ್ಲಿ ಘಟನೆಗೆ ಸಮರ್ಪಕ ಕಾರಣಗಳನ್ನು ಗುರುತಿಸಬಹುದು. ಆದರೆ ಆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವುದಿಲ್ಲ. ಹೀಗಾಗಿ ಅಪಘಾತಗಳಿಗೆ ಏನೆಲ್ಲಾ ಕಾರಣಗಳಿರಬಹುದೆಂಬ ಚರ್ಚೆ ನಡೆದಿದೆ. ಸಾರಿಗೆ ಸಂಸ್ಥೆಗೆ ಏಜೆನ್ಸಿ ಮೂಲಕ ಗುತ್ತಿಗೆ ಆಧಾರದಲ್ಲಿ ಚಾಲಕರನ್ನು ನಿಯೋಜಿಸಿಕೊಳ್ಳಲಾಗುತ್ತದೆ. ಆದರೆ ಅವರು ಸೂಕ್ತ ತರಬೇತಿ ಹೊಂದಿರದಿರುವುದೂ ಅಪಘಾತಕ್ಕೆ ಕಾರಣವಾಗಿದೆ. ಇನ್ನು ಬಸ್‌ಗಳು ಸುಸ್ಥಿತಿಯಲ್ಲಿರುವುದಿಲ್ಲ. ಶಕ್ತಿ ಯೋಜನೆ ಜಾರಿಯಾದಾಗಿನಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಸಿಬ್ಬಂದಿ ವೇತನಕ್ಕಷ್ಟೇ ಸರ್ಕಾರ ಹಣ ನೀಡುತ್ತಿದ್ದು, ಬಸ್‌ಗಳ ದುರಸ್ತಿ ಹಾಗೂ ನಿರ್ವಹಣೆಗೆ ಹಣ ಸಾಕಾಗುತ್ತಿಲ್ಲ. ಬಸ್ ಉತ್ತಮ ಸ್ಥಿತಿಯಲ್ಲಿ ಇಲ್ಲವಾದರೆ ತುರ್ತು ಸಂದರ್ಭದಲ್ಲಿ ನಿಯಂತ್ರಣ ಕಳೆದುಕೊಂಡು ಅಪಘಾತಗಳಾಗುತ್ತವೆ ಎಂಬ ದೂರುಗಳು ಕೇಳಿಬಂದಿವೆ.

ಅಧಿಕಾರಿಗಳ ನಿರಾಕರಣೆ: ಶಕ್ತಿ ಯೋಜನೆಯಿಂದ ಸಮಸ್ಯೆಯಾಗಿಲ್ಲ. ಸಾರಿಗೆ ಸಂಸ್ಥೆಗೆ ಸರ್ಕಾರದಿಂದ ನಿಗದಿತ ಸಮಯಕ್ಕೆ ಹಣ ಬರುತ್ತಿದೆ. ನಿರ್ವಹಣೆಯಲ್ಲೂ ಯಾವುದೇ ಸಮಸ್ಯೆಯಿಲ್ಲ. ಇನ್ನು ಗುತ್ತಿಗೆ ಆಧಾರದಲ್ಲಿ ನಿಯೋಜಿಸಿಕೊಂಡಿರುವ ಚಾಲಕರಿಂದಲೇ ಅಪಘಾತ ಸಂಭವಿಸುತ್ತಿವೆ ಎಂಬುದು ಸತ್ಯವಲ್ಲ. ಕೆ.ಆರ್.ಪೇಟೆ ಬಳಿ ಅಪಘಾತ ಸಂಭವಿಸಿದ್ದು, ಚಾಲಕನ ನಿರ್ಲಕ್ಷ್ಯತೆಯಿಂದ ಅವರು ಸಂಸ್ಥೆಯ ಖಾಯಂ ಉದ್ಯೋಗಿ ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

ವಾಹನಗಳು ಸುಸ್ಥಿತಿಯಲ್ಲಿವೆ: ಸರಣಿ ಬಸ್ ಅಪಘಾತಗಳ ಬಗ್ಗೆ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಪ್ರತಿಕ್ರಿಯಿಸಿ, ಮೈಸೂರು ಗ್ರಾಮಾಂತರ ವಿಭಾಗದ ವಾಹನಗಳು ಸುಸ್ಥಿಯಲ್ಲಿವೆ. ನಮ್ಮ ವಿಭಾಗಕ್ಕೆ ಈ ವರ್ಷದಲ್ಲಿ 85 ಹೊಸ ಬಸ್‌ಗಳು ಬಂದಿವೆ. ಅಲ್ಲದೆ 10 ವರ್ಷ ಹಳೆಯದಾದ ವಾಹನಗಳಿಗೆ ರೀಕಂಡಿಷನ್ ಮಾಡಿಕೊಳ್ಳಲಾಗುತ್ತದೆ. ಗುತ್ತಿಗೆ ಆಧಾರದಲ್ಲಿ ಪೂರೈಸುವ ಚಾಲಕರನ್ನು ಮಳವಳ್ಳಿ ತರಬೇತಿ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಿ, ಡಿವಿಷನಲ್ ಮೆಕ್ಯಾನಿಕ್ ಇಂಜಿನಿಯರ್ ಹಾಗೂ ಸೆಕ್ಯೂರಿಟಿ ಆಫೀಸರ್ ವರದಿ ನೀಡಿದ ಬಳಿಕವೇ ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ. ಅವರಿಂದ ಸಣ್ಣ ಅಪಘಾತ ನಡೆದರೂ ತಕ್ಷಣವೇ ಅವರ ಡ್ಯೂಟಿ ಸ್ಥಗಿತಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಪಟ್ಟಿ ಮಾಡಿರುವ ಚಾಲಕರಿಗೆ ವಿಶೇಷ ತರಬೇತಿ...

ಮೈಸೂರು: ಪದೇ ಪದೆ ಆಕ್ಸಿಡೆಂಟ್ ಮಾಡಿದ ಚಾಲಕರ ಪಟ್ಟಿ ಮಾಡಲಾಗಿದೆ. ಅವರಿಗೆ ಮಳವಳ್ಳಿಯ ತರಬೇತಿ ಕೇಂದ್ರದಲ್ಲಿ ವಿಶೇಷ ತರಬೇತಿ ನೀಡಲು ಯೋಜಿಸಲಾಗಿದೆ ಎಂದು ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.

ಮೈಸೂರು ಗ್ರಾಮಾಂತರ ವಿಭಾಗದಲ್ಲಿ ಚಾಲಕರು ಹಾಗೂ ಚಾಲಕ/ನಿರ್ವಾಹಕ ಸೇರಿ ಸುಮಾರು 2700 ಮಂದಿ ಇದ್ದು, ಇವರಲ್ಲಿ ಪದೇ ಪದೆ ಅಪಘಾತವೆಸಗಿರುವ 35 ಜನರನ್ನು ಪಟ್ಟಿ ಮಾಡಲಾಗಿದೆ. ಅವರಿಗೆ ವಿಶೇಷ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸಂಸ್ಥೆಯ ಖಾಯಂ ಚಾಲಕರು ಅಪಘಾತವೆಸಗಿದರೆ ವಿಚಾರಣೆ ನಡೆಸಿ, ಸೂಕ್ತ ಕ್ರಮ ವಹಿಸಲಾಗುತ್ತದೆ. ಅಪಘಾತದಲ್ಲಿ ಸಾವು ಸಂಭವಿಸಿದರೆ ಅಥವಾ ತೀವ್ರ ಸ್ವರೂಪದ್ದಾಗಿದ್ದರೆ ಕಾರಣರಾದ ಚಾಲಕನನ್ನು ಅಮಾನತು ಮಾಡಲಾಗುತ್ತದೆ. ತೀರಾ ಗಂಭೀರ ಪ್ರಕರಣವಾದರೆ ಇಂಕ್ರೀಮೆಂಟ್ ನೀಡುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಸೇವೆಯಿಂದಲೇ ವಜಾ ಮಾಡುವ ಸಾಧ್ಯತೆಯೂ ಇದೆ. ಹಾಗಾಗಿ ಸಾರ್ವಜನಿಕರ ನಂಬಿಕಾರ್ಹ ಸಾರಿಗೆ ವ್ಯವಸ್ಥೆಯನ್ನು ಸಮರ್ಪಕವಾಗಿ ಹಾಗೂ ಎಚ್ಚರಿಕೆಯಿಂದ ನಿಭಾಯಿಸಿಕೊಂಡು ಬರಲಾಗುತ್ತಿದೆ. ಬಸ್ ಚಾಲಕರ ನಿರ್ಲಕ್ಷ್ಯದಿಂದ ಮಾತ್ರವಲ್ಲ ಇತರೆ ವಾಹನ ಚಾಲಕರ ಪ್ರಮಾದದಿಂದಲೂ ಅಪಘಾತಗಳು ಸಂಭವಿಸುತ್ತವೆ ಎಂದು ಅವರು ಹೇಳಿದ್ದಾರೆ.

ರಾಗಿ ಬೆಳೆಗೆ ಬೆಂಬಲ ಬೆಲೆ ನಿಗದಿಪಡಿಸಲು ಡಿಸಿಗೆ ಮನವಿ

ಮೈಸೂರು, ಫೆ.14(ಎಂಕೆ)– ರಾಗಿ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು ಹಾಗೂ ಮಾರಾಟ ಅವಕಾಶ ಮಾಡಿಕೊಡಬೇಕು ಎಂದು ನಾಗವಾಲ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲೆಯಲ್ಲಿ ಹಲವಾರು ರೈತರು ರಾಗಿ ಬೆಳೆ ಬೆಳೆದಿದ್ದು, ಕಂದಾಯ ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ, ಬೆಳೆ ಸಮೀಕ್ಷೆ ಮಾಡದೆ ಆರ್‌ಟಿಸಿ 9ನೇ ಕಲಂನಲ್ಲಿ ನಮೂದಿಸಲು ಸಾಧ್ಯವಾಗಿಲ್ಲ. ಇದರಿಂದ ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರ ಹೆಸರನ್ನು ಕೃಷಿ ಇಲಾಖೆ ಅಧಿಕಾರಿಗಳು ನೋಂದಣಿ ಮಾಡಿಕೊಳ್ಳಲು ಸಾಧ್ಯವಾಗದೆ, ಬೆಳೆದ ಬೆಳೆಯೆಲ್ಲಾ ಹಾಳಾಗುತ್ತಿದೆ.



ಆದ್ದರಿಂದ ಕೂಡಲೇ ಬೆಳೆ ಸಮೀಕ್ಷೆ ಜೊತೆಗೆ ಸರ್ಕಾರ ರಾಗಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ಹಾಗೆಯೇ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಹರೀಶ್‌ರೆಡ್ಡಿ, ಮುಖಂಡ ಸಿ.ಗೋಪಾಲ್‌ಗೌಡ, ರೈತ ಮುಖಂಡ ಬೋರಪ್ಪ ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಮೈಸೂರು,ಫೆ.14– ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಫೆ.15 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಸರ್ಕಾರಿ ಅತಿಥಿ ಗೃಹ ಮೈಸೂರು ಇಲ್ಲಿ ಜಿಲ್ಲಾ ಕನ್ನಡ ಪರ ಸಂಘಟನೆ ಹಾಗೂ ಹೋರಾಟಗಾರರೊಂದಿಗೆ ಸಭೆ ನಡೆಸುವರು.

ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 1 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಂಡಿದ್ದಾರೆ ಮಧ್ಯಾಹ್ನ 3 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ, ಕ್ರಾಫರ್ಡ್ ಭವನದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಿದ್ದಾರೆ.


'ನೊಬೆಲ್ ಪಾರಿತೋಷಕ ಪುರಸ್ಕೃತ ತಂದೆ–ಮಕ್ಕಳ ಜೋಡಿಗಳು' ಕೃತಿ ಬಿಡುಗಡೆ

ರಾಜಕಾರಣಿ ಮಗ ರಾಜಕಾರಣಿ ಆಗಬಹುದು; ನೊಬೆಲ್ ಪುರಸ್ಕೃತರ ಮಗ ನೊಬೆಲ್ ಪುರಸ್ಕೃತರಾಗುವುದು ಅಪರೂಪದ ಸಾಧನೆ: ಪ್ರೊ.ಎನ್.ಕೆ.ಲೋಕನಾಥ್

ಮೈಸೂರು, ಫೆ.14(ಎಂಕೆ)– ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ರಚಿತ 'ನೊಬೆಲ್ ಪಾರಿತೋಷಕ ಪುರಸ್ಕೃತ ತಂದೆ–ಮಕ್ಕಳ ಜೋಡಿಗಳು' ಪುಸ್ತಕವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಐನ್‌ಸ್ಟೀನ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಪುಸ್ತಕ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವುದೇ ಕಷ್ಟ, ಅದರಲ್ಲೂ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಬರೆಯುವುದು ಇನ್ನೂ ಕಷ್ಟ ಈ ನಿಟ್ಟಿನಲ್ಲಿ 'ನೊಬೆಲ್ ಪಾರಿ ತೋಷಕ ಪುರಸ್ಕೃತ ತಂದೆ–ಮಕ್ಕಳ ಜೋಡಿಗಳು' ಪುಸ್ತಕ ಅತ್ಯಂತ ವಿಶೇಷವಾಗಿದೆ. ಈ ರೀತಿಯ ಕೃತಿಗಳು ಇನ್ನೂ ಹೆಚ್ಚೆಚ್ಚು ಪ್ರಕಟವಾಗಬೇಕು ಎಂದರು.



ಪ್ರೊ.ಪಿ.ವೆಂಕಟರಾಮಯ್ಯ ರಚಿತ 'ನೊಬೆಲ್ ಪಾರಿತೋಷಕ ಪುರಸ್ಕೃತ ತಂದೆ–ಮಕ್ಕಳ ಜೋಡಿಗಳು' ಪುಸ್ತಕವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಲೋಕಾರ್ಪಣೆಗೊಳಿಸಿದರು.

ನೊಬೆಲ್ ಅವಾರ್ಡ್ ಪಡೆದ ತಂದೆಯಂತೆ ಅವರ ಮಕ್ಕಳು ಸಹ ನೊಬೆಲ್ ಅವಾರ್ಡ್ ಪಡೆಯುವುದು ಸುಲಭವಲ್ಲ. ನೊಬೆಲ್ ಪಡೆಯುವುದೇ ಒಂದು ಮಹತ್ತರ ಸಾಧನೆಯಾಗಿದೆ. ರಾಜಕೀಯದಲ್ಲಿ ತಂದೆಯಂತೆ ಮಕ್ಕಳು ರಾಜಕೀಯಕ್ಕೆ ಬರೋದು ಸಹಜ. ಆದರೆ ತಂದೆಯಂತೆ ಅವರ ಮಕ್ಕಳು ನೊಬೆಲ್ ಪುರಸ್ಕೃತರಾಗುವುದು ವಿಶೇಷ ಹಾಗೂ ಅಪರೂಪದ ಸಾಧನೆಯಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಈ ಪುಸ್ತಕವನ್ನು ಓದುವುದರಿಂದ ನೊಬೆಲ್ ಪುರಸ್ಕೃತರ ಪರಿಚಯದೊಂದಿಗೆ ಪ್ರೇರಣೆ ದೊರೆಯಲಿದೆ. ನೊಬೆಲ್ ಪುರಸ್ಕೃತರಲ್ಲಿರುವ ಬದ್ಧತೆಯನ್ನು ಮೈಗೂಡಿಸಿಕೊಳ್ಳಲು ಸಹಕಾರಿಯಾಗಲಿದ್ದು, ಏನಾದರೂ ಸಾಧನೆ ಮಾಡುವ ಉತ್ಸಾಹ ತುಂಬಲಿದೆ. ಮನುಷ್ಯ ಯಾವಾಗಲೂ ಚಟುವಟಿಕೆ ಯಿಂದ ಇರಬೇಕು ಎಂಬುದಕ್ಕೆ ಪ್ರೊ.ಪಿ. ವೆಂಕಟರಾಮಯ್ಯ ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ. ನಿವೃತ್ತರಾಗಿ ಎಷ್ಟೋ ವರ್ಷ ಕಳೆದರೂ ಈಗಲೂ ಅವರು ಪುಸ್ತಕಗಳನ್ನು ಬರೆಯುತ್ತಿರುವುದನ್ನು ಗಮನಿಸಿದರೆ, ಪ್ರೇರಣೆಯಾಗುತ್ತದೆ. ನಾನು ವಿದ್ಯಾರ್ಥಿಯಾಗಿ ಮೊದಲ ಬಾರೀ ಗಂಗೋತ್ರಿಗೆ ಬಂದಾಗ ಅವರು, ಕುಲಸಚಿವರಾಗಿದ್ದು, ಭೌತಶಾಸ್ತ್ರ ಪಾಠ ಮಾಡಿದ್ದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಸ್. ಎನ್.ಪ್ರಸಾದ್ ಪುಸ್ತಕ ಕುರಿತು ಮಾತನಾಡಿದರು. ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್. ರಾಮೇಗೌಡ, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ ಉಪಸ್ಥಿತರಿದ್ದರು.

ನಾಳೆ 'ಲಾಯರ್ಸ್ ಡೈರಿ' ಬಿಡುಗಡೆ

ಮೈಸೂರು, ಫೆ14–ವಿಶ್ವರತ್ನ ಚಾರಿಟಬಲ್ ಟ್ರಸ್ಟ್ ಹಾಗೂ ಹೆಚ್. ಎನ್.ಲಾ ಅಸೋಸಿಯೇಟ್ಸ್ ವತಿಯಿಂದ ಫೆ16ರಂದು ಸಂಜೆ 5 ಗಂಟೆಗೆ ಜೆಎಲ್‌ಬಿ ರಸ್ತೆಯ ಲ್ಲಿರುವ ರೋಟರಿ ಶಾಲೆಯಲ್ಲಿ 2025ರ 'ಲಾಯರ್ಸ್ ಡೈರಿ' ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಡೈರಿ ಬಿಡುಗಡೆಗೊಳಿಸಲಿದ್ದಾರೆ. ಮೈಸೂರು ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಶುಸಂಗೋಪನ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕ ಮಾದು, ಡಿ.ರವಿಶಂಕರ್, ಕೆಹರೀಶ್‌ಗೌಡ, ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಸಂಸದ ಸುನೀಲ್ ಬೋಸ್ ಮತ್ತಿತರರು ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಾ. ಅಂಬೇಡ್ಕರ್ ಮಾದರಿಯಾಗಿ ಪರಿಗಣಿಸಿ ವ್ಯಕ್ತಿತ್ವ ರೂಪಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಕರ್ನಾಟಕ ಬೌದ್ಧ ಸಮಾಜದ ಅಧ್ಯಕ್ಷ ಡಾ. ಹ.ರಾ.ಮಹೇಶ್ ಸಲಹೆ

ಮೈಸೂರು, ಫೆ.14(ಎಂಟಿವೈ)– ವಿದ್ಯಾರ್ಥಿಗಳು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ರೋಲ್‌ಮಾಡೆಲ್ ಆಗಿ ಇಟ್ಟುಕೊಂಡು ದುಶ್ಚಟಗಳಿಂದ ಅಂತರ ಕಾಯ್ದುಕೊಳ್ಳಬೇಕು. ಜ್ಞಾನದ ಜೊತೆಗೆ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ಬೌದ್ಧ ಸಮಾಜದ ಅಧ್ಯಕ್ಷ ಡಾ.ಹ.ರಾ.ಮಹೇಶ್ ಸಲಹೆ ನೀಡಿದ್ದಾರೆ

ಮೈಸೂರಿನ ಬೋಗಾದಿಯಲ್ಲಿರುವ ಸಮಾಜಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಪದವಿಪೂರ್ವ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿ ಹಾಗೂ ನಿಲಯದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ ಅಂಬೇಡ್ಕರ್ ವಿಶ್ವಕ್ಕೆ ಜ್ಞಾನದ ಸಂಕೇತವಾಗಿದ್ದಾರೆ. ಅವರನ್ನು ಜಾತಿಯಿಂದ ನೋಡುವವರನ್ನು ಪರಿವರ್ತನೆ ಮಾಡಬೇಕಾಗಿದೆ. ಮಹಾರಾಷ್ಟ್ರದಲ್ಲಿ ಕುರುಬ ಸಮಾಜದ ಸಾಹು ಮಹಾರಾಜರು ದೇಶದಲ್ಲಿಯೇ ಪ್ರಪ್ರಥಮವಾಗಿ 1902ರಲ್ಲಿ ಮೀಸಲಾತಿಯನ್ನು ಜಾರಿಗೆ ತಂದರು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ್ಯದಲ್ಲಿ ಮೀಸಲಾತಿಯನ್ನು ತಂದರು. ಅಂಬೇಡ್ಕರ್ ಸಂವಿಧಾನ ಇಲ್ಲದಿದ್ದರೆ ನಾವೆಲ್ಲಾ ಪ್ರಾಣಿಗಳಂತೆ ಬದುಕಬೇಕಾಗಿತ್ತು. ಆದ್ದರಿಂದ, ಸಂವಿಧಾನವನ್ನು ಬಳಸಿಕೊಳ್ಳುವುದರ ಜೊತೆಗೆ ಉಳಿಸಿಕೊಳ್ಳಬೇಕಾಗಿದೆ. ನೀವೆಲ್ಲಾ ಕನಸನ್ನು ಕಟ್ಟಿಕೊಂಡು ಹಾಸ್ಟೆಲ್‌ಗೆ ಓದಲು ಬಂದಿದ್ದೀರಿ. ತಂದೆ–ತಾಯಿ ನಿಮ್ಮ ಮೇಲೆ ಕನಸನ್ನು ಕಟ್ಟಿಕೊಂಡು ಕಾಯುತ್ತಿದ್ದಾರೆ. ಮೌಢ್ಯ–ಮೂಢ ನಂಬಿಕೆಗಳಿಂದ ದೂರವಿದ್ದು, ಚೆನ್ನಾಗಿ ಓದಿ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.



ಮೈಸೂರಿನ ಬೋಗಾದಿಯಲ್ಲಿರುವ ಸಮಾಜಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಪದವಿಪೂರ್ವ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ತಿಬ್ಬಯ್ಯ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ದಾಸರಾಗಬಾರದು. ಮೊಬೈಲ್ ಬಳಕೆ ತ್ಯಜಿಸಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ಸ್ವಾವಲಂಬಿಗಳಾಗಿ ಬದುಕಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎ.ಎನ್. ಜನಾರ್ಧನ್ ಮಾತನಾಡಿ, ಸರ್ಕಾರ ವಿದ್ಯಾರ್ಥಿಗಳಿಗೆ ಎಲ್ಲಾ ಸವಲತ್ತುಗಳನ್ನು ನೀಡುತ್ತಿದೆ. ಅದಕ್ಕೆ ಪ್ರತಿಯಾಗಿ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಚೆನ್ನಾಗಿ ಓದುವ ಮೂಲಕ ಪೋಷಕರು ಪಟ್ಟ ಕಷ್ಟಗಳನ್ನು ನೆನೆದುಕೊಂಡು ಸಾಧನೆ ಮಾಡಬೇಕು. ಉನ್ನತ ಹುದ್ದೆ ಪಡೆದು ಸಮಾಜಕ್ಕೆ ಕೊಡುಗೆ ನೀಡುವ ಗುರಿ ನಿಮ್ಮದಾಗಬೇಕು. 5 ವರ್ಷ ಕಷ್ಟಪಟ್ಟು ಓದಿದರೆ 50 ವರ್ಷ ಸುಖವಾಗಿರಬಹುದು ಎಂದರು.

ನಿಲಯಪಾಲಕ ಚಿಕ್ಕೀರಯ್ಯ ಮಾತನಾಡಿ, ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಲಾ 5 ಸಾವಿರ ವಿತರಿಸುತ್ತಿದ್ದೇನೆ. ವಿದ್ಯಾರ್ಥಿಗಳಾದ ವಿಕಾಶ್, ಗಂಗಾಧರ್, ಶ್ರೇಯಸ್, ಮಾದೇಶ್ ಸೇರಿದಂತೆ 8 ವಿದ್ಯಾರ್ಥಿಗಳಿಗೆ ನಗದು 5 ಸಾವಿರ ವಿತರಿಸಿದರು. ವಿವಿಧ ಆಟಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಿಬ್ಬಂದಿಗೆ ಸಮವಸ್ತ್ರ ವಿತರಿಸಿದರು.

ಸಮಾರಂಭದಲ್ಲಿ ಸಿಬ್ಬಂದಿಗಳಾದ ರಾಮಚಂದ್ರ, ಮಾರುತಿ, ಪ್ರದೀಪ್, ಹರೀಶ್, ಸಂತೋಷ್, ಜಯಕುಮಾರ್, ನಿಲಯಪಾಲಕರು ಉಪಸ್ಥಿತರಿದ್ದರು.

ದೇಶ - ವಿದೇಶ

ಮುಂಬೈ ದಾಳಿ ಸಂಚುಕೋರ ರಾಣಾ ಹಸ್ತಾಂತರಕ್ಕೆ ಟ್ರಂಪ್ ಅನುಮೋದನೆ

ವಾಷಿಂಗ್ಟನ್, ಫೆ14– 26/11ರ ಮುಂಬೈ ಭಯೋತ್ಪಾದನಾ ದಾಳಿಯ ಸಂಚುಕೋರ ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮೋದನೆ ನೀಡಿದ್ದಾರೆ.



ಗುರುವಾರ ಶ್ವೇತಭವನದಲ್ಲಿ ದ್ವಿಪಕ್ಷೀಯ ಸಭೆ ನಡೆದ ಬಳಿಕ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯ ವೇಳೆ ಈ ಮಹತ್ವದ ಘೋಷಣೆಯನ್ನು ಟ್ರಂಪ್ ಮಾಡಿದ್ದಾರೆ ಎನ್ನಲಾಗಿದೆ.

2008ರಲ್ಲಿ ನಡೆದ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಆರೋಪ ಹೊತ್ತಿದ್ದ ಪಾಕಿಸ್ತಾನಿ ಮೂಲದ ಕೆನಡಾದ ಉದ್ಯಮಿ ತಹವ್ವುರ್ ರಾಣಾ ದೋಷಿ ಎಂದು ಘೋಷಿಸಲಾಗಿದೆ. ಅದರಂತೆ ಕಳೆದ ತಿಂಗಳು ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಯುಎಸ್ ಸುಪ್ರೀಂಕೋರ್ಟ್ ಅನುಮೋದನೆ ನೀಡಿತ್ತು ಇದೀಗ ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಪ್ರವಾಸದ ಬೆನ್ನಲ್ಲೇ ದ್ವಿಪಕ್ಷೀಯ ಸಭೆಯ ಬೆನ್ನಲ್ಲೇ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ನೀಡಿದ ಟ್ರಂಪ್ 2008ರಲ್ಲಿ ನಡೆದ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ನನ್ನ ಆಡಳಿತ ಅನುಮೋದನೆ ನೀಡಿದೆ ಎಂದು ಹೇಳಲು ಸಂತೋಷವಾಗುತ್ತಿದೆ ಎಂದು ಹೇಳಿದ್ದಾರೆ.

ಕುಂಭಮೇಳದ ಬಗ್ಗೆ ತಪ್ಪು ಮಾಹಿತಿ: 53 ಸಾಮಾಜಿಕ ಮಾಧ್ಯಮಗಳ ವಿರುದ್ಧ ಕ್ರಮ

ನವದೆಹಲಿ, ಫೆ.14– ಮಹಾ ಕುಂಭ ಮೇಳದ ಬಗ್ಗೆ ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ ಕಳೆದ ಒಂದು ತಿಂಗಳಲ್ಲಿ ಉತ್ತರ ಪ್ರದೇಶ ಪೊಲೀಸರು 53 ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದಾರೆ. ನಕಲಿ ಸುದ್ದಿಗಳನ್ನು ನಿಗ್ರಹಿಸುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಹಳೆಯ ವೀಡಿಯೊಗಳು ಸೇರಿದಂತೆ ಅನೇಕ ದಾರಿ ತಪ್ಪಿಸುವ ಪೋಸ್ಟ್‌ಗಳನ್ನು ಅಧಿಕಾರಿಗಳು ಗುರುತಿಸಿದ್ದಾರೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.



ಫೆ.13 ರಂದು, ಸೈಬರ್ ಮೇಲ್ವಿಚಾರಣೆಯಲ್ಲಿ ಮಹಾ ಕುಂಭಮೇಳದ ಬಗ್ಗೆ ತಪ್ಪಾಗಿ ಲಿಂಕ್ ಮಾಡಲಾದ ಎರಡು ದಾರಿತಪ್ಪಿಸುವ ವಿಡಿಯೋಗಳು ಪತ್ತೆಯಾಗಿವೆ. ಈಜಿಪ್ಟ್‌ನಲ್ಲಿ ನಡೆದ ಬೆಂಕಿ ಅವಘಡದ ವಿಡಿಯೋವನ್ನು ಮಹಾ ಕುಂಭ ಬಸ್ ನಿಲ್ದಾಣದಲ್ಲಿ ಬೆಂಕಿ ಎಂದು ತಪ್ಪಾಗಿ ಹಂಚಿಕೊಳ್ಳಲಾಗಿದ್ದು, 40–50 ವಾಹನಗಳು ನಾಶವಾಗಿವೆ ಎಂದು ಹೇಳಲಾಗಿದೆ. ತನಿಖೆಯ ನಂತರ ಈ ದೃಶ್ಯಗಳು ವಾಸ್ತವವಾಗಿ ಕೈರೋದಲ್ಲಿ ಜುಲೈ 14, 2020 ರಂದು ಸಂಭವಿಸಿದ ಅಗ್ನಿ ಅವಘಡದ ದೃಶ್ಯಗಳಾಗಿದ್ದವು ಎಂದು ತಿಳಿಸಿದ್ದಾರೆ.

ದೇವಸ್ಥಾನ ಉತ್ಸವದಲ್ಲಿ ರೊಚ್ಚಿಗೆದ್ದ ಆನೆಗಳು; ಮೂವರು ಸಾವು, 12 ಜನರ ಸ್ಥಿತಿ ಗಂಭೀರ

ಕೋಝಿಕ್ಕೋಡ್, ಫೆ.14– ಕೇರಳ ದೇವಸ್ಥಾನದ ಉತ್ಸವದಲ್ಲಿ ಎರಡು ಆನೆಗಳು ರೊಚ್ಚಿಗೆದ್ದು ದಾಂಧಲೆ ನಡೆಸಿದ್ದರಿಂದ ಮೂವರು ಮೃತಪಟ್ಟಿದ್ದು 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕೊಝಿಕೋಡ್‌ನ ಕೊಯಿಲಾಂಡಿಯ ಕುರುವಂಗಾಡ್‌ನಲ್ಲಿರುವ ಮಣಕುಲಂಗರ ದೇವಸ್ಥಾನದಲ್ಲಿ ಉತ್ಸವದ ಸಂದರ್ಭದಲ್ಲಿ ಈ ಘಟನೆ ಸಂಭವಿಸಿದೆ. ಮೃತರನ್ನು ಕುರುವಂಗಾಡ್ ಮೂಲದ ಲೀಲಾ, ಅಮ್ಮುಕುಟ್ಟಿ ಮತ್ತು ರಾಜನ್ ಎಂದು ಗುರುತಿಸಲಾಗಿದ್ದು ಗಾಯಾಳುಗಳನ್ನು ಕೊಯಿಲಾಂಡಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.



ಈ ಪೈಕಿ 12 ಜನರ ಸ್ಥಿತಿ ಗಂಭೀರವಾಗಿದೆ. ಅವರನ್ನು ಕೋಝಿಕ್ಕೋಡ್ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಗಿದೆ. ಮೃತದೇಹಗಳನ್ನು ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಗಿದೆ.

ಈ ಘಟನೆ ನಿನ್ನೆ ಸಂಜೆ 6 ಗಂಟೆ ಸುಮಾರಿಗೆ ದೊಡ್ಡ ಶಬ್ದದೊಂದಿಗೆ ಪಟಾಕಿಗಳನ್ನು ಸಿಡಿಸಿದಾಗ ಈ ಘಟನೆ ಸಂಭವಿಸಿದೆ. ಪಟಾಕಿ ಪ್ರದರ್ಶನದ ಸದ್ದಿಗೆ ಹತ್ತಿರದ ಕಟ್ಟಡಗಳ ಛಾವಣಿಗಳು ಸಹ ಅಲುಗಾಡಿದವು. ಅಷ್ಟರಲ್ಲಿ ಒಂದು ಆನೆ ಹತ್ತಿರದಲ್ಲಿ ನಿಂತಿದ್ದ ಮತ್ತೊಂದು ಆನೆಯ ಮೇಲೆ ದಾಳಿ ಮಾಡಿತು. ನಂತರ ಎರಡು ಆನೆಗಳು ಮುಖಾಮುಖಿಯಾದವು. ಈ ವೇಳೆ ಭಯಭೀತರಾದ ಜನರು ಓಡಲು ಪ್ರಾರಂಭಿಸಿದಾಗ ಕಾಲ್ತುಳಿತವಾಗಿದೆ. ಆನೆ ದಾಳಿಯಿಂದ ದೇವಸ್ವಂ ಕಚೇರಿಗೆ ಹಾನಿಯಾಗಿದೆ.

ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಚಾಲನೆ...



ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಮೊಗರಗಲ್ಲಿಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು. ಶಿಶು ಅಭಿವೃದ್ಧಿ ಅಧಿಕಾರಿ ಪೂಣಚ್ಚ, ಪುರಸಭೆ ಅಧ್ಯಕ್ಷೆ ಎಂ.ಕೆ.ದೇಚಮ್ಮ, ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಮುಂದುವರೆದ ಗ್ರಾಮ ಆಡಳಿತಾಧಿಕಾರಿಗಳ ಪ್ರತಿಭಟನೆ



ಗ್ರಾಮ ಆಡಳಿತಾಧಿಕಾರಿಗಳು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಮಡಿಕೇರಿ: ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕೊಡಗು ಜಿಲ್ಲಾ ಗ್ರಾಮ ಆಡಳಿತಾಧಿಕಾರಿಗಳ ಸಂಘದಿಂದ 2ನೇ ಹಂತದ ಪ್ರತಿಭಟನೆ ಮುಂದುವರೆದಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಗ್ರಾಮ ಆಡಳಿತಾಧಿಕಾರಿಗಳು ಕೆಲಸ ಸ್ಥಗಿತಗೊಳಿಸಿ, ಕಪ್ಪುಪಟ್ಟಿ ಧರಿಸಿ ಶಾಂತಿಯುತ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಕೊಡಗು ಜಿಲ್ಲಾ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷೆ ಅಕ್ಷತಾ ಬಿ.ಶೆಟ್ಟಿ, ನಾಲ್ಕನೇ ದಿನಕ್ಕೆ ಪ್ರತಿಭಟನೆ ಮುಂದುವರೆದಿದೆ. ಮೊಬೈಲ್‌ನಲ್ಲಿ ಸಕಾಲ ಸೇವೆ ಸೇರಿದಂತೆ 20ಕ್ಕೂ ಹೆಚ್ಚು ಆ್ಯಪ್‌ಗಳನ್ನು ಡಿಲೀಟ್ ಮಾಡುವ ಮೂಲಕ ತಿಂಗಳ ಕಾಲ ರಜೆ ಹಾಕಿ ಪ್ರತಿಭಟನೆಯಲ್ಲಿ ಎಲ್ಲರೂ ಪಾಲ್ಗೊಂಡಿದ್ದು, ಬೇಡಿಕೆಗಳು ಈಡೇರುವ ತನಕ ಪ್ರತಿಭಟನೆ ಮುಂದುವರೆಸುವುದಾಗಿ ಎಚ್ಚರಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶಾಸಕದ್ವಯರಿಗೆ ಮನವಿ ಸಲ್ಲಿಸಲಾಗಿದ್ದು, ಶಾಸಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು. ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಇಂದು ಸೇವಾಲಾಲ್ ಜಯಂತಿ ಆಚರಣೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂತ ಸೇವಾಲಾಲ್ ಜಯಂತಿಯನ್ನು ಫೆ.15ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಆಚರಿಸಲಾಗುವುದು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್. ಭೋಜೇಗೌಡ, ಡಾ.ಧನಂಜಯ ಸರ್ಜಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಹೆಬ್ಬಾಲೆ ಪಿಯು ಕಾಲೇಜಿನ ಉಪನ್ಯಾಸಕ ಮೆ.ನ. ವೆಂಕಟನಾಯಕ್ ಇತರರು ಪಾಲ್ಗೊಳ್ಳಲಿದ್ದಾರೆ.

ಸರ್ಕಾರಿ ಸೌಲಭ್ಯ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಸೂಚನೆ

ಮಡಿಕೇರಿ, ಫೆ.14–ಕೊಡಗು ಜಿಲ್ಲೆಯಲ್ಲಿ ಅಲೆಮಾರಿ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ನಿಗದಿಗಿಂತ ಕಡಿಮೆ ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಲೆಮಾರಿ ಅಭಿವೃದ್ಧಿ ನಿಗಮದಿಂದ ನೀಡುವ ಸ್ವಯಂ ಉದ್ಯೋಗ, ಉದ್ಯಮಶೀಲತಾ, ಸ್ವಾವಲಂಬಿ ಸಾರಥಿ ಹಾಗೂ ಮೈಕ್ರೋ ಕ್ರೆಡಿಟ್ ಯೋಜನೆಗಳಡಿ ಕಡಿಮೆ ಅರ್ಜಿಗಳು ಸಲ್ಲಿಕೆಯಾಗಿವೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ಪ್ರಗತಿ ಸಾಧಿಸಬೇಕು. 2023–24ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ 19 ಅರ್ಜಿ, ಉದ್ಯಮಶೀಲತಾ ಯೋಜನೆಯಡಿ 6, ಸ್ವಾವಲಂಬಿ ಸಾರಥಿ ಯೋಜನೆಯಡಿ 7 ಹಾಗೂ ಮೈಕ್ರೋ ಕ್ರೆಡಿಟ್ ಯೋಜನೆಯಡಿ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿಲ್ಲ. ಯಾಕೆ? ಯಾರು ಸಹ ಸಾಲ ಹಾಗೂ ಸಹಾಯಧನ ಪಡೆಯಲು ಮುಂದೆ ಬರುತ್ತಿಲ್ಲವೇ ಎಂದು ಪ್ರಶ್ನಿಸಿದರು.

2024–25ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ 51 ಅರ್ಜಿ, ಉದ್ಯಮಶೀಲತಾ ಯೋಜನೆಯಡಿ 12, ಸ್ವಾವಲಂಬಿ ಸಾರಥಿ ಯೋಜನೆಯಡಿ 19 ಹಾಗೂ ಮೈಕ್ರೋ ಕ್ರೆಡಿಟ್ ಯೋಜನೆಯಡಿ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿಲ್ಲ ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜಿಲ್ಲಾ ಹಾಗೂ ಆಯಾ ತಾಲೂಕು ಮಟ್ಟದಲ್ಲೇ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಈಗಾಗಲೇ ಸರ್ಕಾರದಿಂದ ವಿವಿಧ ಯೋಜನೆಗಳಿಗೆ ಕೊಡಗು ಜಿಲ್ಲೆಗೆ 2.60 ಕೋಟಿ ರೂ. ಬಿಡುಗಡೆಯಾಗಿದ್ದು, ಪ್ರಗತಿ ಸಾಧಿಸಲು ತೊಡಕುಗಳಿದ್ದಲ್ಲಿ ಅನುದಾನ ವಾಪಸ್ ನೀಡಿದಲ್ಲಿ ಬೇರೊಂದು ಜಿಲ್ಲೆಗೆ ಬಳಕೆ ಮಾಡಬಹುದು. ಬೇರೆ ಜಿಲ್ಲೆಗಳಲ್ಲಿ ಸಾಲ ಸೌಲಭ್ಯ ಹಾಗೂ ಸಹಾಯಧನ ಪಡೆಯಲು ಮುಂದೆ ಬರುತ್ತಾರೆ. ಆದರೆ, ಕೊಡಗಿನಲ್ಲಿ ಕೊಟ್ಟ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ಈ ರೀತಿಯಾದರೆ ಸೂಕ್ಷ್ಮ ಅಲೆಮಾರಿ ಜನಾಂಗದವರ ಬದುಕು ಸುಧಾರಣೆ ಹೇಗೆ? ಎಂದು ಅವಲೋಕನ ಮಾಡಬೇಕಿದೆ ಎಂದರು.

ಬಸವನಹಳ್ಳಿಯ ಮೇದಾರ ಕಾಲೋನಿ, ದಿಡ್ಡಳ್ಳಿಯ ಪುನರ್ ವಸತಿ ಕೇಂದ್ರ, ದೊಡ್ಡಬೆಟ್ಟಗೇರಿಯ ಸೋಲಿಗ ಕಾಲೋನಿ, ತಿತಿಮತಿ ವ್ಯಾಪ್ತಿಯ ಬೊಂಬುಕಾಡು, ಮಾಲ್ದಾರೆ ವ್ಯಾಪ್ತಿಯ ಆಸ್ತನಹಾಡಿ, ಮದೆನಾಡು ಗ್ರಾಪಂ ವ್ಯಾಪ್ತಿಯ ಜೋಡುಪಾಲ ಹೀಗೆ ವಿವಿಧ ಪ್ರದೇಶಗಳಿಗೆ ನಾನು ಭೇಟಿ ನೀಡಿದ ಸಂದರ್ಭದಲ್ಲಿ ನಿವೇಶನ, ಮನೆ ಹಾಗೂ ಮೂಲಸೌಲಭ್ಯಕ್ಕೆ ಹೆಚ್ಚಿನ ಜನರು ಮನವಿ ಮಾಡಿದ್ದಾರೆ. ನಿವೇಶನ ಹಾಗೂ ವಸತಿ ಸೇರಿದಂತೆ ಅಗತ್ಯ ಮೂಲಸೌಲಭ್ಯ ಕಲ್ಪಿಸಬೇಕು. ಜೊತೆಗೆ ಸರ್ಕಾರದ ಸ್ವಯಂ ಉದ್ಯೋಗ, ಉದ್ಯಮಶೀಲತೆ, ಸ್ವಾವಲಂಬಿ ಸಾರಥಿ, ಮೈಕ್ರೋ ಕ್ರೆಡಿಟ್ ಮತ್ತಿತರ ಯೋಜನೆಗಳನ್ನು ತಲುಪಿಸಿದಲ್ಲಿ ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗಲಿದೆ. ಆದ್ದರಿಂದ ತಳಮಟ್ಟದ ಅಧಿಕಾರಿಗಳು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ಅಲೆಮಾರಿ ನಿಗಮ ಜಾಗೃತಿ ಸಮಿತಿ ಸದಸ್ಯರು ಸಹ ಈ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿವಹಿಸಬೇಕು ಎಂದು ಜಿ.ಪಲ್ಲವಿ ಹೇಳಿದರು.

ಸಭೆಯಲ್ಲಿ ಅಲೆಮಾರಿ ಅಭಿವೃದ್ಧಿ ನಿಗಮದ ವಿಶೇಷ ಕರ್ತವ್ಯಾಧಿಕಾರಿ ಆನಂದ್ ಕುಮಾರ್, ಐಟಿಡಿಪಿ ಇಲಾಖಾ ಅಧಿಕಾರಿ ಎಸ್.ಹೊನ್ನೇಗೌಡ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಟರಾಜ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪವಿಭಾಗಾಧಿಕಾರಿ ವಿನಾಯಕ ನರ್ವಡೆ, ತಹಸೀಲ್ದಾರ್‌ಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಗೂ ಮುನ್ನ ಫಲಾನುಭವಿಗಳಿಗೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಚೆಕ್ ವಿತರಿಸಿದರು.

> ಅಲೆಮಾರಿ ಜನಾಂಗದವರಿಗೆ ನೀಡಲಾಗುವ ಸೌಲಭ್ಯಗಳನ್ನು ಫೆಬ್ರವರಿ ಅಂತ್ಯದೊಳಗೆ ಪ್ರಗತಿ ಸಾಧಿಸಲಾಗುವುದು. ಅಲೆಮಾರಿ ಸಮುದಾಯಗಳ ನಿವೇಶನ ರಹಿತರಿಗೆ ನಿವೇಶನ, ವಸತಿ ಕಲ್ಪಿಸಲು ಆದ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.
> –ವೆಂಕಟ್ ರಾಜಾ, ಜಿಲ್ಲಾಧಿಕಾರಿ

> ಕೊಡಗು ಜಿಲ್ಲೆಯಲ್ಲಿ ಅಲೆಮಾರಿ ಸಮುದಾಯದ ನಿವೇಶನ ರಹಿತ 5916 ಕುಟುಂಬಗಳಿದ್ದು, ಮಡಿಕೇರಿ ತಾಲೂಕಿನಲ್ಲಿ 279, ಕುಶಾಲನಗರ 508, ಸೋಮವಾರಪೇಟೆ 147, ವಿರಾಜಪೇಟೆ 1261 ಮತ್ತು ಪೊನ್ನಂಪೇಟೆ ತಾಲೂಕಿನಲ್ಲಿ 3721 ಕುಟುಂಬಗಳಿಗೆ ನಿವೇಶನ ಒದಗಿಸಬೇಕಿದೆ.
> –ಶೇಖರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ

ಕಿರುಗೂರು ಗ್ರಾಮದಲ್ಲಿ ನಡುಬೇದ ಆಚರಣೆ



ಕಿರುಗೂರು ಗ್ರಾಮದ ಚೆಪ್ಪುಡೀರ ಸುಜು ಕರುಂಬಯ್ಯ ಅವರ ಭತ್ತದ ಗದೆಯಲ್ಲಿ 'ನಡುಬೇದ' ಆಚರಿಸಲಾಯಿತು.

ಗೋಣಿಕೊಪ್ಪ: ಯುನೈಟೆಡ್ ಕೊಡವ ಆರ್ಗನೈಜೇಷನ್ ಸಂಘಟನೆ ವತಿಯಿಂದ ಕಿರುಗೂರು ಗ್ರಾಮದ ಚೆಪ್ಪುಡೀರ ಸುಜು ಕರುಂಬಯ್ಯ ಅವರ ಭತ್ತದ ಗದೆಯಲ್ಲಿ 6ನೇ ವರ್ಷದ ಬೇದ ಚಂಗ್ರಾಂದಿ ಪ್ರಯುಕ್ತ ಸಾಂಪ್ರದಾಯಿಕವಾಗಿ 'ನಡುಬೇದ' ಆಚರಿಸಲಾಯಿತು.

ಕೊಡವರ ಸಾಂಪ್ರದಾಯಿಕವಾದ ಬೇದ ಚಂಗ್ರಾಂದಿ ಆಚರಣೆಯಲ್ಲಿ 'ನಡುಬೇದ'ವನ್ನು ಭೂಮಿಗೆ ಮುಟ್ಟಾದ ದಿನವೆಂಬ ನಂಬಿಕೆಯೊಂದಿಗೆ ಆಚರಿಸಲಾಯಿತು. ಯುಕೊ ಸಂಘಟನೆ ನೇತೃತ್ವದಲ್ಲಿ ಕೊಡವ ಮಹಿಳೆಯರು ಭತ್ತದ ಗದ್ದೆಗೆ ತೆರಳಿ ಸಂಪ್ರದಾಯದಂತೆ ಭೂಮಿಗೆ 'ತೋರ ತೊಪ್ಪ್' ಎಂದು ಕರೆಯಲ್ಪಡುವ ವಿಶೇಷ ಎಲೆಯಲ್ಲಿ ಅಕ್ಕಿಯನ್ನು ಇಟ್ಟು ಕೈ ಎಣ್ಣೆ ಸುರಿದು, ಮಿಳ್ಳೆಯಲ್ಲಿ ನೀರು, ಮರದ ಬಾಚಣಿಕೆಯನ್ನಿಟ್ಟು ಭೂಮಿತಾಯಿ, ನೀಡ ಉಟ್ಟಿ ಮಂಡೆ ಕಾಂಜದ್ ತಂಪಾಡ್, ಕುಂಬ್ಯಾತ್ ಮಳೆಯಾಯಿತ್, ಕುಂದ್‌ಲೂ ಕೂಳಾಡ್ ಎಂದು ಸೂರ್ಯ ದೇವನಿಗೆ ಅಕ್ಕಿ ಪ್ರೋಕ್ಷಣೆ ಮಾಡಿದರು. ಇದೇ ವೇಳೆ ಭೂಮಿ ತಾಯಿಗೆ ಪಾದ ಮುಟ್ಟಿ ನಮಸ್ಕರಿಸಿ ಪ್ರಾರ್ಥಿಸಲಾಯಿತು.

ಯುನೈಟೆಡ್ ಕೊಡವ ಆರ್ಗನೈಜೇಷನ್ ಸಂಘಟನೆ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಕಿರುಗೂರು ಗ್ರಾಪಂ ಅಧ್ಯಕ್ಷ ಚೆಪ್ಪುಡೀರ ರಾಕೇಶ್ ದೇವಯ್ಯ, ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಚೆರಿಯಪಂಡ ರಾಜಾ ನಂಜಪ್ಪ, ವಿರಾಜಪೇಟೆ ಕೊಡವ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್, ಪೊನ್ನಂಪೇಟೆ ಕೊಡವ ಸಮಾಜದ ನಿರ್ದೇಶಕ ಆಲೆಮಾಡ ಸುಧೀರ್, ಹಿರಿಯರಾದ ಕಳ್ಳೇಂಗಡ ಶಂಬು, ಪೊನ್ನಂಪೇಟೆ ಇಗ್ಗುತ್ತಪ್ಪ ಕೊಡವ ಕೂಟದ ದೇಯಂಡ ಗಣೇಶ್, ವಿರಾಜಪೇಟೆ ಕೊಡವ ಪೊಮ್ಮಕ್ಕಡ ಕೂಟದ ಸದಸ್ಯರು, ಟಿ.ಶೆಟ್ಟಿಗೇರಿ, ಮೂರ್ನಾಡು ಪೊಮ್ಮಕ್ಕಡ ಕೂಟದ ಸದಸ್ಯರು ಸೇರಿದಂತೆ ನೂರಾರು ಕೊಡವರು ಇದ್ದರು.

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಹೇಳಿಕೆ ಖಂಡನೀಯ



ಮಹೇಶ್ ಜೈನಿ

ಮಡಿಕೇರಿ, ಫೆ.14–ಮೈಸೂರಿನ ಉದಯಗಿರಿಯಲ್ಲಿ ಉದ್ದೇಶ ಪೂರ್ವಕವಾಗಿ ಕೆಲ ಕಿಡಿಗೇಡಿಗಳು ನಡೆಸಿದ ಗಲಭೆಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಮಾಡಿದ್ದಾರೆ ಎಂದು ರಾಜ್ಯ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ನೀಡಿರುವ ಹೇಳಿಕೆ ಖಂಡನೀಯ ಎಂದು ಕೊಡಗು ಜಿಲ್ಲಾ ಬಿಜೆಪಿ ಪಧಾನ ಕಾರ್ಯದರ್ಶಿ ಮಹೇಶ್ ಜೈನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಳ್ಳು ಆರೋಪಗಳನ್ನು ಮಾಡಿ ಸಮಾಜದ ಶಾಂತಿ ಕದಡುತ್ತಿರುವ ಎಂ.ಲಕ್ಷ್ಮಣ್ ಅವರನ್ನು ತಕ್ಷಣ ಬಂಧಿಸಿ, ತನಿಖೆಗೆ ಒಳಪಡಿಸಬೇಕು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಹಾಗೂ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ್ ಕೇಜ್ರಿವಾಲ್ ಅವರ ಕುರಿತು ಕಾರ್ಟೂನ್ ರೂಪದಲ್ಲಿ ವ್ಯಕ್ತಿಯೊಬ್ಬರು ಪೋಸ್ಟ್ ಮಾಡಿರುವುದನ್ನು ವಿರೋಧಿಸುವ ನೆಪದಲ್ಲಿ ಪೂರ್ವನಿಯೋಜಿತರಾಗಿ ಕರ್ತವ್ಯ ನಿರತ ಪೊಲೀಸರು ಮತ್ತು ಸಾರ್ವಜನಿಕರ ಮೇಲೆ ದಾಳಿ ಮಾಡಿದ್ದಾರೆ. ಈ ಗಲಭೆಕೋರರನ್ನು ರಕ್ಷಿಸುವ ಸಲುವಾಗಿ ಲಕ್ಷ್ಮಣ್ ಆರ್‌ಎಸ್‌ಎಸ್ ಮತ್ತು ಬಿಜೆಪಿ ಮೇಲೆ ಗೂಬೆ ಕೂರಿಸುತ್ತಿದ್ದು, ಇದು ಸಮಾಜದ ಶಾಂತಿ ಕದಡುವ ಪ್ರಯತ್ನವಾಗಿದೆ ಎಂದು ಆರೋಪಿಸಿದ್ದಾರೆ.

ಈ ಸುಳ್ಳು ಹೇಳಿಕೆಯ ಹಿಂದೆ ಷಡ್ಯಂತ್ರವಿದ್ದು, ಲಕ್ಷ್ಮಣ್ ಅವರನ್ನು ಬಂಧಿಸಿ ತನಿಖೆಗೆ ಒಳಪಡಿಸಿದರೆ ಸತ್ಯಾಂಶ ಹೊರ ಬೀಳಲಿದೆ. ರಾಜಕೀಯ ಲಾಭಕ್ಕಾಗಿ ಬಾಯಿ ಚಪಲ ತೀರಿಸಿಕೊಳ್ಳಲು ನಿರಾಧಾರ ಹೇಳಿಕೆ ನೀಡಿರುವ ಲಕ್ಷ್ಮಣ್ ಸಂಘ ಪರಿವಾರದ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ಫೆ.21, ಮಹದೇಶ್ವರಬೆಟ್ಟದಲ್ಲಿ ಜಾನಪದ ಜಾತ್ರೆ

● ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ ● ಡಿಸಿ ಕಚೇರಿಯಲ್ಲಿ ಪೂರ್ವಭಾವಿ ಸಭೆ

ಚಾಮರಾಜನಗರ, ಫೆ.14–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶೇಷ ಘಟಕ ಉಪಯೋಜನೆಯಡಿ ಫೆ.21ರಂದು ರಾಜ್ಯ ಮಟ್ಟದ 'ಜಾನಪದ ಜಾತ್ರೆ'ಯನ್ನು ಶ್ರೀಕ್ಷೇತ್ರ ಮಲೆ ಮಹದೇಶ್ವರಬೆಟ್ಟದಲ್ಲಿ ಆಯೋಜಿಸಿದ್ದು, ಇದಕ್ಕೆ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ಕಲೆಗಳನ್ನು ಪುನಶ್ಚೇತನಗೊಳಿಸಿ ಮತ್ತು ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಸಲುವಾಗಿ 'ಜಾನಪದ ಜಾತ್ರೆ' ಶೀರ್ಷಿಕೆಯಡಿ ಸರ್ಕಾರ ವಿವಿಧ ಪ್ರಕಾರದ ಜಾನಪದ ಕಲೆಗಳನ್ನು ಒಂದೇ ಸೂರಿನಡಿ ಕಲಾವಿದರಿಗೆ ವೇದಿಕೆ ಕಲ್ಪಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು.

ಜಾನಪದ ಜಾತ್ರೆ ಆಯೋಜನೆಗೆ ಮಹದೇಶ್ವರಬೆಟ್ಟ ಆಯ್ಕೆ ಮಾಡಿಕೊಳ್ಳಲಾಗಿದ್ದು, ಜಿಲ್ಲೆಗೆ ಈ ಅವಕಾಶ ದೊರೆತಿರುವುದನ್ನು ಸದುಪಯೋಗಪಡಿಸಿಕೊಳ್ಳಬೇಕು. ರಾಜ್ಯದ ವಿವಿಧ ಜಾನಪದ ಕಲಾತಂಡಗಳನ್ನು ಗುರುತಿಸಿ 40 ರಿಂದ 45 ಕಲಾ ಪ್ರಕಾರಗಳ ತಂಡಗಳಿಗೆ ತರಬೇತಿ ಮತ್ತು ಪ್ರದರ್ಶನಕ್ಕೆ ಅವಕಾಶ ನೀಡಲಾಗುವುದು. ಫೆ.21ರಂದು ಸಂಜೆ ಮಹದೇಶ್ವರಬೆಟ್ಟದ ರಂಗಮಂದಿರದಲ್ಲಿ ಜಾನಪದ ಜಾತ್ರೆ ನಡೆಯಲಿದ್ದು, ಜಿಲ್ಲೆಯ ಜಾನಪದ ಕಲಾವಿದರಿಗೆ ಹೆಚ್ಚಿನ ಅವಕಾಶ ಹಾಗೂ ಆದ್ಯತೆ ನೀಡಬೇಕು. ರಾಜ್ಯದ ವಿವಿಧ ಭಾಗಗಳಿಂದ ಅಂದಾಜು 500 ಕಲಾವಿದರು ಭಾಗವಹಿಸುವ ನಿರೀಕ್ಷೆಯಿದ್ದು, ಎಲ್ಲಾ ಕಲಾವಿದರಿಗೆ ವಾಸ್ತವ್ಯ, ಊಟೋಪಚಾರ ಸೇರಿದಂತೆ ಎಲ್ಲಾ ಸೌಕರ್ಯಗಳನ್ನು ಅಚ್ಚುಕಟ್ಟಾಗಿ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಲಾ ಪ್ರದರ್ಶನಕ್ಕೆ ಬೃಹತ್ ವೇದಿಕೆ, ಉತ್ತಮ ಧ್ವನಿ, ಬೆಳಕು, ವಿನ್ಯಾಸ ಇರಬೇಕು. ಪ್ರದರ್ಶನ ನೀಡಿದ 24 ಗಂಟೆಯೊಳಗೆ ಕಲಾವಿದರ ಬ್ಯಾಂಕ್ ಖಾತೆಗೆ ಸಂಭಾವನೆ ಜಮೆಯಾಗಬೇಕು. ಕಲಾ ಪ್ರದರ್ಶನ ಹಾಗೂ ತಾಲೀಮಿಗಾಗಿ ಕಲಾವಿದರು ಮುಂಚಿತವಾಗಿಯೇ ಆಗಮಿಸಲಿದ್ದಾರೆ. ಇದಕ್ಕೂ ಸೂಕ್ತ ಏರ್ಪಾಡು ಮಾಡಬೇಕು. ಕಾರ್ಯಕ್ರಮ ಸುಸೂತ್ರವಾಗಿ ನಡೆಯಲು ವಿವಿಧ ಸಮಿತಿಗಳನ್ನು ನೇಮಕ ಮಾಡಿ ಜವಾಬ್ದಾರಿ ನೀಡಲಾಗುವುದು. ಶಿಷ್ಟಾಚಾರ ಪ್ರಕಾರ ಆಹ್ವಾನ ಪತ್ರಿಕೆ ಮುದ್ರಣ, ಇನ್ನಿತರ ಪ್ರಕ್ರಿಯೆಗಳನ್ನು ಕೈಗೊಳ್ಳಬೇಕು. ಯಾವುದೇ ಗೊಂದಲವಾಗದಂತೆ ಎಲ್ಲಾ ಸಿದ್ಧತೆ ಕೈಗೊಳ್ಳಬೇಕು. ಜಾನಪದ ಜಾತ್ರೆ ಯಶಸ್ವಿಗೊಳಿಸಲು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಉದಯ್ ಕುಮಾರ್, ಜಾನಪದ ಜಾತ್ರೆಯ ಪ್ರಧಾನ ನಿರ್ದೇಶಕ ಕುಂತೂರು ಕುಮಾರ್, ನಿರ್ದೇಶಕ ಹನುಮಂತನಾಯಕ, ಸಂಚಾಲಕರಾದ ಡಾ.ಸಬ್ಬನಹಳ್ಳಿ ರಾಜು, ಕೆ.ನಾಗರಾಜು, ಹೆಚ್.ಸಿ.ನಿಂಗರಾಜು, ಬಿ.ಅನಿಲ್ ಕುಮಾರ್, ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ್, ಹನೂರು ತಹಸೀಲ್ದಾರ್ ಗುರುಪ್ರಸಾದ್, ತಾಪಂ ಇಓ ಉಮೇಶ್, ಇನ್ನಿತರ ಅಧಿಕಾರಿಗಳು ಇದ್ದರು.



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ಗೌರಮ್ಮ ಬಿ.ರಾಚಯ್ಯ ಸಮಾಧಿಗೆ ಮಠಾಧೀಶರ ನಮನ

ಚಾಮರಾಜನಗರ, ಫೆ.14–ಕೇರಳ ಮಾಜಿ ರಾಜ್ಯಪಾಲ ದಿ.ಬಿ.ರಾಚಯ್ಯನವರ ಪತ್ನಿ ಹಾಗೂ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರ ತಾಯಿ ಗೌರಮ್ಮ ಬಿ.ರಾಚಯ್ಯನವರ ಸಮಾಧಿಗೆ ಹಿಂದುಳಿದ ವರ್ಗಗಳ ವಿವಿಧ ಮಠಾಧೀಶರು ಭೇಟಿ ನೀಡಿ, ಪುಷ್ಪ ನಮನ ಸಲ್ಲಿಸಿದರು.

ತಾಲೂಕಿನ ಆಲೂರು ಗ್ರಾಮಕ್ಕೆ ಶುಕ್ರವಾರ ಭೇಟಿ ನೀಡಿದ ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ, ಹೊಸದುರ್ಗಾ ಭಗೀರಥ ಪೀಠದ ಶ್ರೀ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ ಹಾಗೂ ಹೊಸದುರ್ಗಾ ಕನಕಪೀಠ ಶಾಖಾ ಮಠದ ಶ್ರೀ ಈಶ್ವರನಂದ ಸ್ವಾಮೀಜಿಗಳು ಗೌರಮ್ಮ ಬಿ.ರಾಚಯ್ಯನವರ ಸಮಾಧಿಗೆ ಪೂಜೆ ಸಲ್ಲಿಸಿದರು.

ನಂತರ ಸ್ಮಾರಕದ ವಿನ್ಯಾಸ ಹಾಗೂ ಬಿ.ರಾಚಯ್ಯನವರ ಜೀವನ ಚರಿತ್ರೆ, ವ್ಯಕ್ತಿತ್ವ ಕುರಿತ ಛಾಯಾಚಿತ್ರಗಳನ್ನು ವೀಕ್ಷಿಸಿದರು. ಇದೇ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ವಿವರಣೆ ನೀಡಿದರು.

ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರು, ಮುಖಂಡ ಪು.ಶ್ರೀನಿವಾಸನಾಯಕ, ಜಿಪಂ ಮಾಜಿ ಉಪಾಧ್ಯಕ್ಷರಾದ ಕೊಪ್ಪಾಳಿ ಮಹದೇವ ನಾಯಕ, ಯೋಗೇಶ್, ಚಾಮುಲ್ ನಿರ್ದೇಶಕ ಕಮರವಾಡಿ ರೇವಣ್ಣ ಆಲೂರು ಮಲ್ಲಣ್ಣ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೊಂಗನೂರು ಚಂದ್ರು, ಯಳಂದೂರು ತಾಲೂಕು ಅಧ್ಯಕ್ಷ ಎಸ್.ಪ್ರಭುಪ್ರಸಾದ್, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಆರ್.ರಾಜೇಂದ್ರ, ಮಹದೇವಪ್ರಸಾದ್ ಫಸಿ, ಎಸ್‌ಪಿಕೆ ರಾಜು, ಗ್ರಾಪಂ ಸದಸ್ಯ ರವಿ ಇತರರಿದ್ದರು.



ಆಲೂರು ಗ್ರಾಮಕ್ಕೆ ಭೇಟಿ ನೀಡಿದ ಶ್ರೀ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರನಂದ ಸ್ವಾಮೀಜಿ, ಗೌರಮ್ಮ ಬಿ.ರಾಚಯ್ಯನವರ ಸಮಾಧಿಗೆ ನಮನ ಸಲ್ಲಿಸಿದರು.

ಪ್ರೊ.ಮಲ್ಲಣ್ಣಗೆ ಶಿಶುನಾಳ ಶರೀಫರ ಪ್ರಶಸ್ತಿ



ಪ್ರೊ.ಮಲ್ಲಣ್ಣ

ಕೊಳ್ಳೇಗಾಲ, ಫೆ.14–ಜೂನಿಯರ್ ಕಾಳಿಂಗರಾಯರೆಂದೇ ಖ್ಯಾತರಾದ ಹನೂರು ಕ್ಷೇತ್ರದ ಪ್ರೊ.ಮಲ್ಲಣ್ಣ ಅವರನ್ನು ಸುಗಮ ಸಂಗೀತ ಕ್ಷೇತ್ರದ ಸಾಧನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂತ ಶಿಶುನಾಳ ಶರೀಫರ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಪ್ರಶಸ್ತಿ 5 ಲಕ್ಷ ರೂ. ಒಳಗೊಂಡಿದ್ದು, ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸಂಗೀತ ಕಲೋಪಾಸಕರಾದ ಮಲ್ಲಣ್ಣನವರ ಸಾಧನೆಗೆ ಈಗಾಗಲೇ ಕರ್ನಾಟಕ ಸಂಗೀತ ಅಕಾಡೆಮಿಯ ಕಲಾಶ್ರೀ, ಸುಗಮ ಸಂಗೀತ ಕ್ಷೇತ್ರದ ಭಾವಶ್ರೀ, ಸಿದ್ಧಗಂಗಾ ಮಠದ ಹಳೇ ವಿದ್ಯಾರ್ಥಿ ಸಂಘದ ಶಿವಕುಮಾರಶ್ರೀ, ಹೊಯ್ಸಳ, ರಂಗಾಯಚಾರ್ಯುಲು, ಕನ್ನಡ ಕೋಗಿಲೆ, ಸುಗಮ ಸಂಗೀತ ಪಿತಾಮಹರಾದ ಪಿ.ಕಾಳಿಂಗರಾಯ, ಅಂತಾರಾಷ್ಟ್ರೀಯ ಸಂಸ್ಥೆಯ ಕಲಾಶ್ರೀ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳು ಬಂದಿವೆ.

ಇವರು ವಚನ ಹಾಗೂ ಭಾವಗೀತೆಗಳ ಆರು ಸಿಡಿಗಳಿಗೆ ರಾಗಸಂಯೋಜನೆ ನೀಡದಿ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ. ಕರ್ನಾಟಕ, ಅಮೆರಿಕ, ನ್ಯೂಯಾರ್ಕ್ ಸೇರಿದಂತೆ ವಿವಿಧ ವಿದೇಶಗಳಲ್ಲಿ ಟಿವಿ ಕಾರ್ಯಕ್ರಮ ನೀಡಿ ಕೀರ್ತಿ ಗಳಿಸಿದ್ದಾರೆ.

ಉತ್ಪನ್ನಗಳ ಉದ್ದೇಶದ ಉತ್ತಮ ಕೇಂದ್ರ ಬಜೆಟ್



ಚಾ.ನಗರದಲ್ಲಿ ನಡೆದ ಜಂಟಿ ವಾರದ ಸಭೆಯಲ್ಲಿ ಆರ್ಥಿಕ ತಜ್ಞ ಪ್ರೊ. ಚಿಂತಾಮಣಿ ಬಜೆಟ್ ಅಂಕಿ–ಅಂಶ ನೀಡಿದರು.

ಚಾಮರಾಜನಗರ: ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಈ ಬಾರಿ ದಾಖಲೆ ಬಜೆಟ್ ಮಂಡಿಸಿದ್ದು, ಜನರ ಕೈಯಲ್ಲಿ ದುಡ್ಡು ಕೊಟ್ಟು, ಹೆಚ್ಚು ಉಳಿತಾಯ ಮತ್ತು ಸಾಮಾನ್ಯ ಜನರ ಉತ್ಪನ್ನಗಳ ಹೆಚ್ಚುವಿಕೆಯ ಆರ್ಥಿಕ ಪ್ರಗತಿ ಉದ್ದೇಶವಿಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ ಎಂದು ಆರ್ಥಿಕ ತಜ್ಞ ಪ್ರೊ.ಆರ್.ಎಂ.ಚಿಂತಾಮಣಿ ತಿಳಿಸಿದರು.

ನಗರದಲ್ಲಿ ನಡೆದ ರೋಟರಿ ಕ್ಲಬ್, ರೋಟರಿ ಸಿಲ್ಕ್‌ಸಿಟಿ ಜಂಟಿ ವಾರದ ಸಭೆಯಲ್ಲಿ ಬಜೆಟ್ ಅಂಕಿ–ಅಂಶ ನೀಡಿ ಮಾತನಾಡಿದ ಅವರು, ಈ ಬಾರಿ ಮುಂಗಡ ಪತ್ರದಲ್ಲಿ ತೋರಿಸಿರುವ ಒಟ್ಟು ಖರ್ಚು 50.65 ಲಕ್ಷ ಕೋಟಿಯಾಗಿದೆ. ತೆರಿಗೆ ಆದಾಯ 28.37 ಲಕ್ಷ ಸಾವಿರ ಕೋಟಿ, ಹೊಸ ಸಾಲ 15.49 ಲಕ್ಷ ಕೋಟಿ, ಆಸ್ತಿಗಳ ಬಂಡವಾಳ ಹೂಡಿಕೆ 11.22 ಲಕ್ಷ ಕೋಟಿ, ರಾಜ್ಯ ಸರ್ಕಾರಗಳಿಗೆ ನೀಡುವ ಮೊತ್ತ 4.27 ಲಕ್ಷ ಕೋಟಿ ರೂ. ಹಣಕಾಸಿನ ಶಿಸ್ತಿನ ವಿಚಾರದಲ್ಲಿ ಕೋಶಿಯ ಕೊರತೆಯನ್ನು ರಾಷ್ಟ್ರೀಯ ಒಟ್ಟು ಆದಾಯದ (ಜಿಡಿಪಿ) ಶೇ.4.4ಕ್ಕೆ ಇಳಿಸಲಾಗಿದೆ ಎಂದು ವಿಶ್ಲೇಷಿಸಿದರು.

ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ರೈತರ ಕ್ರೆಡಿಟ್ ಕಾರ್ಡ್ ಸಾಲ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಗಿಗ್ ಕಾರ್ಮಿಕರಿಗೆ 5 ಲಕ್ಷ ಸಾಲ ಸಿಗುವಂತೆ ಕ್ರೆಡಿಟ್ ಕಾರ್ಡ್ ನೀಡಲಾಗುವುದು. ಇವೆಲ್ಲವೂ ಮಧ್ಯಮ ವರ್ಗಕ್ಕೆ ಅನುಕೂಲವಾಗಿದೆ ಎಂದರು. ಸಭೆಯಲ್ಲಿ ರೋಟರಿ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಗುರುಸ್ವಾಮಿ, ಸಿಲ್ಕ್‌ಸಿಟಿ ಅಧ್ಯಕ್ಷ ಮಾಣಿಕ್‌ಚಂದ್ ಸಿರುವಿ, ಕಾರ್ಯದರ್ಶಿ ಶಮಿತ್, ಸದಸ್ಯರಾದ ಶ್ರೀನಿವಾಸಶೆಟ್ಟಿ, ಜಿ.ಆರ್.ಅಶ್ವಥ್ ನಾರಾಯಣ ಇತರರು ಇದ್ದರು.

ಗ್ರಾಮೀಣ ವಿದ್ಯಾರ್ಥಿಗಳ ಸಾಧನೆ ಸ್ಫೂರ್ತಿದಾಯಕ



ಚಾಮರಾಜನಗರದ ಮಹಾಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಖೋ–ಖೋ ಆಟಗಾರ್ತಿ ಚೈತ್ರಾ ಮತ್ತು ಭಾರತೀಯ ಸೇನಾಪಡೆಯ ಡಿ.ಸಿ.ಮೌಲ್ಯ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಫೆ.14–ಗ್ರಾಮೀಣ ಪ್ರದೇಶದ ಮಕ್ಕಳು ಇತ್ತೀಚೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧಿಸುತ್ತಿದ್ದು, ಇವರ ಸಾಧನೆ ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ ಎಂದು ಪರಿಶಿಷ್ಟ ವರ್ಗಗಳ ಇಲಾಖೆ ಕಲ್ಯಾಣಾಧಿಕಾರಿ ಬಿಂದ್ಯಾ ತಿಳಿಸಿದರು.

ನಗರದ ಮಹಾಮನೆಯಲ್ಲಿ ಜಿಲ್ಲಾ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಬೆಳ್ಳಿ ಹಬ್ಬದ ಸಂಭ್ರಮ ಮತ್ತು ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರ ಮಟ್ಟದಲ್ಲಿ ಸಾಧನೆಗೈದ ಇಬ್ಬರು ಇಂದು ನಮ್ಮ ಜೊತೆಯಲ್ಲಿದ್ದಾರೆ. ಒಬ್ಬರು ದೇಶಸೇವೆ ಮತ್ತೊಬ್ಬರು ಕ್ರೀಡೆಯಲ್ಲಿ ಸಾಧನೆ ಮಾಡಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇತ್ತೀಚೆಗೆ ದೊಡ್ಡ ಮಟ್ಟದ ಸಾಧನೆ ಮಾಡಿದ್ದಾರೆ. ಅವರ ಸಾಧನೆ ನಮ್ಮೆಲ್ಲರಿಗೂ ಸ್ಫೂರ್ತಿಯಾಗಬೇಕು ಎಂದು ಹೇಳಿದರು.

ಹೆಣ್ಣು ಮಕ್ಕಳ ನಿಖರವಾದ ಗುರಿಗೆ ಪಾಲಕರು ಪ್ರೋತ್ಸಾಹ ನೀಡಬೇಕು. ಅವರಿಗೆ ಪ್ರೋತ್ಸಾಹ ನೀಡಿದರೆ ಇನ್ನೂ ಬಹುದೊಡ್ಡ ಸಾಧನೆ ಮಾಡುತ್ತಾರೆ ಎಂಬುದಕ್ಕೆ ಖೋ–ಖೋ ಆಟಗಾರ್ತಿ ಚೈತ್ರಾ ಮತ್ತು ಭಾರತೀಯ ಸೇನಾಪಡೆಯ ಡಿ.ಸಿ.ಮೌಲ್ಯ ಅವರೇ ಉದಾಹರಣೆಯಾಗಿದ್ದಾರೆ. ಹೆಣ್ಣು ಮಕ್ಕಳು ಯಾವುದೇ ಹಿಂಜರಿಕೆ ಇಟ್ಟುಕೊಳ್ಳಬಾರದು. ಅವರ ನಿರ್ಧಾರಕ್ಕೆ ನಾವು ಪ್ರೋತ್ಸಾಹ ಕೊಟ್ಟಾಗ ಸಾಧಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವೀರಶೈವ–ಲಿಂಗಾಯತ ಕ್ಷೇಮಾಭಿವೃದ್ಧಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಗೌರಿಶಂಕರ್, ಸಂಗಮ ಗೃಹ ನಿರ್ಮಾಣ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದುಬಸವಣ್ಣ, ಎಸ್‌ಜಿಎಂ ಬೋರ್‌ವೆಲ್ ಮಾಲೀಕ ಲಯನ್ಸ್ ಬಿ.ಎಂ.ಪ್ರಭುಸ್ವಾಮಿ, ಪಟೇಲ್ ಬಜಾಜ್‌ನ ಮಾಲೀಕ ಪಿ.ವೃಷಭೇಂದ್ರಪ್ಪ, ಸಂಘದ ಪದಾಧಿಕಾರಿಗಳು, ಮುಖಂಡರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

DTCP ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿದೆ
ಮೈಸೂರಿನಿಂದ ಕೇವಲ 12 ಕಿಲೋಮೀಟರ್‌ಗಳು ಟಿನರಸೀಪುರ ಹೈವೇಗೆ ಹೊಂದಿಕೊಂಡಂತೆ, ಬಡಾವಣೆ ಕಂಪ್ಲೀಟ್ ಡೆವಲಪ್ಮೆಂಟ್ ಆಗಿರುತ್ತದೆ. ಬ್ಯಾಂಕ್ ಲೋನ್ ನಿಮಗೆ 23 ಲಕ್ಷದವರೆಗೂ ದೊರೆಯುತ್ತದೆ.
Rs.2599/- Sft (Negotiable)
9739739732

rapido BIKE TAXI ಬೇಕಾಗಿದ್ದಾರೆ
ರ‍್ಯಾಪಿಡೋ ಬೈಕ್ ಟ್ಯಾಕ್ಸಿ ಕ್ಯಾಪ್ಟನ್ ಆಗಿ ಸೇರಿ ದಿನಕ್ಕೆ 1000/- ವರೆಗೆ ಗಳಿಸಿ
ಅಗತ್ಯವಿರುವ ದಾಖಲೆಗಳು RC, DL, Android ಮೊಬೈಲ್ ಆಧಾರ/ Pan ಕಾರ್ಡ್, ಸಂಪರ್ಕಿಸಿ:
04048937617

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು & ಹುಡುಗಿಯರು ಬೇಕಾಗಿದ್ದಾರೆ. SSLC / PUC ವಿದ್ಯಾರ್ಹತೆ.
6360359136, 9844163411

VILLA PLOTS FOR SALE
MUDA APPROVED
Different Dimensions
READY TO BUILD
Near NJ Hospital, Yelwala
Site Visit Call Now
MCIL www.mcil.in 97314 00249 99168 44857

ಬೇಕಾಗಿದ್ದಾರೆ
ಹುಣಸೂರು ತಾಲ್ಲೂಕಿನಲ್ಲಿರುವ ಮರದೂರು ಗ್ರಾಮದಲ್ಲಿ ತೋಟವನ್ನು ನೋಡಿಕೊಳ್ಳಲು ಅನುಭವವಿರುವ ಕುಟುಂಬವೊಂದು ಬೇಕಾಗಿದೆ.
Call: 8884359990

COMMERCIAL SPACE FOR RENT
1400 Sq.ft Commercial Space Suitable for Clinic, Diagnostic Center, Financial Institutions, Bank, Service Center etc., at 5th Cross, Thyagaraja Road, (Near JSS Hospital), Mysore
Contact: 90666 61928

REQUIRED FOR A REPUTED DISTRIBUTING COMPANY IN HEBBAL INDUSTRIAL AREA
Marketing Executives - 3 Post
Qualification - Dip.in Mech/ Any Degree - Male Candidates
9448246695
9972029007

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

COMMERCIAL ROOMS AVAILABLE FOR LODGING
27 Rooms with attach bath, Suitable for Lodging, situated at # 43, near Harigovindas Hotel at Devegowda Circle, Mysore with parking, lift facilities, Cauvery water and Bore.
Contact : 96113 84427 / 94480 75383

House Construction
Rs. 1800/Sq.ft. (onwards)
100% ವಾಸ್ತು ಪ್ರಕಾರ ಉತ್ತಮ ಗುಣಮಟ್ಟದ ಮನೆ ನಿರ್ಮಾಣಕ್ಕಾಗಿ ಸಂಪರ್ಕಿಸಿ
Eshwara Construction
9972760501 | 9986859198

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಾರ್ಥಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಮೈಸೂರು ಮತ್ತು ನಂಜನಗೂಡಿಗೆ Area Manager, Training Manager, Field Officer, Security Supervisor ಮತ್ತು Security Gaurdಗಳು ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI ಮತ್ತು PF ಸೌಲಭ್ಯವಿರುತ್ತದೆ. ಕೂಡಲೇ ಸಂಪರ್ಕಿಸಿ:
Shashi Security
9845013610,9880495755
9845162830

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಏರಿಯಾದ ಕಡಕೊಳ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC &ಮೇಲ್ಪಟ್ಟು
ವಯೋಮಿತಿ: 50 ವರ್ಷದೊಳಗೆ
ಸಂಬಳ: 17500 (26days) 8Hours
ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620777819
9620667819

Yelwala SITE FOR SALE
Yelwala Bus Stand Backside, Chikkanalli Main Road
30x40
Brokers Excuse
7760977503

SK CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕನಸಿನ ಮನೆ 3D Plan & Engineer Super Visation ನಲ್ಲಿ ನಾವೇ Loan ಮಾಡಿಸಿ ಹೊಸ ಮನೆ ಕಟ್ಟಿಕೊಡುತ್ತೇವೆ.
9620528490

INVESTOR ಬೇಕಾಗಿದ್ದಾರೆ
Integrated PU Science Residential College ಅಭಿವೃದ್ಧಿಪಡಿಸಲು 1.5 ಕೋಟಿ ವರೆಗೆ Invest ಮಾಡಲು ಆಸಕ್ತರು ಸಂಪರ್ಕಿಸಿರಿ ಕನಿಷ್ಠ 5 ಲಕ್ಷದಿಂದ 20 ಲಕ್ಷದವರೆಗೆ. ಸೂಕ್ತ ಭದ್ರತೆ ಮತ್ತು ಡಿವಿಡೆಂಡ್ ನೀಡಲಾಗುವುದು
ಸಂಪರ್ಕಿಸಿರಿ 7019012485

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಮನೆ ಭೋಗ್ಯಕ್ಕೆ ಇದೆ
HOUSE FOR LEASE 2BHK
ಟೀಚರ್ಸ್ ಲೇಔಟ್ ಸಿದ್ಧಿವಿನಾಯಕ ಬ್ಲಾಕ್ ಯರಗನಹಳ್ಳಿ ರಾಜ್ ಕುಮಾರ್ ರಸ್ತೆ, ಮೈಸೂರು-29. ದಕ್ಷಿಣ ರಸ್ತೆ, ಪೂರ್ವಬಾಗಿಲು. I Floor 30x40
7892376550
8722301336

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
MUDA Approved 30x40 In Bhairava Enclave, 3 km from Bogadi ring road. Attached to Vijayanagara 4th Stage. Just 100 mtrs from Bogadi Gaddige main road.
Price 4,200 per sqft
8792235466, 8884616461

ಸೈಟ್ ಮಾರಾಟಕ್ಕಿದೆ
30x40 East Face
40 ಅಡಿ ರಸ್ತೆ,
2ನೇ ಫೇಸ್
ವಿಜಯನಗರ 4ನೇ ಸ್ಟೇಜ್
9945622196

ಬೇಕಾಗಿದ್ದಾರೆ
Telecallers ಬೇಕಾಗಿದ್ದಾರೆ
Salary Rs. 10000
Contact Arthor Service (P) LTD L-119, 2nd Floor, Panchamanthra Road, Opp. Park, Above-Donne biriyani Hotel, Kuvempunagar-Mysore-570023
ಅನಿಲ್: 7026996123
ಶೇಖರ್: 9945911118

SITES FOR SALE
60x40 feet, East facing at Ahad City, Mysuru, 6 km from Satellite Bus Stand towards Mahadevapura Road, beautiful layout, gated commuity. UGD, electricity, water multiple gardens, tar roads. Contact:
Mob: 9901231117

HOUSE FOR SALE
40x60 ground floor at Saraswathipuram, Ramakrishnanagar, Kuvempunagar, Vijayanagar. * 40x60 G&F floor at Ramakrishnanagar, Bogadi. * 30x40 Duplex at Srirampura.
Call: 7353430309

Commercial Property for Sale
In Beerihundi Circle. 2024 square meters (20 guntas).
Mob: 9740899516

SITE FOR SALE
52x60 S/W Corner site for sale in HPO and RMS Layout, near Dr. Rajkumar Road. Contact:
Mob: 9880344263

45x60 COMMERCIAL SITE
on 60 ft road for sale in KBL Gardenia Layout. Attached to Vijayanagara 4th Stage. Total 2630 sqft. Rs. 4500 per sqft
Price 1.20 crore.
8884616461, 8792235466

ಉಚಿತ ಕಣ್ಣಿನತಪಾಸಣಾ ಶಿಬಿರ ಮೈಸೂರು ರೆಟಿನಾ ಕೇರ್
ದಿನಾಂಕ:- 24/02/2025
ಸಮಯ:- ಸೋಮವಾರ
ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆವರೆಗೆ
ನೋಂದಣಿಗಾಗಿ ಸಂಪರ್ಕಿಸಿ:-
0821-2543244
7338369364
ಬಸ್ ಸಂಖ್ಯೆ:- 69D, 69A, 91B

ನಿವೃತ್ತ ನೌಕರರಿಗೆ ಉದ್ಯೋಗ
ಪ್ರತಿಷ್ಠಿತ ಕಂಪನಿಯಲ್ಲಿ ನಿವೃತ್ತ ನೌಕರರಿಗೆ ಉದ್ಯೋಗಾವಕಾಶಗಳು
ವಿದ್ಯಾರ್ಹತೆ: SSLC ಯಲ್ಲಿ ಉತ್ತೀರ್ಣರಾಗಿರಬೇಕು.
ವೇತನ: ರೂ.10000 ರಿಂದ 30000 ಹಾಗೂ ಇತರೆ ಭತ್ಯೆಗಳು
ಉಚಿತ ವಿದೇಶ ಪ್ರವಾಸ
9886647852

ಬೇಕಾಗಿದ್ದಾರೆ
ಸುಯೋಗ್ ಹಾಸ್ಪಿಟಲ್ ಕ್ಯಾಂಟೀನ್‌ಗೆ ರಾಮಕೃಷ್ಣನಗರ, ಮೈಸೂರು
ಕುಕ್ – 1
ಅಸಿಸ್ಟೆಂಟ್ ಕುಕ್ – 1
ಆಲ್‌ರೌಂಡರ್ – 1
Mob: 9113231780

HOUSE FOR SALE
20x30 Duplex, fully furnished, Mahamane Circle, Dattagalli.
Brokers Excuse
7760981659, 8317413199

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ಶ್ರೀ ಗೌರೀಶಂಕರ ಟ್ರಾವೆಲ್ಸ್
ಮಹಾಕುಂಭ ಯಾತ್ರೆ (5 ದಿನ) ಅಮೃತ ಸ್ನಾನ, ಪ್ರಯಾಗ್ ರಾಜ್, ಕಾಶಿ, ಅಯೋಧ್ಯೆ ದಿನಾಂಕ 24-2-25 (25ನೇ ತಾರೀಖು ಅಮೃತ ಸ್ನಾನ ಪ್ರಯಾಗ್‌ನಲ್ಲಿ) ಕಾಶಿಯಲ್ಲಿ (26ನೇ ತಾರೀಖು ಶಿವರಾತ್ರಿ ಆಚರಣೆ). (ವಿಮಾನ, ಊಟ, ಬಸ್, ರೂಂ)
Mob: 9620002114

SITE FOR SALE
Vijayanagar 4th Stage 20x30, Bannur Road & Narasipura Road.
30x40 & 20x30 available.
Mob: 9448447035

ಹೋಟೆಲ್‌ಗೆ (ಸಸ್ಯಾಹಾರಿ) ಬೇಕಾಗಿದ್ದಾರೆ
ಅಡುಗೆ ಭಟ್ಟರು–25 ಸಾವಿರ ಸಂಬಳ
ಚಾಟ್ – 25 ಸಾವಿರ ಸಂಬಳ
ಸಪ್ಲೈಯರ್+ತರಕಾರಿ ಕಟ್ ಮಾಡುವವರು–15 ಸಾವಿರ ಸಂಬಳ
ತಿಂಗಳಿಗೆ 4 ರಜಾ. ಸಂಪರ್ಕಿಸಿ
9141584958

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 40 ವರ್ಷ
ವಿದ್ಯಾರ್ಹತೆ : 7 ರಿಂದ PUC ಮತ್ತು ITI, ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9035381989

SITE FOR SALE
60x80 West Face, 40 Ft tar road (commercial / residential)
Suncity Homes, Seegally Road. DTCP Approved. 250 mtrs from Hunsur Road NH
Mob: 9019746369

BUILDING FOR SALE / RENT / LEASE
Suitable for Bar & Reestaurant (CL7), Hospital, Hostel, Old age home etc. facing HD Kote Highway & Jayapura, 1600 sq.ft. space in ground floor & 10 rooms with att. Bathroom + 3500 sft open garden area + ample car parking in front.
Total built up area 7500 sq.ft.
Mob: 9148846385

PRAKRUTHI PROPERTIES
SITES FOR SALE
30x40 @ 20 lakhs Near RT Nagar including Registration
20x30 New Duplex House, As Per your Plan With Interiors @ Just 55 Lakh in Bogadi Including Registration
Limited Sites Only
Upto 75% Bank Loan Available
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

BRAND NEW HOUSE FOR SALE
NORTH EAST CONSTRUCTIONS "Turn your Dream into Address"
3 BHK Duplex
20x30 N/F East Door
Next to Ring Road, Opp IPS Srinivasan Layout
Call for Best Price n Special Offers
Call: 98800 65122, 76193 99919

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/ SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಮನೆ ಭೋಗ್ಯಕ್ಕೆ ಇದೆ
ಶ್ರೀರಾಂಪುರ 2ನೇ ಹಂತ, LIC ಲೇಔಟ್ ಗ್ರೌಂಡ್ ಫ್ಲೋರ್ (ಉತ್ತರದಿಕ್ಕು) 5 ಲಕ್ಷ, ಸಿಂಗಲ್ ಬೆಡ್ ರೂಂ
3ನೇ ಫ್ಲೋರ್ (ಪೂರ್ವದಿಕ್ಕು) 10 ಲಕ್ಷ, ಡಬಲ್ ಬೆಡ್ ರೂಂ
(ಎರಡು ಭೋಗ್ಯಕ್ಕೆ ಇದೆ)
ಸತೀಶ್: 9113612442
ಸ್ವಾಮಿ: 9845570573

SITES FOR SALES

"ನ್ಯಾಯಾಂಗ ಬಡಾವಣೆ" ಕೂರ್ಗಳ್ಳಿ North facing	30'x 40'	80 ಲಕ್ಷ
ವಾಜಮಂಗಳ "ಆರಾಧ್ಯ ಗಾರ್ಡೆನಿಯಾ" West facing	40'x 60'	85 ಲಕ್ಷ

Direct Owner / Slightly Negotiable
77950 55551

ಮಾರಾಟಕ್ಕಿದೆ
30x40 ಮನೆ
20x30 ಮನೆ
30x50 ಸೈಟ್
Mob: 9008711654

SITES FOR SALE
MUDA APPROVED
Bank loan available.
Near Ring Road, Opposie to University Layout, Mysore
30x40, 30x50
Mob: 9108528002

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನೆ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

SITE FOR SALE
30x40
30x50
(Bank loan available)
Srirampura Ring Road, Mysore
8050345574

ಮಾರಾಟಕ್ಕಿದೆ
ಬೆಂಗಳೂರಿನಲ್ಲಿ ಪ್ರತಿದಿನ TATA ACE ವಾಹನದಲ್ಲಿ 30 ರಿಂದ 40 ಬೇಕರಿಗಳಿಗೆ ರೆಡ್ ಕಪ್ ಜಾಮೂನ್ ಮತ್ತು ವಿವಿಧ ಬಗೆಯ ಖಾರಾ-ತಿನಿಸುಗಳನ್ನು Supply ಕೊಡುವ ತಿಂಗಳಿಗೆ 4 ಲಕ್ಷ ವ್ಯವಹಾರ ಇರುವ Unit ನ್ನು ಬಿಟ್ಟುಕೊಡುದಿದೆ. ಯಾವುದೇ ಕೆಲಸಗಾರರ ಅವಶ್ಯಕತೆ ಇರುವುದಿಲ್ಲ Goodwill- 6 ಲಕ್ಷ ರೂಪಾಯಿಗಳು, ಆಸಕ್ತರು ಸಂಪರ್ಕಿಸಿ:
9986136988,9980941276

ಹೊಸ ಮನೆ ಮಾರಾಟಕ್ಕಿದೆ
ವಿನಾಯಕ ಗಾರ್ಡನ್ ಸಿಟಿ ಗೋಲ್
S/E 20x30 G Floor & First Floor
Opp ರಾಜಶೇಖರ್ Hospital ಆಲನಹಳ್ಳಿ Signal
9742062636
8310972636

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 13000/(12 ಗಂಟೆಗೆ) ಡೇ ಕೆಲಸ
ವಯಸ್ಸು: 25 ರಿಂದ 60 ರವರೆಗೆ
ಸ್ಥಳ: ಹೆಬ್ಬಾಳ್ (CIPET ಕಾಲೇಜ್ ಮತ್ತು ಪ್ರೀತಿ ಗ್ರಾನೈಟ್)
7483638113

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಸಂಬಳ 10,000) Incentive). Field Executives ಬೇಕಾಗಿದ್ದಾರೆ (ಸಂಬಳ 15,000)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ. ಸಂಪರ್ಕಿಸಿ:
Mob: 8150005111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ROTTIMANE
HOT N FRESH JOWAR ROTTI & ENGAI CURRY AT ROTTIMANE
KEB MAIN ROAD (DUBBLE ROAD) KUVEMPUNAGAR, MYSURU
7204404170

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ಜೆಪಿ.ನಗರ. ವಿದ್ಯಾರ್ಹತೆ :
SSLC PASS or Fail
9538886328

ಸಪ್ಲೈಯರ್ ಬೇಕಾಗಿದ್ದಾರೆ
ವಿರಾಜಪೇಟೆಯ ಬೇಕರಿ ಮತ್ತು ಹೋಟೆಲ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್‌ಗಳು ಹಾಗೂ ಸ್ವೀಟ್ ಮಾಸ್ಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
9986873386

Wanted a house maid/ cleaner in Lakshmipuram
9902420009

ಬೇಕಾಗಿದ್ದಾರೆ
ಸೀರೆ ಅಂಗಡಿಯಲ್ಲಿ ಮತ್ತು ಬೋಟಿಕ್‌ನಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ.
8296695765
7348843351

ಮನೆ ಮಾರಾಟಕ್ಕಿದೆ
30x40 ನಿವೇಶನ, ಪೂರ್ವ ದಿಕ್ಕಿನ ಬಾಗಿಲು, 3BHK ಹೊಸ ಮನೆ ಮಾರಾಟಕ್ಕಿದೆ. ವಸಂತ ನಗರಕ್ಕೆ ಮುಂಚೆ, ವಿದ್ಯಾ ವಿಕಾಸ ಕಾಲೇಜಿಗೆ 5 ನಿಮಿಷದ ನಡಿಗೆ
9845056621

ಹೊಸ ಮನೆ ಭೋಗ್ಯಕ್ಕೆ NEW HOUSE LEASE
ದಟ್ಟಗಳ್ಳಿ ಮೈಲಾರಿ ಹೋಟೆಲ್ ಹಿಂಭಾಗ
GF - 3 Carparking
FF/SF -3 BHK Duplex
9611537157
9986919694

FOR SALE
40X50 South facing Revenue Plot for Sale in Raghavendra Nagara near Government School 4th Cross, Siddhartha layout
Price: 85 Lakhs (Nego)
9731316229

SITE FOR SALE
60x40
Semi Commercial Site University Layout Dattagalli
9916722179

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೂ
9606514441
08214242351

GKV ಡೇ ಕೇರ್ ಸೆಂಟರ್
ನಿಮ್ಮ ಮಕ್ಕಳನ್ನು ನೋಡಿಕೊಳ್ಳಲು ನಾವು ಸಿದ್ಧರಿದ್ದೇವೆ
ಸುರಕ್ಷಿತ ಮತ್ತು ಉತ್ತೇಜಕ ವಾತಾವರಣದಲ್ಲಿ ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಳೆಯಲು ನಮ್ಮ ಡೇ ಕೇರ್ ಅವಕಾಶವನ್ನು ಒದಗಿಸುತ್ತದೆ.
ಹೆಚ್ಚಿನ ವಿಚಾರಕ್ಕಾಗಿ ಈ ನಂಬರಿಗೆ ಕರೆ ಮಾಡಿ
6364926039

ವಧು ಬೇಕಾಗಿದೆ
2ನೇ ಸಂಬಂಧಕ್ಕೆ ಸರ್ಕಾರಿ ನೌಕರಿಯಲ್ಲಿರುವ ವರನಿಗೆ ವಧು ಬೇಕಾಗಿದೆ. ಬ್ರೋಕರ್‌ಗಳಿಗೆ ಅವಕಾಶವಿಲ್ಲ ನೇರವಾಗಿ ಸಂಪರ್ಕಿಸಿ
9019372744

HOUSE FOR RENT
2 bhk, North Phase, 40x60 with Car Parking Opposite to BM Habital Mall Jayalakshmipuram
8197085900
9343562800

ಮುಡಾ ಖಾತಾ ಸೈಟ್ ಮಾರಾಟಕ್ಕಿದೆ
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, ಇ-ಖಾತಾ ಕೂಡ ಆಗಿದೆ. 8.7ಮೀx12 ಮೀ (ಒಟ್ಟು 1124 ಚದುರಡಿ) ಡೈರೆಕ್ಟ್ ಓನರ್ ಪ್ರತಿ ಚದುರಡಿಗೆ 3900 ರೂ.
9342123373

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಲೇಡಿಸ್ ಬ್ಯೂಟಿಕ್‌ಗೆ ಟೈಲರ್ಸ್ ಬೇಕಾಗಿದ್ದಾರೆ.
9844615597

PLOT FOR RENT
5000 SQUARE FEET in Najangud suitable for Godown / Warehouse contact
9620445522

SITE FOR SALE
40X60 N/F ROOPA NAGAR
8861220989

ಉದ್ಯೋಗಾವಕಾಶ
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಖಾಸಗಿ ಸಂಸ್ಥೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿವೃತ್ತರಿಗೆ ಸೆಮಿನಾರ್ ಏರ್ಪಡಿಸಲಾಗಿದೆ. ಸ್ಥಳ: ಹೋಟೆಲ್ ಮಯೂರ ಹೊಯ್ಸಳ ಮೆಟ್ರೋಪೋಲ್ ಸರ್ಕಲ್ ಹತ್ತಿರ. ದಿನಾಂಕ: 17-02-2025 ಸಮಯ: 11.00 ಗಂಟೆಗೆ
(Followed by Lunch) Benifit : Fixed Salary +PF+ESI & Othor Incentive
7353430309

HOUSE FOR SALE
24X30
NORTH FACE, LIG-123, 4ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಲೇಔಟ್ ಮಾರುತಿ ದೇವಸ್ಥಾನದ ಹತ್ತಿರ
9008423578

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ವರುಣ/ವಾಜಮಂಗಲ/ ಜೆಎಸ್‌ಎಸ್/ಬಸವೇಶ್ವರ/ ನಿರ್ಮಾಣ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ/ ಬನ್ನೂರು ರಸ್ತೆ.
9686071750

GODOWN FOR RENT
At Hootagally Industrial Area, Mysore
2500 Sq.ft.
9964450220
9060573900

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಅನಧಿಕೃತ ತಂಬಾಕು ಮಾರಾಟಕ್ಕೆ ಅವಕಾಶ

ತಂಬಾಕು ಬೆಳೆಗಾರರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ

ಹುಣಸೂರು, ಫೆ.14– ಕೇಂದ್ರ ವಾಣಿಜ್ಯ ಸಚಿವ ಪಿಯುಷ್ ಗೋಯಲ್‌ರೊಂದಿಗೆ ಚರ್ಚಿಸಿ ರಾಜ್ಯದ ಅನಧಿಕೃತ ತಂಬಾಕು ಬೆಳೆಗಾರರಿಗೆ ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಮಾರಾಟ ಮಾಡಲು ಅವಕಾಶ ಕಲ್ಪಿಸುವೆ. ಈ ಬಗ್ಗೆ ತಂಬಾಕು ಬೆಳೆಗಾರರು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ತಾಲೂಕಿನ ಗಾವಡಗೆರೆಯಲ್ಲಿ ನಡೆದ ಗುರುಲಿಂಗ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿಯವರ 50ನೇ ವರ್ಷದ ಚರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರು ಬೆಲೆ ಕುಸಿತವಾಗಿ ಸಂಕಷ್ಟದಲ್ಲಿದ್ದ ತಂಬಾಕು ಬೆಳೆಗಾರರಿಗೆ ಹೆಚ್.ಡಿ.ಕುಮಾರಸ್ವಾಮಿಯವರು ನೆರವಾಗಿದ್ದನ್ನು ಸ್ಮರಿಸಿದ ನಂತರ ತಂಬಾಕು ಬೆಳೆಗಾರರು ಸಚಿವರನ್ನು ಸನ್ಮಾನಿಸಿ, ಅನಧಿಕೃತ ಬೆಳೆಗಾರರಿಗೆ ಎಂದಿನಂತೆ ಮಾರಾಟ ಮಾಡಲು ಅವಕಾಶ ಕಲ್ಪಿಸುವ ಕೋರಿಕೆಗೆ ಸಚಿವ ಕುಮಾರಸ್ವಾಮಿಯವರು ಶೀಘ್ರ ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿಯಾಗಿ ಮನವಿ ಮಾಡಿ, ಅನಧಿಕೃತ ಬೆಳೆಗಾರರ ನೆರವಿಗೆ ನಿಲ್ಲುವೆನೆಂದರು.



ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ನಾಡಿನೆಲ್ಲೆಡೆ ಅಕ್ಷರ ಆರೋಗ್ಯ, ದಾಸೋಹದ ಮೂಲಕ ಹಲವು ಮಠಗಳು ತಾಯಿಯಂತೆ ಸದ್ದಯಿಯಾಗಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ. ನಾಡಿನಲ್ಲಿ ಉತ್ತಮ ಬದುಕಿನ ಸಹಬಾಳ್ವೆಗೆ, ತಾಳ್ಮೆ, ಸಹನೆ, ಸಂಸ್ಕೃತಿಗೆ ಒತ್ತು ನೀಡುತ್ತಿರುವ ಮಠಗಳು ಸಮಾಜದ ಆರ್ಥಿಕ ಭದ್ರತೆಗೆ ಕೊಂಡಿಯಾಗಿವೆ ಎಂದರು.

ನಮ್ಮ ಸನಾತನ ಧರ್ಮದ ಉಳಿವಿನಲ್ಲಿ ಮಾನ್ಯ ಮಠಗಳ ಪಾತ್ರ ದೊಡ್ಡದಿದ್ದು, ನಮ್ಮ ದೇಶದ ಸಂಸ್ಕೃತಿ, ಪ್ರೀತಿ, ವಿಶ್ವಾಸ ಬೆಳಸುವ ನಿಟ್ಟಿನಲ್ಲಿ ನಮ್ಮ ಸುತ್ತಲಿನ ಮಠಗಳು, ಜ್ಞಾನವನ್ನು ಪಸರಿಸಿ ಉತ್ತಮ ಪ್ರಜೆಗಳ ನೀಡುವಿಕೆಯಲ್ಲಿ ಮುಂದಿದ್ದು, ಮಠಗಳು ಜನತೆಗೆ ಆಶ್ರಯವಾಗಿ ನಿಂತಿವೆ ಎಂದರೆ ಉತ್ಪ್ರೇಕ್ಷೆಯಲ್ಲ ಎಂದರು.

ಇದೇ ವೇಳೆ ಹೆಚ್.ಡಿ.ಕುಮಾರಸ್ವಾಮಿಯವರು ಶ್ರೀ ಮಠದ ವತಿಯಿಂದ ನಿರ್ಮಿಸಿರುವ 3 ಅಂತಸ್ತಿನ ಶಾಲಾ ಕಟ್ಟಡವನ್ನು ಉದ್ಘಾಟಿಸಿದರು. ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಸಾವಿರ ಮಕ್ಕಳಿಗೆ ವಿದ್ಯಾಭ್ಯಾಸ, ಅನ್ನ, ಅಕ್ಷರ ನೀಡಿ, ತಾಲೂಕಿಗೆ ಮಾದರಿಯಾಗಿ 5 ದಶಕಗಳ ಕಾಲ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಶ್ರೀ ನಟರಾಜ ಸ್ವಾಮಿಗಳ ಸೇವೆ ಅನನ್ಯ ಎಂದರು.

ಸ್ವಾಮೀಜಿಗೆ ಬೆಳ್ಳಿಕಿರೀಟಧಾರಣೆ, ತುಲಾಭಾರ: ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸೇರಿದಂತೆ ಹಲವು ಸ್ವಾಮೀಜಿಗಳು ಹಾಗೂ ಮಠದ ಭಕ್ತರ ಸಮ್ಮುಖದಲ್ಲಿ ಶ್ರೀ ನಟರಾಜಸ್ವಾಮೀಜಿಯವರಿಗೆ ಬೆಳ್ಳಿ ಕಿರೀಟ ಧಾರಣೆ, ರುದ್ರಾಕ್ಷಿ, ಧಾನ್ಯ ಮತ್ತು ನಾಣ್ಯಗಳಿಂದ ತುಲಾಭಾರ ನೆರವೇರಿಸಲಾಯಿತು.

2 ದಿನದ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, 150ಕ್ಕೂ ಹೆಚ್ಚು ಸ್ವಾಮೀಜಿಗಳು ಭಾಗವಹಿಸಿದ್ದರು. ಮೆಲೋಡಿ ಕಿಂಗ್ ರಾಜೇಶ್ ಕೃಷ್ಣನ್ ಅವರ ರಸ ಸಂಜೆ, ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಕಳೆಕಟ್ಟಿತ್ತು. ಸುಮಾರು 25 ಸಾವಿರ ಮಂದಿಗೆ ದಾಸೋಹ ಏರ್ಪಡಿಸಲಾಗಿತ್ತು. ಈ ವೇಳೆ ಎಂಎಲ್‌ಸಿ ವಿಶ್ವನಾಥ್, ಆಡಳಿತಾಧಿಕಾರಿ ಶಿಲ್ಪ, ಮಾಜಿ ಶಾಸಕ ಕೆ.ಮಹದೇವ್, ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ.ಲೋಹಿತ್, ಮುಖಂಡರಾದ ಶ್ರೀಧರ್, ಕಸಾಪ ಅಧ್ಯಕ್ಷ ಮಹದೇವ್, ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ, ಉದ್ದೂರು ಗ್ರಾಪಂ ಅಧ್ಯಕ್ಷ ಶಿವಕುಮಾರ್, ತಾಪಂ ಮಾಜಿ ಸದಸ್ಯ ಶ್ರೀನಿವಾಸ್, ಮಹದೇವ್ ಸೇರಿದಂತೆ ಅನೇಕರಿದ್ದರು.

ಹೆಚ್.ಮಟಕೆರೆ ಡೈರಿಗೆ ಅಧ್ಯಕ್ಷೆ, ಉಪಾಧ್ಯಕ್ಷೆ ಆಯ್ಕೆ



ಹೆಚ್.ಮಟಕೆರೆ ಡೈರಿ ಅಧ್ಯಕ್ಷೆಯಾಗಿ ಸುಶೀಲ, ಉಪಾಧ್ಯಕ್ಷರಾಗಿ ಶ್ಯಾಮಲ ಆಯ್ಕೆಯಾದರು.

ಹೆಚ್.ಡಿ.ಕೋಟೆ, ಫೆ.14– ತಾಲೂಕಿನ ಹೆಚ್.ಮಟಕೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಸುಶೀಲ ವೆಂಕಟೇಶ್, ಉಪಾಧ್ಯಕ್ಷೆಯಾಗಿ ಶ್ಯಾಮಲ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸುಶೀಲ ವೆಂಕಟೇಶ್ ಹಾಗೂ ಸುಜಾತ ಚನ್ನೇಗೌಡ ಉಪಾಧ್ಯಕ್ಷ ಸ್ಥಾನಕ್ಕೆ ಶ್ಯಾಮಲ ಮತ್ತು ಸಾಕಮ್ಮ ನಾಮಪತ್ರ ಸಲ್ಲಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ 7 ಮತಗಳನ್ನು ಪಡೆದು ಸುಶೀಲ ವೆಂಕಟೇಶ್ ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಸುಜಾತ ಚನ್ನೇಗೌಡ 6 ಮತಗಳನ್ನು ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ಯಾಮಲ 7 ಮತಗಳನ್ನು ಪಡೆದು ಉಪಾಧ್ಯಕ್ಷೆಯಾಗಿ ಆಯ್ಕೆಯಾದರೇ, ಸಾಕಮ್ಮ 6 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಚುನಾವಣಾಧಿಕಾರಿಯಾಗಿ ಸಿಡಿಪಿಓ ರೇಣುಕಾ ಕಾರ್ಯ ನಿರ್ವಹಿಸಿದರು.

ಚುನಾವಣೆ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಮಂಜುಳಾ, ಕುಶಾಲಮ್ಮ, ಸೀತಾಲಕ್ಷ್ಮಿ, ಚಿಕ್ಕತಾಯಮ್ಮ, ಸೌಭಾಗ್ಯ, ಶೋಭಾ, ಹುಸ್ನ ಕಾಂತನ್, ಸುಶೀಲ, ವಿಸ್ತರಣಾಧಿಕಾರಿ ಯೋಗೇಶ್ ಭಾಗವಹಿಸಿದ್ದರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಇದೇ ವೇಳೆ ನೂತನ ಅಧ್ಯಕ್ಷೆ–ಉಪಾಧ್ಯಕ್ಷೆಯನ್ನು ಮೈಮುಲ್ ನಿರ್ದೇಶಕ ಈರೇಗೌಡ, ನಿರ್ದೇಶಕರು ಅಭಿನಂದಿಸಿದರು.

ನೂತನ ಅಧ್ಯಕ್ಷೆ ಸುಶೀಲ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘ ಇರುವುದು ರೈತರ ಅನುಕೂಲಕ್ಕಾಗಿ. ಹೀಗಾಗಿ ಎಲ್ಲರ ಸಹಕಾರ, ಮಾರ್ಗದರ್ಶನ ಪಡೆದು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು. ಅಲ್ಲದೇ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ನೀಡುವ ಮೂಲಕ ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದರು.

ಈ ವೇಳೆ ಹೈರಿಗೆ ಗ್ರಾಪಂ ಸದಸ್ಯ ರಾಜೇಶ್, ಮುಖಂಡರಾದ ಕೆಂಪೇಗೌಡ, ಕೃಷ್ಣೇಗೌಡ, ವೆಂಕಟೇಶ್, ಶ್ರೀನಿವಾಸ್, ಗೋಪಾಲ್ ರಾಮು, ಜವರನಾಯಕ, ಮಹದೇವೇಗೌಡ, ಶಂಕರೇಗೌಡ, ಮಾಲೇಗೌಡ, ನಾಗರಾಜು, ಕೃಷ್ಣೇಗೌಡ, ನಾಗಣ್ಣ, ಸಕಲೇಶ್, ಸುಧೀರ್, ಡೈರಿ ಸಿಇಓ ಅಶ್ವಿನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಚಕ್ಕೋಡನಹಳ್ಳಿ ಡೈರಿ ಕಟ್ಟಡ ಕಾಮಗಾರಿಗೆ ಚಾಲನೆ



ಹೆಚ್.ಡಿ.ಕೋಟೆ ಚಕ್ಕೋಡನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಟ್ಟಡ ಕಾಮಗಾರಿಗೆ ಮೈಮುಲ್ ನಿರ್ದೇಶಕರಾದ ಕೆ.ಈರೇಗೌಡ, ದಾಕ್ಷಾಯಿಣಿ ಬಸವರಾಜು ಭೂಮಿಪೂಜೆ ನೆರವೇರಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷೆ ಶಿವಮ್ಮ, ಮಾಜಿ ಪ್ರಧಾನರಾದ ನರಸಿಂಹೇಗೌಡ, ಬಸವರಾಜಪ್ಪ, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ರಾಮಪ್ಪ ಬಾರ್ಕಿ, ಯೋಗೀಶ, ತಾಹೇರ ಗರಗ, ಸಂಘದ ಅಧ್ಯಕ್ಷೆ ಕೆಂಪಮ್ಮ, ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ಲಕ್ಷ್ಮಮ್ಮ, ಸವಿತಾ, ಕಮಲಮ್ಮ, ಭಾಗ್ಯ, ಪಂಕಜ, ಅಕ್ಕಾಜಮ್ಮ, ಮಹದೇವಮ್ಮ, ದೇವಮ್ಮ, ಮುಖಂಡರಾದ ತಿಮ್ಮೇಗೌಡ, ರಂಗೇಗೌಡ, ರಾಮೇಗೌಡ, ಕಾರ್ಯದರ್ಶಿ ಲಲಿತಾಕ್ಷಿ ಉಪಸ್ಥಿತರಿದ್ದರು.

ನಾಳೆ ಕಸಬಾ ಪಿಎಸಿಎಸ್ ಚುನಾವಣೆ

ಡಣಾಯಕನಪುರ ಮಲ್ಲಣ್ಣ ತಂಡದ ಸದಸ್ಯರಿಂದ ಮತಯಾಚನೆ



ಡಣಾಯಕನಪುರ ಮಲ್ಲಣ್ಣ ತಂಡದ ಅಭ್ಯರ್ಥಿಗಳು ಮತಯಾಚಿಸಿದರು.

ತಿ.ನರಸೀಪುರ, ಫೆ14– ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ಫೆ.16ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಹಾಲಿ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ತಂಡದ ಸದಸ್ಯರು ಶುಕ್ರವಾರ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದರು.

ಚುನಾವಣೆಗೆ ಸ್ಪರ್ಧಿಸಿರುವ ಮಲ್ಲಣ್ಣ ತಂಡದ ಸದಸ್ಯರಾದ ಟಿ.ಸಿ.ಫಣೀಶ್ ಕುಮಾರ್, ಎಂ.ಮಹದೇವಯ್ಯ, ಬಿ.ಎಂ.ಮಹದೇವಸ್ವಾಮಿ, ಮಹಾಲಿಂಗಪ್ಪ, ಬಿ.ರಾಘವೇಂದ್ರ, ಎನ್.ಶೇಖರ್ ಹಾಗೂ ಬಿ.ಸುಂದರಸ್ವಾಮಿ ಶುಕ್ರವಾರ ಮತದಾರರ ಪಟ್ಟಿಯಲ್ಲಿರುವ ಸದಸ್ಯರನ್ನು ಪತ್ತೆ ಹಚ್ಚಿ ಮನೆ ಮನೆ ಹಾಗೂ ಅಂಗಡಿಗಳಿಗೆ ತೆರಳಿ ಮತಯಾಚಿಸಿ ತಮಗೆ ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಭಾನುವಾರ ನಡೆಯುವ ಚುನಾವಣೆ ತೀವ್ರ ಕುತೂಹಲ ಕೆರಳಿಸಿದ್ದು, ಹಾಲಿ ಅಧ್ಯಕ್ಷ ಮಲ್ಲಣ್ಣ ಹಾಗೂ ತಿರುಮಕೂಡಲು ಪಿ.ಸ್ವಾಮಿನಾಥನ್ ತಂಡದ ನಡುವೆ ಪೈಪೋಟಿ ಏರ್ಪಡುವ ಸಾಧ್ಯತೆ ಹೆಚ್ಚಿದೆ. ಸಂಘವು ಒಟ್ಟು 12 ನಿರ್ದೇಶಕರ ಬಲ ಹೊಂದಿದ್ದು, ನಾಗರತ್ನಮ್ಮ, ನಾಗಮ್ಮ ಹಾಗೂ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಹಾಲಿ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ 2ನೇ ಬಾರಿಗೆ ಅಧ್ಯಕ್ಷರಾಗಿದ್ದು, ಈ ಬಾರಿ ತಮ್ಮ ತಂಡದೊಂದಿಗೆ ಜಯ ಸಾಧಿಸಿ ಅಧ್ಯಕ್ಷರಾಗಿ ಹ್ಯಾಟ್ರಿಕ್ ಸಾಧಿಸುವ ತುಡಿತ ಹೊಂದಿದ್ದಾರೆ.

ಮತಯಾಚನೆ ವೇಳೆ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳೊಂದಿಗೆ ತಿರುಮಕೂಡಲು ಲಕ್ಷ್ಮಣ, ಸುರೇಶ್, ಭದ್ರಿ, ಅಂಗಡಿ ನಾಗೇಶ್, ಜಯರಾಂ, ಕಿರಗಸೂರು ಪ್ರಭುಸ್ವಾಮಿ, ಎಸ್.ಮಂಜು, ಕುಮಾರ್, ಕೂಡ್ಲೂರು ಅಶೋಕ್, ಗೌರವ್ ಸೇರಿದಂತೆ ಮತ್ತಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ತಿ.ನರಸೀಪುರ, ಫೆ.14– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಾಲೂಕು ಗ್ರಾಮ ಆಡಳಿತಾಧಿಕಾರಿಗಳ ಸಂಘದಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಆಡಳಿತಸೌಧದ ಎದುರು ಜಮಾಯಿಸಿದ ನೌಕರರು ಕರ್ತವ್ಯ ಹಾಜರಾಗದೇ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಗ್ರಾಮ ಆಡಳಿತಾಧಿಕಾರಿಗಳ ಸಂಘದ ಅಧ್ಯಕ್ಷ ನಾಗೇಶ್ ಕುಮಾರ್ ಮಾತನಾಡಿ, ನಮ್ಮ ಬೇಡಿಕೆ ಈಡೇರಿಸುವಂತೆ ಕಳೆದ 3 ತಿಂಗಳ ಹಿಂದೆ ಪ್ರತಿಭಟನೆ ನಡೆಸಲಾಗಿತ್ತು. ಆದರೆ ಇದುವರೆವಿಗೂ ಸರ್ಕಾರ ನಮ್ಮ ಬೇಡಿಕೆ ಈಡೇರಿಸುವ ಬಗ್ಗೆ ಗಮನಹರಿಸಿಲ್ಲ. ಹಾಗಾಗಿ ನಾವು ಪ್ರತಿಭಟನೆ ಮುಂದುವರೆಸಿದ್ದೇವೆ ಎಂದರು.

ಗ್ರಾಮ ಆಡಳಿತಾಧಿಕಾರಿಗಳು ಸುಗಮವಾಗಿ ಕಾರ್ಯ ನಿರ್ವಹಿಸಲು ಮೂಲ ಸೌಕರ್ಯ ಒದಗಿಸಬೇಕು. ಸಂಯೋಜನೆ, ಇ–ಆಫೀಸ್, ಆಧಾರ್ ಸೀಡ್, ಲ್ಯಾಂಡ್ ಬೀಟ್, ಬಗರ್ ಹುಕುಂ, ಹಕ್ಕುಪತ್ರ, ಗರುಡ ಆಪ್, ಭೂಮಿ, ವೋಟ್ ಹೆಲ್ಪ್‌ಲೈನ್, ಬೆಳೆ ಸಮೀಕ್ಷೆ, ಪಿ.ಎಂ.ಕಿಸಾನ್, ಕೃಷಿ, ನೀರಾವರಿ ಗಣತಿ ಮತ್ತು ದಿಶಾಂಕ್ ಸೇರಿದಂತೆ ವಿವಿಧ ತಂತ್ರಾಂಶಗಳಲ್ಲಿ ಕಾರ್ಯ ನಿರ್ವಹಿಸುವಂತೆ ಒತ್ತಡವಿದೆ. ತಂತ್ರಾಂಶಗಳಲ್ಲಿ ಕೆಲಸ ನಿರ್ವಹಿಸಲು ಲ್ಯಾಪ್‌ಟಾಪ್ ನೀಡಿಲ್ಲ. ಕಾರ್ಯ ನಿರ್ವಹಿಸಲು ತಾಂತ್ರಿಕ ಸೌಲಭ್ಯ ನೀಡಿಲ್ಲ. ಹಾಗಾಗಿ ಸರ್ಕಾರದ ನಿರೀಕ್ಷೆಯಂತೆ ಕೆಲಸ ನಿರ್ವಹಿಸಲು ಸೌಲಭ್ಯಗಳನ್ನು ಒದಗಿಸುವಂತೆ ಆಗ್ರಹಿಸಿದರು.

ಸಂಘದ ತಾಲೂಕು ಅಧ್ಯಕ್ಷ ಎಂ.ಎಸ್.ಆನಂದ್ ಮಾತನಾಡಿ, ಅಂತರ ಜಿಲ್ಲಾ ವರ್ಗಾವಣೆಗೆ ಕೆಸಿಆರ್‌ಸಿ ನಿಯಮ '16ಎ' ಅನ್ನು ಮರು ಸ್ಥಾಪಿಸಬೇಕು. ಜೇಷ್ಠತೆ ಆಧಾರದಲ್ಲಿ ಮುಂಬಡ್ತಿ ನೀಡುವುದು. ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿ ಸುವ ವೇಳೆ ಪ್ರಾಣಹಾನಿ ಸಂಭವಿಸಿದಲ್ಲಿ 50 ಲಕ್ಷ ರೂ. ಪರಿಹಾರ, ಪೊಲೀಸ್ ಇಲಾಖೆಯಂತೆ 1 ತಿಂಗಳ ಹೆಚ್ಚುವರಿ ವೇತನ, ಪ್ರಯಾಣ ಭತ್ಯೆ ಹೆಚ್ಚಳ, ಮ್ಯುಟೇಷನ್ ಅವಧಿ ವಿಸ್ತರಣೆ ಮಾಡುವಂತೆ ಒತ್ತಾಯಿಸಿದ ಅವರು, ಇಲಾಖೆಯಲ್ಲಿ ಹಲವು ತಾಂತ್ರಿಕ ಕೆಲಸಗಳನ್ನು ನಿರ್ವಹಿಸುವುದರಿಂದ ನಮ್ಮ ಹುದ್ದೆಯನ್ನು ತಾಂತ್ರಿಕ ಹುದ್ದೆ ಎಂದು ಪರಿಗಣಿಸಬೇಕೆಂದು ಒತ್ತಾಯಿಸಿದರು. ಇದೇ ವೇಳೆ ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ತಾಲೂಕು ಸಂಘದ ಉಪಾಧ್ಯಕ್ಷ ಜಿ.ಶ್ರೀನಿವಾಸ ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವರಾಮು, ಖಜಾಂಚಿ ಜಿ.ಲಕ್ಷ್ಮಿ, ನಿರ್ದೇಶಕರಾದ ವಿಜಯ್, ಅನಿತಾ, ಪ್ರಮೋದ್, ಸಂತೋಷ, ಶ್ರೀನಿವಾಸ್, ಸದ್ದಾಂ ಹುಸೇನ್, ಜಬೀನಾ ಬೇಗಂ, ಸತೀಶ್, ಪ್ರಸನ್ನ, ಸೋಮಶೇಖರ್, ವೆಂಕಟೇಶ್, ಶಿವಣ್ಣ, ಶೃತಿ, ಪದ್ಮಶ್ರೀ, ಚೈತ್ರಾ, ಗೀತಮ್ಮ, ಜಾಹ್ನವಿ, ಕುಸುಮ, ಸಂಧ್ಯಾ, ಅಂಬಿಕಾ, ಸುನೀಲ್, ಮಾನಸ, ನಯನ, ಸಗೇರಪ್ಪ, ಯಶವಂತ್, ಶಿಲ್ಪಾ, ಪ್ರಿಯಾಂಕ, ಅಸ್ಮಾ ಫಿರ್ದೋಸ್, ವಿದ್ಯಾಶ್ರೀ, ನಾಗಮ್ಮ, ಗಂಗಮ್ಮ, ಜಾನಕಿ, ಶಿವರಾಜು ಇತರರಿದ್ದರು.

ತಿ.ನರಸೀಪುರ ಕುಂಭಮೇಳದಲ್ಲಿ ಮಾದಕ ವಸ್ತು ಮಾರಾಟ; ಮೂವರು ಬಂಧನ







ತಿ.ನರಸೀಪುರ, ಫೆ.14– ಕುಂಭಮೇಳದಲ್ಲಿ ಮಾದಕ ವಸ್ತು ತೋರಿಸಿ ಜನರನ್ನು ಆಕರ್ಷಿಸುತ್ತಿದ್ದ ಮೂವರು ಆರೋಪಿಗಳನ್ನು ಪಟ್ಟಣ ಪೊಲೀಸರು ಬಂಧಿಸಿರುವ ಘಟನೆ ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆದಿದೆ.

ಮೈಸೂರಿನ ಶ್ರೀರಾಂಪುರದ ಓಂಪ್ರಕಾಶ್ (44), ರೇಖಾ (33) ಹಾಗೂ ರಾಜಾಸ್ಥಾನದ ಬೇವರ್ ಜಿಲ್ಲೆ ರಾಯ್‌ಪುರ ತಾಲೂಕಿನ ಧೂಳ್‌ಕೋಟ್ ಗ್ರಾಮದ ಪೂಜಾ (20) ಬಂಧಿತ ಆರೋಪಿಗಳು. ಆರೋಪಿಗಳು ತಿರುಮಕೂಡಲಿನ ಶ್ರೀ ಅಗಸ್ತ್ಯೇಶ್ವರಸ್ವಾಮಿ ಸ್ನಾನಘಟ್ಟದ ಬಳಿ ನಿಂತು ಮಾದಕ ವಸ್ತು ಚರಸ್ ತೋರಿಸಿ ಕುಂಭದಲ್ಲಿ ಸ್ನಾನಮಾಡಿ ಮಜಾ ಮಾಡಲು, ಸಂತೋಷಪಡಲು ನಮ್ಮೊಂದಿಗೆ ಬನ್ನಿ ಎಂದು ಭಕ್ತರನ್ನು ಹಿಂದಿ ಭಾಷೆಯಲ್ಲಿ ಹೇಳುತ್ತಾ ಸೆಳೆಯುತ್ತಿದ್ದರು. ಈ ವೇಳೆ ಕರ್ತವ್ಯದಲ್ಲಿದ್ದ ಮುಖ್ಯಪೇದೆ ಪ್ರಭಾಕರ್, ಪೇದೆಗಳಾದ ರತ್ನಮ್ಮ ಹಾಗೂ ಸುದೀಪ್ ಅನುಮಾನಗೊಂಡು ಅವರನ್ನು ವಿಚಾರಿಸಲಾಗಿ ಕೈಯ್ಯಲ್ಲಿದ್ದ ವಸ್ತು ಬಚ್ಚಿಟ್ಟುಕೊಂಡರು. ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದು ವಿಚಾರಣೆಗೊಳಪಡಿಸಲಾಯಿತು. ಈ ವೇಳೆ ಸಂಗಮದಲ್ಲಿ ಕುಂಭಸ್ನಾನ ಮಾಡಿ, ಚರಸ್ ಸೇವಿಸಲು ಬಂದಿರುವುದಾಗಿ ಆರೋಪಿ ರೇಖಾ ತಿಳಿಸಲಾಗಿ ಮಾದಕ ವಸ್ತು ಇಟ್ಟು ಕೊಂಡಿದ್ದ ಹಿನ್ನೆಲೆಯಲ್ಲಿ ಮೂವರ ಮೇಲೆ ಪ್ರಕರಣ ದಾಖಲಿಸಿ 7 ಸಾವಿರ ರೂ.ಗಳ 70 ಗ್ರಾಂ ತೂಕದ ಚರಸ್ ವಶಕ್ಕೆ ಪಡೆದು ಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಂಜನಗೂಡು ಡಿವೈಎಸ್‌ಪಿ ರಘು ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಮುಂದಿನ ಕ್ರಮ ಜರುಗಿಸಿದ್ದಾರೆ.

ಸಿಸಿ ರಸ್ತೆ, ಅಂಬೇಡ್ಕರ್ ಭವನ ಕಾಮಗಾರಿಗೆ ಗುದ್ದಲಿ ಪೂಜೆ

ನಂಜನಗೂಡು, ಫೆ.14– ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದೊಂದಿಗೆ ನಂಜನಗೂಡು ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ಮನವೊಲಿಸಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹರದನಹಳ್ಳಿ, ಹುಲ್ಲಹಳ್ಳಿ, ಮುಳ್ಳೂರು, ನಂಜನಹಳ್ಳಿ, ಚಿಕ್ಕಕವಲಂದೆ, ಮಲ್ಲಹಳ್ಳಿ ಗ್ರಾಮಗಳಲ್ಲಿ ಒಟ್ಟು ಒಂದು ಕೋಟಿ 34 ಲಕ್ಷ ವೆಚ್ಚದ ಸಿಸಿ ರಸ್ತೆ ಮತ್ತು ಅಂಬೇಡ್ಕರ್ ಭವನ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಹುಲ್ಲಹಳ್ಳಿಯಲ್ಲಿ ಅವರು ಮಾತನಾಡಿದರು. ನಮ್ಮ ಸರ್ಕಾರ ಗ್ಯಾರಂಟಿ ಅನುಷ್ಠಾನಗಳ ಜೊತೆಗೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಮುಖ್ಯಮಂತ್ರಿಗಳು ನಂಜನಗೂಡು ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿದ್ದಾರೆ. ಪರಿಣಾಮ 20 ಕೋಟಿ ಅಂದಾಜು ವೆಚ್ಚದಲ್ಲಿ ಹುಲ್ಲಹಳ್ಳಿಯಿಂದ ದುಗ್ಗಹಳ್ಳಿವರೆಗೆ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಇದರೊಂದಿಗೆ 1 ಕೋಟಿ ವೆಚ್ಚದಲ್ಲಿ ಕಪಿಲಾ ನದಿ ತೀರದಲ್ಲಿ ಸೋಪಾನ ನಿರ್ಮಾಣ ಹಾಗೂ ಟಿಎಸ್‌ಪಿ ಅನುದಾನದ 85 ಲಕ್ಷ ರೂ. ವೆಚ್ಚದಲ್ಲಿ ಹುಲ್ಲಹಳ್ಳಿಯ ನಾಯಕ ಸಮುದಾಯದ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗುವುದು. ಜೊತೆಗೆ ರಾಮಮಂದಿರ ಅಭಿವೃದ್ಧಿಗೆ 10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಅಲ್ಪಸಂಖ್ಯಾತ ಇಲಾಖೆಯಿಂದ ನಂಜನಗೂಡು ಕ್ಷೇತ್ರಕ್ಕೆ 5 ಕೋಟಿ ಅನುದಾನ ಮಂಜೂರಾಗಿದ್ದು, ಸ್ಥಳೀಯರ ಮನವಿ ಪರಿಗಣಿಸಿ ಶಾದಿ ಮಹಲ್ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.



ಸಿಸಿ ರಸ್ತೆ, ಅಂಬೇಡ್ಕರ್ ಭವನ ಕಾಮಗಾರಿಗಳಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ 15 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿ, ಹುಲ್ಲಹಳ್ಳಿ ಗ್ರಾಮದಲ್ಲಿ ಟಿಎಸ್‌ಪಿ ಯೋಜನೆಯಡಿ ಎಸ್ಟಿ ಬೀದಿಯಲ್ಲಿ 15 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿ, ಮುಳ್ಳೂರು ಗ್ರಾಮದಲ್ಲಿ 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ನಂಜನಹಳ್ಳಿ ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಭವನ ಕಾಮಗಾರಿ, ತಾಲೂಕಿನ ಚಿಕ್ಕಕವಲಂದೆ ಗ್ರಾಮದಲ್ಲಿ 25 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿ ಸೇರಿದಂತೆ ಒಟ್ಟು 1 ಕೋಟಿ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದ್ದು ಶೀಘ್ರ ಕಾಮಗಾರಿ ಮುಕ್ತಾಯಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಹರದನಹಳ್ಳಿಯಲ್ಲಿ 5 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಸ್ ನಿಲ್ದಾಣವನ್ನು ಉದ್ಘಾಟಿಸಿದರು. ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿ, ಹುಲ್ಲಹಳ್ಳಿ ಸಮಗ್ರ ಅಭಿವೃದ್ಧಿ ಗುರಿಯಾಗಿಸಿಕೊಂಡು ಶಾಸಕರು ಕೆಲಸ ನಿರ್ವಹಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಪಪಂ ಆಗಿ ಮೇಲ್ದರ್ಜೆಗೇರಿಸಲು ಈಗಿನಿಂದಲೇ ಶಾಸಕರು ಸಿದ್ಧತೆ ಕೈಗೊಂಡಿದ್ದಾರೆ ಎಂದರು.

ಇದೇ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಶ್ರೀಕಂಠನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಗ್ರಾಪಂ ಸದಸ್ಯರಾದ ಅನ್ಸರ್ ಅಹಮದ್, ನವೀನ, ಮುಖಂಡರಾದ ಸೋಮೇಶ್, ಅಭಿನಂದನ್ ಪಟೇಲ್, ಚಾಮರಾಜು, ಶ್ರೀನಿವಾಸ ಮೂರ್ತಿ, ಜಯಮಾಲ, ಗಿರೀಶ್, ಎಂ. ಮಾದಪ್ಪ, ರಾಮಣ್ಣ, ಸುರೇಶ್ ಕುಮಾರ್, ರವಿಕುಮಾರ್, ರಾಜೇಶ್, ಮಹೇಂದ್ರ, ರಾಜು, ನಾಗರಾಜು, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಜಾಬಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿರುದ್ಧ ಅವಿಶ್ವಾಸ ಮಂಡನೆ

ಹುಣಸೂರು, ಫೆ.14– ಗ್ರಾಪಂ ಅಧ್ಯಕ್ಷೆಯ ಸರ್ವಾಧಿಕಾರದಿಂದ ಬೇಸತ್ತ ತಾಲೂಕಿನ ಜಾಬಗೆರೆ ಗ್ರಾಪಂ ಉಪಾಧ್ಯಕ್ಷರು ಸೇರಿದಂತೆ ಸದಸ್ಯರು ಅವಿಶ್ವಾಸ ಗೊತ್ತುವಳಿ ಮೂಲಕ ಅಧ್ಯಕ್ಷೆ ಮಂಜುಳಾ ಅವರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಿದ್ದಾರೆ.

ಒಟ್ಟು 12 ಸದಸ್ಯ ಬಲದ ಗ್ರಾಪಂಗೆ ಅಧ್ಯಕ್ಷೆ ಮಂಜುಳಾ ಹಾಗೂ ಪತಿ ತಿಮ್ಮನಾಯಕ ಆಯ್ಕೆಯಾಗಿದ್ದು, ಮೊದಲ ಅವಧಿಗೆ ಅಧ್ಯಕ್ಷೆಯಾಗಿ ಮಂಜುಳಾ, ಉಪಾಧ್ಯಕ್ಷೆಯಾಗಿ ಜಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದರು. ಮಂಜುಳಾ ಅವರು ಅಧ್ಯಕ್ಷೆಯಾದ ಬಳಿಕ ತಮ್ಮ ಪತಿಯೊಂದಿಗೆ ಸೇರಿ ಪಿಡಿಓ ಅವರನ್ನು ಹಿಡಿತದಲ್ಲಿಟ್ಟುಕೊಂಡು ಪ್ರತಿಯೊಂದು ವಿಷಯದಲ್ಲೂ ಉಪಾಧ್ಯಕ್ಷೆ ಸೇರಿದಂತೆ ಸದಸ್ಯರನ್ನು ಕಡೆಗಣಿಸಿ ಎಲ್ಲಾ ನಿರ್ಣಯಗಳನ್ನು ತಾವೇ ತೆಗೆದುಕೊಳ್ಳುತ್ತಿದ್ದರು.



ಮಂಜುಳಾ

ಇದರಿಂದ ಬೇಸತ್ತ ಉಪಾಧ್ಯಕ್ಷರೂ ಸೇರಿದಂತೆ ಸದಸ್ಯರು ಅವಿಶ್ವಾಸ ಗೊತ್ತುವಳಿಗೆ ಮುಂದಾದರು. ಈ ವೇಳೆ ಎಸಿ ಗ್ರಾಪಂ ಕಾಯ್ದೆ ಪ್ರಕಾರ 15 ತಿಂಗಳು ಪೂರ್ಣಗೊಳ್ಳುವವರೆಗೆ ಅವಿಶ್ವಾಸ ಮಂಡಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು.

15 ತಿಂಗಳ ಬಳಿಕ ಅವಿಶ್ವಾಸ ಮಂಡಿಸಿದಾಗ ಅಧ್ಯಕ್ಷರು ಬಹುಮತ ಸಾಬೀತು ಪಡಿಸಲು ಕಾಲಾವಕಾಶ ಕೋರಿ ಸಿವಿಲ್ ನ್ಯಾಯಾಲಯದ ಮೊರೆ ಹೋದರು. 10 ದಿನಗಳಾದರೂ ಬಹುಮತ ಸಾಬೀತುಪಡಿಸದ ಹಿನ್ನೆಲೆಯಲ್ಲಿ ಸಿವಿಲ್ ನ್ಯಾಯಾಲಯ ಅವಿಶ್ವಾಸ ಗೊತ್ತುವಳಿ ಸ್ವೀಕರಿಸಲು ಸೂಚಿಸಿತು. ಅದರಂತೆ ಗ್ರಾಪಂ ಸದಸ್ಯರು ಅವಿಶ್ವಾಸ ಗೊತ್ತುವಳಿಮಂಡಿಸಿ ಅಧ್ಯಕ್ಷ ಸ್ಥಾನದಲ್ಲಿದ್ದ ಮಂಜುಳಾ ಅವರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಿದರು. ಅಧ್ಯಕ್ಷ ಸ್ಥಾನದಿಂದ ಮಂಜುಳಾ ಅವರನ್ನು ಕೆಳಗಿಳಿಸಿದ ಮೇಲೆ ನಮ್ಮ ಗ್ರಾಪಂಗೆ ಹಿಡಿದ ಗ್ರಹಣ ಬಿಟ್ಟಂತಾಗಿದೆ ಎಂದು ಉಪಾಧ್ಯಕ್ಷೆ ಜಯಮ್ಮ, ಸದಸ್ಯರಾದ ಮರಿಗೌಡ, ಮೀನಾಕ್ಷಿ, ಸಿದ್ದರಾಜು, ಮನೋಹರ, ನಾಗೇಗೌಡ, ಪಾಂಡು, ಯಶೋದಾ ಬಾಯಿ, ಸಣ್ಣಮಂಚಮ್ಮ ಹಾಗೂ ಚಿತ್ರ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಿತ್ರ

ವಿಶ್ವದಲ್ಲಿ ಏನೇ ಬದಲಾವಣೆಯಾದರೂ ರೈತ ಬೇಕೇ ಬೇಕು

ರಾಷ್ಟ್ರೀಯ ಸಂಶೋಧನಾ ಸಂಸತ್ ಕುಲಸಚಿವ ಎಸ್.ಕುಮಾರ್ ಅಭಿಮತ

ಮೈಸೂರು, ಫೆ.14(ಬಿಎಲ್‌ಯು)– ಜಗತ್ತಿನಲ್ಲಿ ಆಧುನಿಕವಾಗಿ ಏನೇ ಬದಲಾವಣೆಯಾದರೂ ಅನ್ನ ನೀಡುವ ರೈತ ಬೇಕೆ ಬೇಕು ಎಂದು ಮಂಡ್ಯದ ಮೇಲುಕೋಟೆಯ ರಾಷ್ಟ್ರೀಯ ಸಂಶೋಧನಾ ಸಂಸತ್‌ನ ಕುಲಸಚಿವ ಎಸ್.ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಇಂದು ರೋಡಿಯೋ ಕಿಸಾನ್ ದಿನದ ಅಂಗವಾಗಿ ಆಯೋಜಿಸಿದ್ದ ವೇದ ಕೃಷಿ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ವಿಶ್ವದ ಬೆನ್ನೆಲುಬಾದ ಕೃಷಿ ಪ್ರತಿಯೊಂದಕ್ಕೂ ಆಧಾರವಾಗಿದ್ದು, ಅನ್ನದಾತನ ಮಹತ್ವವನ್ನು ಇದು ಸಾರಿ ಹೇಳುತ್ತದೆ ಎಂದು ತಿಳಿಸಿದರು.

ವೇದ ಕಾಲದ ಕೃಷಿ ಪದ್ಧತಿಯಂತೆ ಮಿಶ್ರ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಕುಮಾರ್ ಅವರು, ವೇದಗಳ ಕಾಲದ ಕೃಷಿ ಮರೆಯಲು ಸಾಧ್ಯವಿಲ್ಲ. ಪ್ರಾಚೀನತೆ ಇದ್ದರೆ ಮಾತ್ರ ನವೀನತೆಗೆ ಅವಕಾಶವಾಗುತ್ತದೆ ಎಂದು ಕುಮಾರ್ ಹೇಳಿದರು.

ಸ್ವಾಸ್ಥ್ಯ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ವೇದ ಕಾಲದಲ್ಲಿ ಹೇಳಿದಂತೆ ಪ್ರಾಚೀನ ಹಾಗೂ ನವೀನ ಪದ್ಧತಿ ಅಳವಡಿಸಿಕೊಳ್ಳಬೇಕು. ಹೊಸತನ ಅಳವಡಿಸುವಾಗ ಹಳೆಯದನ್ನು ಮರೆಯಬಾರದು ಎಂದು ಸಲಹೆ ನೀಡಿದರು.



ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಶುಕ್ರವಾರ ರೋಡಿಯೋ ಕಿಸಾನ್ ದಿನದ ಅಂಗವಾಗಿ ಆಯೋಜಿಸಿದ್ದ ವೇದ ಕೃಷಿ ಕುರಿತ ಕಾರ್ಯಾಗಾರವನ್ನು ಮೇಲುಕೋಟೆಯ ರಾಷ್ಟ್ರೀಯ ಸಂಶೋಧನಾ ಸಂಪತ್‌ನ ಕುಲಸಚಿವ ಎಸ್.ಕುಮಾರ್ ಉದ್ಘಾಟಿಸಿದರು.

ಇಂದು ವಿಶ್ವದ ಕೃಷಿಯಲ್ಲಿ ಏನೇ ಬದಲಾವಣೆ ಆಗುತ್ತಿದ್ದರೂ ರಾಸಾಯನಿಕ ಮುಕ್ತ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳುತ್ತಿದ್ದೇವೆ. ಪ್ರಾಚೀನ ಕೃಷಿ ಪದ್ಧತಿಯಿಂದ ಮಣ್ಣಿನ ಫಲವತತ್ತೆ ಹೆಚ್ಚಾಗುತ್ತದೆ. ಇಲ್ಲಿ ಬೆಳೆಯುವ ಆಹಾರ ಸೇವನೆಯಿಂದ ಆರೋಗ್ಯ ಕಾಪಾಡಬಹುದು ಎಂದು ಹೇಳಿದರು.

ವೇದದ ಕೊಂಡಿ ಇಲ್ಲದ ಜ್ಞಾನ ಪರಂಪರೆ ಸಾಧ್ಯವಿಲ್ಲ. ಮನು ಕುಲಕ್ಕೆ ಅವಶ್ಯವಿರುವ ವಿಚಾರಗಳು ವೇದದಲ್ಲಿದೆ ಎಂದು ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ವೇದಗಳಲ್ಲಿ ವಿಜ್ಞಾನದ ತಿರುಳು ಅಥವಾ ಪ್ರಭಾವವಿರುತ್ತದೆ. ಮಣ್ಣಿನ ಫಲವತ್ತತೆಗಾಗಿ ಈ ಹಿಂದೆಯೇ ಹಸಿರು ಗೊಬ್ಬರ ಬಳಸಲಾಗುತ್ತಿತ್ತು. ಈ ಹಿನ್ನೆಲೆ ವೇದ ಕಾಲದ ಕೃಷಿ ಪರಂಪರೆಯನ್ನು ಈಗಲೂ ಅನುಸರಿಸಲಾಗುತ್ತಿದೆ. ಅಲ್ಲದೆ ಅನ್ನದಾತನ ಬದುಕಿಗೆ ಜೊತೆಯಾಗಿರುವ ಗೋವುಗಳನ್ನು ಪೂಜ್ಯ ಸ್ಥಾನದಲ್ಲಿ ನೋಡಲಾಗುತ್ತಿದೆ ಎಂದರು.

ಭೂಮಿ ಫಲವತ್ತತೆ ಆಧರಿಸಿ ತೆರಿಗೆ ತೀರ್ಮಾನ ಮಾಡಬೇಕೆಂದು ಚಾಣಕ್ಯ ಹೇಳಿರುವುದು ಇದನ್ನು ಸ್ಪಷ್ಟಪಡಿಸುತ್ತದೆ. ವಸ್ತುಗಳ ಮಹತ್ವಕ್ಕೆ ಅನುಗುಣವಾಗಿ ತೆರಿಗೆ ನಿರ್ಧರಿತವಾಗುತ್ತಿತ್ತು. ಮಕ್ಕಳಿಗೆ ಅನ್ನದ ಮಹತ್ವವನ್ನು ತಿಳಿಸಿ ಹೇಳಲಾಗುತ್ತಿತ್ತು ಎಂದು ಹೇಳಿದರು.

ಈ ವೇಳೆ ಮಾತನಾಡಿದ ಮೈಸೂರು ಆಕಾಶವಾಣಿ ಉಪ ನಿರ್ದೇಶಕ ಉಮೇಶ್ ಅವರು, ವಿಶ್ವದಲ್ಲೇ ಏನೇ ಬದಲಾವಣೆ ಹಾಗೂ ಬೆಳವಣಿಗೆಯಾದರೂ ನಮ್ಮ ತಾಯಿ ಬೇರು ಮರೆಯಬಾರದು. ಈ ಸಂಬಂಧ ಆಕಾಶವಾಣಿ ಶ್ರೋತೃಗಳಿಗೆ ಪರಿಣಾಮಕಾರಿ ಅರಿವು ಮೂಡಿಸುತ್ತಿದೆ ಎಂದು ತಿಳಿಸಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿತ್ತು. ಆಯುಶ್ ನಿರ್ದೇಶಕಿ ಪ್ರೊ.ಪುಷ್ಪಾವತಿ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಚಿಂಗಾರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಿದ್ಲಿಂಗು–2 (ಕ)	4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ಛಾವಾ (ಹಿ)	4 ಪ್ರದರ್ಶನಗಳು
ಲಿಡೋ	
ಭುವನಂ ಗಗನಂ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಕೋವಿಡ್ ಹಗರಣದ ತನಿಖೆ ಸಿಐಡಿಗೆ ವಹಿಸಿದ ರಾಜ್ಯ ಸರ್ಕಾರ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋವಿಡ್ ಹಗರಣದ ತನಿಖೆ ಹೊಣೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಇದೀಗ ಸಿಐಡಿಗೆ ವಹಿಸಿದೆ. ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾದ ಎರಡು ತಿಂಗಳ ಬಳಿಕ ಸಿಐಡಿ ತನಿಖೆಗೆ ಆದೇಶಿಸಲಾಗಿದೆ.

ಸಿಐಡಿ ಎಸ್‌ಪಿ ರಾಘವೇಂದ್ರ ಹೆಗಡೆ, ಮೂವರು ಡಿವೈಎಸ್ಪಿ ಗಳನ್ನು ಒಳಗೊಂಡ ತಂಡ ಹಗರಣದ ತನಿಖೆ ನಡೆಸಲಿದೆ. ಡಿಸೆಂಬರ್ 13ರಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ ಡಾ. ಪಿಜಿ ಗಿರೀಶ್, ಲೆಕ್ಕಪತ್ರ ಇಲಾಖೆ ಜಂಟಿ ನಿಯಂತ್ರಕ ಜೆಪಿ ರಘು, ಚುನಾಯಿತ ಪ್ರತಿನಿಧಿಗಳು ಸೇರಿ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಕೋವಿಡ್ ಹಗರಣ ವಿಚಾರ ಕರ್ನಾಟಕ ರಾಜಕೀಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣ ಇತ್ಯಾದಿಗಳ ವಿರುದ್ಧ ಪ್ರತಿಪಕ್ಷ ಬಿಜೆಪಿ ಪ್ರತಿಭಟನೆ ತೀವ್ರಗೊಳಿಸುತ್ತಿದ್ದಂತೆಯೇ, ಹಿಂದಿನ ಬಿಜೆಪಿ ಸರ್ಕಾರದ ಅವಧಿ ಹಗರಣದ ಬಗ್ಗೆ ತನಿಖೆಗೆ ಕಾಂಗ್ರೆಸ್ ಮುಂದಾಗಿತ್ತು.

ಬಳಿಕ ಕೋವಿಡ್ ಅಕ್ರಮದ ತನಿಖೆಗೆ ವಿಶೇಷ ತನಿಖಾ ತಂಡ ರಚಿಸುವ ಬಗ್ಗೆ ಸಚಿವ ಸಂಪುಟ ನಿರ್ಧಾರ ಕೈಗೊಂಡಿತ್ತು ಆದರೆ ಹಗರಣದಲ್ಲಿ ಪ್ರಭಾವಿ ರಾಜಕಾರಣಿಗಳು ಹಾಗೂ ಐಎಎಸ್ ಅಧಿಕಾರಿಗಳ ಹೆಸರು ಪ್ರಸ್ತಾಪವಾಗಿರುವುದರಿಂದ ಎಸ್‌ಐಟಿ ನೇತೃತ್ವ ವಹಿಸಲು ಐಪಿಎಸ್ ಅಧಿಕಾರಿಗಳು ಹಿಂದೇಟು ಹಾಕಿದ್ದರು. ಹೀಗಾಗಿ ಇದೀಗ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶಿಸಿದೆ ಎಂದು ತಿಳಿದು ಬಂದಿದೆ. ಕೋವಿಡ್ ಕಾಲದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಎನ್–95 ಮಾಸ್ಕ್ ಹಾಗೂ ಪಿಪಿಇ ಕಿಟ್ ಸೇರಿದಂತೆ ಇತರ ಉಪಕರಣಗಳ ಖರೀದಿಯಲ್ಲಿ 167 ಕೋಟಿ ರು ಅಕ್ರಮ ನಡೆದಿದೆ ಎಂದು ಆರೋಪಿಸಿ ವಿಧಾನಸೌಧ ಠಾಣೆಗೆ ಡಿ.13 ರಂದು ವೈದ್ಯಕೀಯ ಶಿಕ್ಷಣ ಇಲಾಖೆ ಮುಖ್ಯ ಲೆಕ್ಕಾಧಿಕಾರಿ ಡಾ.ಎಂ. ವಿಷ್ಣುಪ್ರಸಾದ್ ದೂರು ನೀಡಿದ್ದರು.

ಎಂ.ಕೆ.ಸೋಮಶೇಖರ್ ಜನ್ಮದಿನ



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಜನ್ಮದಿನದ ಹಿನ್ನೆಲೆ ವಾರ್ಡ್ ನಂ. 48ರ ಜಯನಗರ –ಚಿನ್ನಗಿರಿಕೊಪ್ಪಲಿನಲ್ಲಿ ಕಾಂಗ್ರೆಸ್ ಮುಖಂಡ ಗಿರೀಶ್ ನೇತೃತ್ವದಲ್ಲಿ ಮಕ್ಕಳಿಗೆ ಪುಸ್ತಕ, ಲೇಖನ ಸಾಮಗ್ರಿಗಳು ಹಾಗೂ ಮಹಿಳೆಯರಿಗೆ ಸೀರೆಗಳನ್ನು ವಿತರಿಸಲಾಯಿತು. ಈ ವೇಳೆ ಮುಖಂಡರಾದ ಅಶೋಕ್‌ಪುರಂ ಜಯರಾಜ್, ಮಹದೇವು, ಅನಿಲ್ ಗೌಡ, ಚಂದ್ರು, ವಿನಯ್, ವಿನೋದ್, ನಾಗೇಗೌಡರು, ಚಿನ್ಮಯ್, ಕುಮಾರ್, ರೆಡ್ಡಿ, ಮಹೇಶ್, ಮಧುರಾಜ್ ಇನ್ನಿತರರು ಉಪಸ್ಥಿತರಿದ್ದರು.

ವಕೀಲರ ಸಂಘಗಳನ್ನು ರಾಜಕೀಯ ವೇದಿಕೆಗಳಾಗಲು ಅವಕಾಶ ನೀಡುವುದಿಲ್ಲ

ಬೆಂಗಳೂರು ವಕೀಲರ ಸಂಘದಲ್ಲಿ ಮೀಸಲಾತಿ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಖಡಕ್ ಹೇಳಿಕೆ

ನವದೆಹಲಿ, ಫೆ.14– ವಕೀಲರ ಸಂಸ್ಥೆಗಳಲ್ಲಿ ಅಂಚಿನಲ್ಲಿರುವ ಸಮುದಾಯಗಳ ವಕೀಲರಿಗೆ ಮೀಸಲಾತಿ ಕೋರಿ ಕರ್ನಾಟಕದ ಕೆಲವು ವಕೀಲರು ಸಲ್ಲಿಸಿರುವ ಅರ್ಜಿ ಗಂಭೀರವಾದದ್ದು ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾ. ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು, ಬಾರ್ ಸಂಸ್ಥೆಗಳಲ್ಲಿ ವೈವಿಧ್ಯತೆ ಮುಖ್ಯವಾದರೂ, ಅಂತಹ ಸಂಸ್ಥೆಗಳು ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಂಗಡಿಸಲಾದ ರಾಜಕೀಯ ವೇದಿಕೆಗಳಾಗಲು ಅವಕಾಶ ನೀಡುವುದಿಲ್ಲ ಎಂಬ ಅಂಶವನ್ನು ನ್ಯಾಯಾಲಯವು ಅರಿತುಕೊಂಡಿದೆ ಎಂದು ಹೇಳಿತು.

ಸಮಸ್ಯೆ ಗಂಭೀರವಾಗಿದೆ ಮತ್ತು ನಾವು ಅದನ್ನು ನಿಭಾಯಿಸಬೇಕು. ಆದರೆ ಜಾತಿ, ಧಾರ್ಮಿಕ ಆಧಾರದ ಮೇಲೆ ಸಂಘವನ್ನು ವಿಭಜಿಸಲು ನಾವು ಬಯಸುವುದಿಲ್ಲ. ನಾವು ಅದನ್ನು ರಾಜಕೀಯ ವೇದಿಕೆಯಾಗಲು ಬಿಡುವುದಿಲ್ಲ. ಅದರ ಬಗ್ಗೆ ಸ್ಪಷ್ಟತೆ ಇದೆ ಎಂದು ನ್ಯಾಯಾಲಯ ಹೇಳಿದೆ.

ಬೆಂಗಳೂರಿನ ವಕೀಲರ ಸಂಘದ ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ ಕೋರಿ ಅಖಿಲ ಭಾರತ ಹಿಂದುಳಿದ ವರ್ಗಗಳ ವಕೀಲರ ಪ್ರತಿಷ್ಠಾನ ಮತ್ತು ಕರ್ನಾಟಕ ಎಸ್‌ಸಿ/ಎಸ್‌ಟಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ವಕೀಲರ ಒಕ್ಕೂಟ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಾಲಯ ನಡೆಸುತ್ತಿದೆ.

ಎಎಬಿ ತನ್ನ ಆಡಳಿತ ಮಂಡಳಿಯಲ್ಲಿ ಕನಿಷ್ಠ 30 ಪ್ರತಿಶತ ಸ್ಥಾನಗಳನ್ನು ಕಾಯ್ದಿರಿಸುವ ಮೂಲಕ ಮಹಿಳಾ ವಕೀಲರ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಿಸಿದ ಇತ್ತೀಚಿನ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲೇಖಿಸಿ ಅರ್ಜಿದಾರರು ಆರಂಭದಲ್ಲಿ ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸಿದ್ದರು. ಆದರೆ, ಹೈಕೋರ್ಟ್ ಅರ್ಜಿಯನ್ನು ತಿರಸ್ಕರಿಸಿ, ಅರ್ಜಿದಾರರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿತು. ಇದು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಕಾರಣವಾಯಿತು.

ಅರ್ಜಿದಾರರ ಪರವಾಗಿ ಹಾಜರಾದ ಹಿರಿಯ ವಕೀಲೆ ಮಾಧವಿ ದಿವಾನ್, ಕಳೆದ 50 ವರ್ಷಗಳಿಂದ ಎಸ್‌ಸಿ/ಎಸ್‌ಟಿ ಸಮುದಾಯದ ಯಾವುದೇ ಸದಸ್ಯರು ಎಎಬಿ ಆಡಳಿತ ಮಂಡಳಿಯ ಸದಸ್ಯರಾಗಿಲ್ಲ. ಇದು ಗಂಭೀರವಾಗಿದೆ ಎಂದು ಹೇಳಿದರು. ಸಂಘದಲ್ಲಿ ವೈವಿಧ್ಯತೆ ಅತ್ಯಗತ್ಯ ಎಂದು ವಾದಿಸಿದರು. ಇದರಿಂದಾಗಿ ಅಂತಹ ಸಮುದಾಯಗಳಿಂದ ಹೆಚ್ಚಿನ ಜನರು ಕಾನೂನು ವ್ಯಾಪ್ತಿಗೆ ಬರುತ್ತಾರೆ ಎಂದರು. ಇದೇ ವೇಳೆ ಆಸ್ಟ್ರೇಲಿಯಾದಂತಹ ನ್ಯಾಯವ್ಯಾಪ್ತಿಗಳ ಪದ್ಧತಿಗಳನ್ನು ಎತ್ತಿ ತೋರಿಸಿದರು.

ರೈತ ಮುಖಂಡ ಕುರುಬೂರು ಶಾಂತಕುಮಾರ್‌ಗೆ ಗಂಭೀರ ಗಾಯ

ನವದೆಹಲಿ: ರೈತ ಮುಖಂಡ ಕುರುಬೂರು ಶಾಂತಕುಮಾರ್ ಪ್ರಯಾಣಿಸುತ್ತಿದ್ದ ಕಾರು ಭೀಕರ ಅಪಘಾತಕ್ಕೀಡಾಗಿದ್ದು, ಶಾಂತ ಕುಮಾರ್ ಗಂಭೀರವಾಗಿ ಗಾಯ ಗೊಂಡಿರುವ ಘಟನೆ ಪಂಜಾಬ್‌ನ ಪಟಿಯಾಲ ಬಳಿ ನಡೆದಿದೆ.



ದೆಹಲಿಯ ಕನೋರಿ ಬಾರ್ಡರ್‌ನಲ್ಲಿ ಕಳೆದ ಒಂದು ವರ್ಷದಿಂದ ರೈತ ಸಂಘಟನೆಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿದ್ದು, ಇಂದು ಮಹತ್ವದ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ರೈತ ಮುಖಂಡ ಕುರುಬೂರು ಶಾಂತಕುಮಾರ್ ತೆರಳುತ್ತಿದ್ದರು.

ಕುರುಬೂರು ಶಾಂತಕುಮಾರ್ ಪ್ರಯಾಣಿಸುತ್ತಿದ್ದ ಕಾರು ಪಂಜಾಬ್‌ನ ಪಟಿಯಾಲ ಬಳಿ ಡಿವೈಡರ್ ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಕುರುಬೂರು ಶಾಂತಕುಮಾರ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರ ಜೊತೆ ಕಾರಿನಲ್ಲಿದ್ದ ತಮಿಳುನಾಡಿನ ರೈತ ಮುಖಂಡ ಪಾಂಡಿಯನ್ ಎಂಬುವವರಿಗೂ ಗಾಯಗಳಾಗಿವೆ. ಸ್ಥಳೀಯರ ಸಹಾಯದಿಂದ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ

ಫೆ.18 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.14– ರಾಜೇಂದ್ರ ಫೀಡರ್ನ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.18 ರಂದು ಬೆಳಿಗ್ಗೆ 10 ರಿಂದ ಸಂಜೆ 6 ವರೆಗೆ ರಾಜೇಂದ್ರನಗರ, ಸುಭಾಷ್‌ನಗರ, ಓ.ಡಿ ಬ್ಲಾಕ್, ಕುರಿಮಂಡಿ ಮತ್ತು ರಾಜೇಂದ್ರನಗರ ಹೊಸ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಿಸ್ಕ್ ಪ್ರಕಟಣೆ ತಿಳಿಸಿದೆ.

ಅಭಿನಂದನೆ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಲದ ಅಧ್ಯಕ್ಷರಾಗಿ ಆಯ್ಕೆಯಾಗಿ ರುವ ಎಸ್. ಚಂದ್ರಶೇಖರ್ ಅವರನ್ನು ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್, ರಾಯಪ್ಪ, ಜನತಾ ಬಜಾರ್ ನಿರ್ದೇಶಕ ಮಂಜು ಹಾಗೂ

ಕೆ.ಬೆಳತ್ತೂರು ಗ್ರಾಮದಲ್ಲಿ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ

ಮೈಸೂರು, ಫೆ. 14– ಹೆಚ್.ಡಿ.ಕೋಟೆ ಸರಗೂರು ತಾಲೂಕಿನ ಕೆ.ಬೆಳತ್ತೂರು ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧಿ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಮಹಾ ರಥೋತ್ಸವ ವನ್ನು ಫೆ 16 ರಂದು ಕುಂಭಮಾಸ, ಹಸ್ತನಕ್ಷತ್ರ ಶುಭದಿವಸ ಬೆಳಿಗ್ಗೆ 10:30 ರಿಂದ 11:02 ರಲ್ಲಿ ಸಲ್ಲುವ ಶುಭ ಮೇಷಲಗ್ನದಲ್ಲಿ ಏರ್ಪಡಿಸಲಾಗಿದೆ. ಅಂದು ಶ್ರೀ ಲಕ್ಷ್ಮಿನರಸಿಂಹ ಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ, ಹೂವಿನ ಅಲಂಕಾರ, ಮಹಾಮಂಗಳಾರತಿ, ರಾಜಬೀದಿಗಳಲ್ಲಿ ದೇವರ ಮೆರವಣಿಗೆ, ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ

ಸಮಯ ಪ್ರಜ್ಞೆಯಿಂದ ಮಹಿಳೆ ಪ್ರಾಣ ಉಳಿಸಿದ ಬಸ್ ಚಾಲಕ; ಹಲವರು ಪ್ರಶಂಸೆ

ಮೈಸೂರು, ಫೆ.14– ಸಾರಿಗೆ ಬಸ್ ಚಾಲಕನ ಸಮಯ ಪ್ರಜ್ಞೆಯಿಂದ ಮಹಿಳೆಯೊಬ್ಬರಿಗೆ ತುರ್ತು ಚಿಕಿತ್ಸೆ ದೊರೆತು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಚನ್ನರಾಜು

ಮೈಸೂರು–ಚಾಮರಾಜನಗರ ಮಾರ್ಗದ ಬಸ್(ಕೆಎ–10, ಎಫ್–0559) ಚಾಲಕ ಹೊಂಗಲವಾಡಿ ಚನ್ನರಾಜು, ಮಹಿಳಾ ಪ್ರಯಾಣಿಕರೊಬ್ಬರ ಜೀವ ಉಳಿಯಲು ಕಾರಣರಾಗಿ ಭಾರೀ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಗುರುವಾರ ಸಂಜೆ ಮೈಸೂರಿನಿಂದ ಚಾಮರಾಜನಗರಕ್ಕೆ ಸಂಚರಿಸುತ್ತಿದ್ದ ಈ ಬಸ್‌ನಲ್ಲಿ ಮೈಸೂರಿನಲ್ಲಿ ಮನೆಗೆಲಸ ಮಾಡಿಕೊಂಡಿರುವ ಸುಂದರಮ್ಮ ತಮ್ಮ 13 ವರ್ಷದ ಮಗಳೊಂದಿಗೆ ಚಾಮರಾಜನಗರಕ್ಕೆ ಹೋಗುತ್ತಿದ್ದರು. ನಂಜನಗೂಡು ಬಿಟ್ಟ ಮೇಲೆ ಸುಂದರಮ್ಮ ದಿಢೀರ್ ಕುಸಿದು ಬಿದ್ದಿದ್ದಾರೆ. ಆಗ ಸಹ ಪ್ರಯಾಣಿಕರು ಅವರನ್ನು ಕೂರಿಸಿ, ಆರೈಕೆ ಮಾಡಿದ್ದಾರೆ. ಆದರೂ ಚೇತರಿಕೆ ಕಾಣದಿದ್ದಾಗ ಎಲ್ಲರಲ್ಲೂ ಆತಂಕ ಮೂಡಿದೆ. ವಿಷಯ ತಿಳಿದ ಬಸ್ ಚಾಲಕ, ವೇಗ ಹೆಚ್ಚಿಸಿದ್ದಾನೆ. ಚಾಮರಾಜನಗರಕ್ಕೆ ತಲುಪಲು ಹೆಚ್ಚು ಸಮಯ ಹಿಡಿಯುತ್ತದೆ ಎಂದು ಮರಿಯಾಲದ ಹುಂಡಿ ಬಳಿ ಇರುವ ಖಾಸಗಿ ಆಸ್ಪತ್ರೆ ಬಳಿ ಸಾಗಿದ್ದಾನೆ. ಗೋಲ್ಡನ್ ಸಮಯದಲ್ಲಿ ಮಹಿಳೆ ಯನ್ನು ಆಸ್ಪತ್ರೆಗೆ ತಲುಪಿಸಿದ್ದರಿಂದ ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪರೀಕ್ಷಿಸಿದ ವೈದ್ಯರು ಲೋ ಬಿಪಿಯಿಂದಾಗಿ ಕುಸಿದು ಬಿದಿದ್ದಾರೆ. ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಕ್ಕಿದ್ದರಿಂದ ಅಪಾಯದಿಂದ ಪಾರಾಗಿದ್ದಾರೆ ಎಂದು ಹೇಳಿದ್ದಾರೆ. ಆ ವೇಳೆ ಪ್ರಯಾಣಿಕರು ಹಾಗೂ ಸಾರ್ವಜನಿಕರು ಚಾಲಕನನ್ನು ಪ್ರಶಂಸಿಸಿದ್ದಾರೆ. ಸದ್ಯ ಸುಂದರಮ್ಮ ಆರೋಗ್ಯವಾಗಿದ್ದಾರೆ ಎಂದು ತಿಳಿದುಬಂದಿದೆ.

ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯಲ್ಲಿ ಆಪರೇಷನ್ ಥಿಯೇಟರ್ ಉದ್ಘಾಟಿಸಿದ ರಾಜವಂಶಸ್ಥೆ ತ್ರಿಷಿಕಾ ಕುಮಾರಿ

ಮನುಷ್ಯರಂತೆ ಪ್ರಾಣಿಗಳಿಗೂ ಭೂಮಿಯಲ್ಲಿ ಬದುಕುವ ಹಕ್ಕಿದೆ

ಮೈಸೂರು,ಫೆ.14(ಎಂಟಿವೈ)– ಮೈಸೂರಿನ ಬೋಗಾದಿಯಲ್ಲಿರುವ ಪೀಪಲ್ಸ್ ಫಾರ್ ಅನಿಮಲ್ಸ್(ಪಿಎಫ್‌ಎ) ಸಂಸ್ಥೆಯಲ್ಲಿ ಆಶ್ರಯ ಹಸ್ತ ಟ್ರಸ್ಟ್ ನೆರವಿನೊಂದಿಗೆ ನೂತನವಾಗಿ ನಿರ್ಮಿಸಿರುವ ಆಪರೇಷನ್ ಥಿಯೇಟರ್ ಅನ್ನು ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಉದ್ಘಾಟಿಸಿದರು.

ಮೈಸೂರಿನ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯಲ್ಲಿ ಅನಾಥ, ಗಾಯಗೊಂಡ ಹಾಗೂ ಅಶಕ್ತ ಪ್ರಾಣಿಗಳನ್ನು ಆರೈಕೆ ಮಾಡಲಾಗುತ್ತಿದ್ದು, ಅಪಘಾತ ಸೇರಿದಂತೆ ವಿವಿಧ ಅನಾರೋಗ್ಯದಿಂದ ಬಳಲುತ್ತಿರುವ ಸಾಕು ಪ್ರಾಣಿಗಳಿಗೆ ಚಿಕಿತ್ಸೆ, ಶಸ್ತ್ರಚಿಕಿತ್ಸೆಗೆ ಸುಸಜ್ಜಿತ ಆಪರೇಷನ್ ಥಿಯೇಟರ್ ಅವಶ್ಯಕತೆ ಇತ್ತು. ಈ ಹಿನ್ನೆಲೆಯಲ್ಲಿ ಆಶ್ರಯ ಹಸ್ತ ಟ್ರಸ್ಟ್ ನೀಡಿದ ನೆರವಿನೊಂದಿಗೆ ನಿರ್ಮಿಸಿರುವ ಆಪರೇಷನ್ ಥಿಯೇಟರ್ ಅನ್ನು ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಆಶ್ರಯ ಹಸ್ತ ಟ್ರಸ್ಟ್ ಟ್ರಸ್ಟೀ ದಿವ್ಯಾ ದಿನೇಶ್ ಪ್ರಾಣಿಗಳ ಸೇವೆಗೆ ಸಮರ್ಪಿಸಿದರು.



ಮೈಸೂರಿನ ಬೋಗಾದಿಯಲ್ಲಿರುವ ಪೀಪಲ್ಸ್ ಫಾರ್ ಅನಿಮಲ್ಸ್(ಪಿಎಫ್‌ಎ) ಸಂಸ್ಥೆಯಲ್ಲಿ ಆಶ್ರಯ ಹಸ್ತ ಟ್ರಸ್ಟ್ ನೆರವಿನೊಂದಿಗೆ ನೂತನವಾಗಿ ನಿರ್ಮಿಸಿರುವ ಆಪರೇಷನ್ ಥಿಯೇಟರ್ ಅನ್ನು ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಉದ್ಘಾಟಿಸಿದರು.

ಇದೇ ವೇಳೆ ಆಶ್ರಯ ಹಸ್ತ ಟ್ರಸ್ಟ್ ಟ್ರಸ್ಟೀ ದಿವ್ಯಾ ದಿನೇಶ್ ಮಾತನಾಡಿ, ಭೂಮಿ ಮೇಲೆ ಮನುಷ್ಯರಂತೆ ಪ್ರತಿಯೊಂದು ಪ್ರಾಣಿಯೂ ಆರೋಗ್ಯಕರ, ಹಿಂಸೆ ಇಲ್ಲದೆ ಬದುಕುವ ಹಕ್ಕನ್ನು ಹೊಂದಿವೆ. ಮೈಸೂರಿನ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆ ಪ್ರಾಣಿಗಳ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬೇಕಾದ ಆಪರೇಷನ್ ಥಿಯೇಟರ್ ನಿರ್ಮಾಣಕ್ಕೆ ಆಶ್ರಯ ಹಸ್ತ ಟ್ರಸ್ಟ್ ನೆರವು ನೀಡಿದೆ. ಇದರಿಂದ ಗಾಯಗೊಂಡ ಸಾಕು ಪ್ರಾಣಿಗಳು ಹಾಗೂ ಕೆಲ ವನ್ಯಪ್ರಾಣಿಗಳಿಗೂ ಸಕಾಲಕ್ಕೆ ಚಿಕಿತ್ಸೆ ನೀಡಬಹುದಾಗಿದೆ. ಪ್ರಾಣಿಗಳ ಮೇಲೆ ದಯೆ, ಸಹಾನುಭೂತಿ ಅಗತ್ಯವಾಗಿದ್ದು, ಮಾನವೀಯತೆಯಿಂದ ಪ್ರಾಣಿಗಳನ್ನು ಕಾಣಬೇಕು. ಈ ನಿಟ್ಟಿನಲ್ಲಿ ಪ್ರಾಣಿಗಳ ಸಂರಕ್ಷಣೆಗೆ ಸಾರ್ವಜನಿಕರು ಬೆಂಬಲ ನೀಡಬೇಕು. ಹೊಸ ಆಪರೇಷನ್ ಥಿಯೇಟರ್‌ನಲ್ಲಿ ವಾರ್ಷಿಕವಾಗಿ 10,000 ಕ್ಕೂ ಹೆಚ್ಚು ಪ್ರಾಣಿಗಳಿಗೆ ಚಿಕಿತ್ಸೆ ನೀಡಬಹುದಾಗಿದೆ ಎಂದರು.

ಮೈಸೂರಿನ ಪ್ರಮುಖ ಪ್ರಾಣಿ ಕಲ್ಯಾಣ ಸಂಸ್ಥೆಯಾದ ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಯಲ್ಲಿ ಗಾಯಗೊಂಡ, ಅನಾರೋಗ್ಯ ಪೀಡಿತ ಪ್ರಾಣಿಗಳನ್ನು ರಕ್ಷಿಸಲು, ಅಗತ್ಯ ಚಿಕಿತ್ಸೆ ನೀಡಿ ಪುನರ್ವಸತಿ ಕಲ್ಪಿಸಲು ಅವಿರತವಾಗಿ ಶ್ರಮಿಸುತ್ತಿದೆ. ತುರ್ತು ವೈದ್ಯಕೀಯ ಆರೈಕೆಯನ್ನು ಒದಗಿಸುತ್ತಿದೆ. ಇದಕ್ಕಾಗಿ ಅಗತ್ಯ ವೈದ್ಯಕೀಯ ಉಪಕರಣಗಳನ್ನು ದಾನ ಮಾಡಿದ್ದಕ್ಕಾಗಿ ಯುಎಸ್‌ಎ ಮೂಲದ ಪಿಎಫ್‌ಎ ಟ್ರಸ್ಟಿ ಡಾ.ಮಾಧವಿ ಮತ್ತು ಎರಡು ಆಪರೇಷನ್ ಟೇಬಲ್ ಕೊಡುಗೆ ನೀಡಿದ ಜೀವ್ ದಯಾ ಜೈನ್ ಚಾರಿಟಿಯ ಕೋಕಿಲಾ ಜೈನ್ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರು ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯ ಮುಖ್ಯಸ್ಥೆ ಸವಿತಾ ನಾಗಭೂಷಣ್, ಸುಪ್ರಿಯಾ, ಜೀವ ದಯಾ ಜೈನ್ ಚಾರಿಟಿಯ ಕೋಕಿಲಾ ಜೈನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಫೆ.18ರಿಂದ ಬೋಗಾದಿ ಪಟ್ಟಣ ಪಂಚಾಯಿತಿಯಲ್ಲಿ ಆಧುನಿಕ ಯಂತ್ರಗಳ ಮೂಲಕ ಸರ್ವೆ ಕಾರ್ಯ

ಮೈಸೂರು, ಫೆ.14–ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ ನಕ್ಷಾ ಯೋಜನೆಯಡಿ ಆಧುನಿಕ ಯಂತ್ರೋಪಕರಣಗಳಿಂದ ಸರ್ವೆ ಮಾಡಲು ಫೆ.18ರಿಂದ ಚಾಲನೆ ನೀಡಲಾಗುವುದು ಎಂದ ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಬಸವರಾಜು ತಿಳಿಸಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಬೋಗಾದಿ ಗ್ರಾಮದ ಬಸ್ ನಿಲ್ದಾಣದ ಹಿಂಭಾಗದ ಬಯಲು ರಂಗಮಂದಿರದಲ್ಲಿ ಕಾರ್ಯಕ್ರಮಕ್ಕೆ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಚಾಲನೆ ನೀಡಲಿದ್ದಾರೆ.

ನಕ್ಷಾ ಯೋಜನೆಯಡಿ ಸರ್ವೆ ಕಾರ್ಯವು ಅತ್ಯಂತ ಆಧುನಿಕ ಯಂತ್ರೋಪಕರಣಗಳಿಂದ ಮಾಡುವ ಕಾರ್ಯವಾಗಿದ್ದು, ಸರ್ವೆ ಕಾರ್ಯಕ್ಕೆ ಬರುವ ಅಧಿಕಾರಿಗಳಿಗೆ ದಾಖಲಾತಿಗಳೊಂದಿಗೆ ಮಾಹಿತಿ ನೀಡುವ ಮೂಲಕ ಸರ್ವೆಗೆ ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಸಾಲಿಗ್ರಾಮ ತಾಲ್ಲೂಕು, ಸಾಲಿಗ್ರಾಮ ಹೋಬಳಿ, ಲಕ್ಕಿಕುಪ್ಪೆ ಗ್ರಾಮದ ಸರ್ವೇ ನಂ. 47 ರಲ್ಲಿ 3 ಎಕರೆ 21 ಗುಂಟೆ, ಕೃಷಿ ಜಮೀನು ಶ್ರೀ. ಜವರಯ್ಯ ಬಿನ್ ಜವರಯ್ಯ ಇವರ ಹೆಸರಿನಲ್ಲಿ ಪಹಣಿ ಹಾಗು ಇತರೆ ದಾಖಲೆಗಳಿದ್ದು, ಸದರಿ ಸ್ವತ್ತನ್ನು ಮೈಸೂರು ನಗರ, ಸುಭಾಷ್ ನಗರ, 7 ನೇ ಅಡ್ಡ ರಸ್ತೆ, ಮನೆ ನಂ. 210 ರಲ್ಲಿ ವಾಸವಾಗಿರುವ, ಶ್ರೀ. ಬಿ.ಕೆ. ಮಂಜುನಾಥ್ ಇವರ ಮಗನಾದ, ಶ್ರೀ. ಬಿ. ಎಂ. ಶಶಿ ಕಿರಣ್ ಇವರು ಖರೀದಿಸಲು ಇಚ್ಛಿಸಿದ್ದು, ಸದರಿ ಸ್ವತ್ತಿಗೆ ಶ್ರೀ. ಜವರಯ್ಯ ಬಿನ್ ಜವರಯ್ಯ ಅಲ್ಲದೆ ಬೇರೆ ಯಾರೇ ಹಕ್ಕುದಾರರು, ಕಾನೂನು ಬದ್ಧ ಹಿತಾಸಕ್ತಿ ಉಳ್ಳವರು, ಸಾರ್ವಜನಿಕರು, ಸಂಬಂಧಿಕರು, ಅಥವಾ ಇನ್ಯಾರೇ ಕಾನೂನು ಬದ್ಧ ಹಕ್ಕುಳ್ಳವರು, ತಕರಾರು ಅಥವಾ ಆಕ್ಷೇಪಣೆ ಸಲ್ಲಿಸಲು ಈ ಪ್ರಕಟಣೆ ದಿನಾಂಕದಿಂದ 07 ದಿನಗಳ ಒಳಗಾಗಿ ಕೆಳಕಂಡ ವಿಳಾಸದಲ್ಲಿ ತಿಳಿಸಿರುವ ವಕೀಲರನ್ನು ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಸಂಪರ್ಕಿಸಲು ಕೋರಲಾಗಿದೆ.

ನಿಗದಿತ ಸಮಯದೊಳಗೆ ಯಾರದೇ ತಕರಾರು ಅಥವಾ ಆಕ್ಷೇಪಣೆ ಬರದಿದ್ದಲ್ಲಿ, ಯಾರಿಂದಲೂ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಖರೀದಿದಾರರು, ಖರೀದಿ ಪ್ರಕ್ರಿಯೆಗೆ ಮುಂದಾಗಿ ಸೂಕ್ತ ಬೆಲೆಯನ್ನು ಶ್ರೀ ಶ್ರೀ. ಜವರಯ್ಯ ಬಿನ್ ಜವರಯ್ಯ ಇವರಿಗೆ ಶುದ್ಧ ಕ್ರಯಪತ್ರ ನೋಂದಾವಣಿ ಮಾಡಿಸಿಕೊಳ್ಳುವರೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಮಂಜು. ಬಿ., ವಕೀಲರು ನಂ.2377,
1ನೇ ಮಹಡಿ ಲಕ್ಷ್ಮೀದೇವಿ ಮೆಡಿಕಲ್,
ಬಿಲ್ಡಿಂಗ್ ಹೊಸ ಕಾಂತರಾಜ ಅರಸು ರಸ್ತೆ,
ಕೆ.ಜಿ. ಕೊಪ್ಪಲು, ಮೈಸೂರು, ಮೊ: 8453489593

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಕಾರ್ಯದರ್ಶಿಯವರ ಕಾರ್ಯಾಲಯ ಚಾಮುಂಡಿಬೆಟ್ಟ, ಮೈಸೂರು–570010
ದೂರವಾಣಿ ಸಂಖ್ಯೆ :0821–2590027
ಇ–ಮೇಲ್ : eochamunditemple@gmail.com
ಸಂಖ್ಯೆ:ಎಸ್.ಸಿ.ಟಿ: 07 ಸಿ.ಆರ್:05/2025–26 ದಿನಾಂಕ: 11.02.2025

ಪ್ರಕಟಣೆ

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಜರುಗುವ ಬೆಳ್ಳಿರಥ, ಚಂಡಿಹೋಮ, ದಾಸೋಹ ಸೇವಾರ್ಥ ಮತ್ತು ಗಣ್ಯವ್ಯಕ್ತಿಗಳಿಗೆ ಗೌರವಾರ್ಥವಾಗಿ ಹೊದಿಸಲು ಬೇಕಾದ ಪಾಲಿಸ್ಟರ್ ಶಾಲುಗಳನ್ನು 2025–2026ನೇ ಸಾಲಿಗೆ ಅಂದರೆ (ದಿನಾಂಕ: 01.04.2025 ರಿಂದ 31.03.2026 ರವರೆಗಿನ ಅವಧಿಗೆ) ಸರಬರಾಜು ಮಾಡಲು ಆಸಕ್ತ ಮಾರಾಟಗಾರರಿಂದ ದರಪಟ್ಟಿಗಳನ್ನು ಕರೆಯಲಾಗಿದ್ದು, 38 ಇಂಚು ಅಗಲ 2 meter ಉದ್ದದ ಒಂದು ಶಾಲಿಗೆ ತಗಲುವ ದರವನ್ನು ನಮೂದಿಸಿ ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪಾಲಿಸ್ಟಾರ್ ಶಾಲುಗಳನ್ನು ಸರಬರಾಜು ಮಾಡಲು ದರಪಟ್ಟಿಗಳನ್ನು ಕರೆಯಲಾಗಿದೆ. ದರಪಟ್ಟಿಗಳನ್ನು ಸಲ್ಲಿಸುವವರು ದಿ: 20.02.2025ರ ಒಳಗಾಗಿ ಸಲ್ಲಿಸಬಹುದಗಿದೆ. ನಂತರ ಬಂದ ದರಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ. 1) 38 ಇಂಚು ಅಗಲ 2 meter ಉದ್ದದ ಉತ್ತಮ ಗುಣಮಟ್ಟದ ಪಾಲಿಸ್ಟರ್ ಶಾಲು 1ಕ್ಕೆ ದರ ನಮೂದಿಸುವುದು.

2) 35 ಇಂಚು ಅಗಲ 2 meter ಉದ್ದದ ಉತ್ತಮ ಗುಣಮಟ್ಟದ ರೇಷ್ಮೇ ಶಾಲು 1ಕ್ಕೆ ದರ ನಮೂದಿಸುವುದು. 3) ಅಂದಾಜು ಮೊತ್ತ ರೂ.2,50,000/– ಇಎಂ,ಡಿ ಮೊತ್ತ ರೂ.5,000/–

ಷರತ್ತುಗಳು: 1) ಉತ್ತಮ ಗುಣಮಟ್ಟದ ಶಾಲುಗಳನ್ನು ಮಾತ್ರ ಸರಬರಾಜು ಮಾಡತಕ್ಕದ್ದು. 2) ಯಾವುದೇ ಕಾರಣಕ್ಕೂ ಸರಬರಾಜುದಾರರಿಗೆ ಮುಂಗಡ ಹಣ ಪಾವತಿಸಲಾಗುವುದಿಲ್ಲ. 3) ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಮೇಲೆ ಬಿಲ್ಲುಗಳನ್ನು ಸಲ್ಲಿಸಿದ ಬಳಿಕ ಪರಿಶೀಲಿಸಿ ಮೊಬಲಗನ್ನು ಅಡ್ಡಗೆರೆಯ ಧನಾದೇಶದ ಮೂಲಕ ಪಾವತಿಸಲಾಗುವುದು. 4) ಇಂಡೆಂಟ್ ನೀಡಿದ ಒಂದು ವಾರದೊಳಗೆ ನಿಮ್ಮ ಸ್ವಂತ ವೆಚ್ಚದಲ್ಲಿ ಶಾಲುಗಳನ್ನು ದೇವಸ್ಥಾನಕ್ಕೆ ಸರಬರಾಜು ಮಾಡಬೇಕು. 5) ಅಂಗೀಕೃತ ಸರಬರಾಜುದಾರರು ಅನುಮೋದಿತ ದರದಲ್ಲಿ ಬೇಡಿಕೆಗಳಿಗೆ ಅನುಗುಣವಾಗಿ ಶಾಲುಗಳನ್ನು ಸರಬರಾಜು ಮಾಡಿ ಬಿಲ್ಲನ್ನು ಸಲ್ಲಿಸಿದೆ ನಂತರ, ಬಿಲ್ಲನ್ನು ಪರಿಶೀಲಿಸಿ ಬಿಲ್ಲಿನ ಮೊತ್ತಕ್ಕೆ ಧನಾದೇಶದ ಮೂಲಕ ಪಾವತಿಸಲಾಗುವುದು. 6) ದರಪಟ್ಟಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಾರ್ಯದರ್ಶಿಗಳು ಕಾಯ್ದಿರಿಸಿಕೊಂಡಿರುತ್ತಾರೆ. 7) ದೇವಾಲಯದ ಜಿ.ಎಸ್.ಟಿ ನಂಬರ್ ನಲ್ಲಿಯೇ ಬಿಲ್ಲನ್ನು ನೀಡಬೇಕು. ಹಾಗೂ ಅದೇ ನಂಬರ್ ನಲ್ಲಿಯೇ ಜಿ.ಎಸ್.ಟಿ ಜಮಾ ಮಾಡಬೇಕು.

ಸಹಿ/– ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ.
DIPR/DDMYS/1291/KSMCA/911/2024-25

Government of Karnataka

District Health & Family Welfare Office, Chamarajanagara
Short Term Tender Schedule 2024-25 & 2025-26

2024–25 ಮತ್ತು 2025–26 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಜಿಲ್ಲಾ ಗುಣಮಟ್ಟ ಖಾತರಿ ಕಾರ್ಯಕ್ರಮದಡಿಯಲ್ಲಿ ಜೈವಿಕ ತ್ಯಾಜ್ಯ ನಿರ್ವಹಣೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಜಿಲ್ಲೆಯ ಎಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಜೈವಿಕ ತ್ಯಾಜ್ಯ ವಿಲೇವಾರಿ ಮಾಡಲು ಆಸಕ್ತಯುಳ್ಳ ಟೆಂಟರ್‌ದಾರರಿಂದ ಇ–Tender ಆಹ್ವಾನಿಸಲಾಗಿದೆ.

• Tender Reference Number	DHFWS/2024-25/SE1263
• Date of publishing Tender Document on e-Procurement platform	12/02/2025
• Pre-Bid Meeting Date	19/02/2025 10.00 AM TO 12. PM
• Last date for submission of tenders	27/2/2025 5:00 PM
• Date and time of opening of Technical bids	28/2/2025 5:00 PM
• Financial Bid Opening Date	03/03/2025 5:00 PM
• EMD Amount	Rs.32000/-
• Address for communication	District & Health & Family Welfare Office, Chamarajanagara MOB: 9448895959

Sd/-District Family Welfare Officer
Chamarajanagara district, Chamarajanagara

Sd/- District & Health & Family Welfare Officer, Chamarajanagara District, Chamarajanagara

ಸಂ:ವಾಸಾಸಂಇ:ಚಾನಗರ:620:2024.25